ಸಂಪುಟ 15
ಸಂಚಿಕೆ 07

ಐಕ್ಯರಂಗ

14 ಫೆಬ್ರವರಿ 1993
ಬೆಲೆ ರೂ. 2.00

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಎಲ್ಲಾ ರ‍್ಯಾಲಿಗಳ ನಿಷೇಧ :

ಹೋರಾಡಲಾರದ ಸರಕಾರದ ಸ್ಥೈರ್ಯವಿಲ್ಲದ ಕ್ರಮ

ಕೋಮುವಾದಿಗಳ ಧಾಳಿಯನ್ನು ಎದುರಿಸುವ ರಾಜಕೀಯ ಇಚ್ಛಾ ಶಕ್ತಿಯಾಗಲೀ ಸ್ಥೈರ್ಯವಾಗಲಿ ತನ್ನಲ್ಲಿ ಇಲ್ಲ ಎಂದು ಹೆಜ್ಜೆ ಹೆಜ್ಜೆಗೂ ತೋರಿಸಿಕೊಟ್ಟಿರುವ ನರಸಿಂಹರಾವ್ ಸರಕಾರ ಫೆಬ್ರವರಿ 25ರಂದು ನಡೆಸಲು ಯೋಜಿಸಿದ್ದ ಬಿಜೆಪಿ ರ‍್ಯಾಲಿಯನ್ನು ನಿಷೇಧಿಸುವ ನೆಪ ಹೂಡಿ ಮುಂದಿನ ಕೆಲವು ತಿಂಗಳ ಕಾಲ ರಾಜಧಾನಿಯಲ್ಲಿ ರ‍್ಯಾಲಿಗಳನ್ನೇ ನಡೆಸಬಾರದು ಎಂದು ಆಜ್ಞೆ ಹೊರಡಿಸುವ ಮೂಲಕ ಜಾತ್ಯಾತೀತ ಶಕ್ತಿಗಳ ಕೈಗಳನ್ನು ಕಟ್ಟಿಹಾಕಿ ಮತ್ತೊಮ್ಮೆ ಅದನ್ನೇ ತೋರಿಸಿಕೊಟ್ಟಿದೆ.

ತಾನೂ ರಾಜಕೀಯವಾಗಿ ಹೋರಾಡುವುದಿಲ್ಲ, ಇತರ ಜಾತ್ಯಾತೀತ ಶಕ್ತಿಗಳು ಹೋರಾಡುವುದೂ ಅದಕ್ಕೆ ಬೇಡವಾಗಿದೆ ಎಂಬುದು ಕೇಂದ್ರ ಗೃಹ ಇಲಾಖೆಯ ಆಜ್ಞೆಯಿಂದ ಸ್ಪಷ್ಟವಾಗಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಜಾಲಂಧರ್‌ನಲ್ಲಿ ಪತ್ರಿಕಾಗೋಷ್ಠಿಯೊಂದನ್ನು ಉದ್ದೇಶಿಸಿ ಮಾತನಾಡುತ್ತಾ ಹೇಳಿದ್ದಾರೆ.

ರಾಷ್ಟ್ರೀಯ ಏಕತಾ ಆಂದೋಲನ ಜನವರಿ ತಿಂಗಳಲ್ಲಿ ಆರಂಭಿಸಿದ ಚಳುವಳಿಗೆ ವ್ಯಾಪಕ ಸ್ಪಂದನ ದೊರೆತಿದ್ದು ಮಾರ್ಚ್ 30ರಂದು ನವದೆಹಲಿಯಲ್ಲಿ ರಾಷ್ಟ್ರೀಯ ಐಕ್ಯತೆಗಾಗಿ ಹಾಗೂ ಕೋಮುವಾದ ವಿರುದ್ಧ ವ್ಯಾಪಕ ಹೋರಾಟದ ಪ್ರತೀಕವಾಗಿ ಬೃಹತ್ ರ‍್ಯಾಲಿಯನ್ನು ಸಂಘಟಿಸಲು ಈಗಾಗಲೇ ನಿರ್ಧರಿಸಿತ್ತು ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಉತ್ತರಪ್ರದೇಶದ ವಾರಣಾಸಿಯಲ್ಲಿ ಫೆ. 2 ರಂದು ನಡೆಯಬೇಕಿದ್ದ ಕೋಮು ಸೌಹಾರ್ದ ರ‍್ಯಾಲಿಗೂ ಅವಕಾಶ ನೀಡಲಿಲ್ಲ, ಆಗ ಬಿಜೆಪಿ ಈ ಬಗ್ಗೆ ಮೌನವಾಗಿತ್ತು ಎಂಬುದನ್ನೂ, ಡಿಸೆಂಬರ್ 6ರ ಮೊದಲು ಲಕ್ನೌನಲ್ಲಿ ಎಡಪಕ್ಷಗಳು, ಜನತಾದಳದ ಮೆರವಣಿಗೆ, ಸಭೆ ನಡೆಯದಂತೆ ಆಗಿನ ಬಿಜೆಪಿ ರಾಜ್ಯ ಸರಕಾರ ತಡೆಯಿತು ಎಂಬುದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು.

ಸಿಪಿಐ(ಎಂ), ಸಿಪಿಐ, ಆರ್‌ಎಸ್‌ಪಿ ಹಾಗೂ ಫಾರ್ವರ್ಡ್ ಬ್ಲಾಕ್ ಒಂದು ಜಂಟಿ ಹೇಳಿಕೆ ನೀಡಿ ಕೇಂದ್ರ ಸರಕಾರದ ಈ ಕ್ರಮವನ್ನು ತೀಕ್ಷ್ಣವಾಗಿ ಖಂಡಿಸಿವೆ. ರ‍್ಯಾಲಿಯನ್ನು ನಿಷೇಧಿಸುವುದು ಕೋಮು ಶಕ್ತಿಗಳ ವಿರುದ್ಧದ ಪರಿಹಾರವಲ್ಲ. ಬಿಜೆಪಿಯಂತಹ ಕೋಮು ಶಕ್ತಿಗಳ ವಿರುದ್ಧ ಜನರನ್ನು ಅಣಿನೆರೆಸಲು ರ‍್ಯಾಲಿಗಳು ಅಗತ್ಯ ಎಂದು ಈ ಜಂಟಿ ಹೇಳಿಕೆಯಲ್ಲಿ ಒತ್ತು ಹಾಕಿ ಹೇಳಲಾಗಿದೆ. ಈ ರೀತಿಯ ಸಾರಾಸಗಟು ನಿಷೇಧದಿಂದ ಬಿಜೆಪಿ ಕೂಟದ ಬಲಸಂವರ್ಧನೆಯಾಗುತ್ತದೆ ಎಂದೂ ಈ ಹೇಳಿಕೆ ಅಭಿಪ್ರಾಯಪಟ್ಟಿದೆ.

"ಎಡಪಕ್ಷಗಳು ಈ ನಿರ್ಧಾರವನ್ನು ತೀಕ್ಷ್ಣವಾಗಿ ಖಂಡಿಸುತ್ತವೆ. ಕೋಮುವಾದ ವಿರೋಧಿ ಸಂಘರ್ಷದಲ್ಲಿ ತಾಟಸ್ಥನ ಎನ್ನುವುದು ತೀರಾ ಅಸಹ್ಯಕರವಾದುದು. ದೇಶದ ಏಕತೆಗೆ ಭಂಗ ಬರುವಂತ ಚಟುವಟಿಕೆಗಳಲ್ಲಿ ತೊಡಗಿರುವ ಕೋಮುವಾದಿ ಶಕ್ತಿಗಳ ವಿರುದ್ಧ ಸಾರ್ವಜನಿಕ ಅಭಿಪ್ರಾಯವನ್ನು ಕ್ರೋಢೀಕರಿಸಲು ಕಾರ್ಮಿಕ ಕ್ಷೇತ್ರಕ್ಕೆ ಇಳಿದಿರುವ ಜಾತ್ಯಾತೀತ ಶಕ್ತಿಗಳೇ ಕೋಮು ಶಕ್ತಿಗಳ ಅಪಾಯಕಾರಿ ಸಂಚುಗಳ ವಿರುದ್ಧ ಏಕೈಕ ಖಾತರಿ ಶಕ್ತಿಯಾಗಿದೆ" ಎಂದು ಹೇಳಿಕೆ ತಿಳಿಸಿದೆ.

ರಾಷ್ಟ್ರೀಯ ಏಕತೆಗಾಗಿ, ಆಧುನಿಕ ಜಾತ್ಯಾತೀತ, ಪ್ರಜಾಪ್ರಭುತ್ವ ಭಾರತದ ತಳಪಾಯವನ್ನೇ ಅಪಾಯಕ್ಕೀಡುಮಾಡುವ ಕೋಮುಶಕ್ತಿಗಳ ವಿರುದ್ಧ ಜನಗಳನ್ನು ರಾಜಕೀಯವಾಗಿ ಅಣಿನೆರೆಸಬೇಕು ಎಂದು ಈ ನಾಲ್ಕು ಎಡಪಕ್ಷಗಳು ಜಾತ್ಯಾತೀತ-ಮನೋಭಾವದ ಭಾರತೀಯರಿಗೆ ಕರೆ ನೀಡಿವೆ.

ಪ್ರಕಾಶ್ ಕಾರಟ್, ಸೀತಾರಾಂ ಯೆಚೂರಿ[ಸಿಪಿಐ(ಎಂ)], ಎ.ಬಿ. ಬರ್ದನ್(ಸಿಪಿಐ), ತ್ರಿದಿಬ್ ಚೌಧರಿ(ಆರ್‌ಎಸ್‌ಪಿ) ಹಾಗೂ ಚಿತ್ತಬಸು(ಫಾರ್ವರ್ಡ್ ಬ್ಲಾಕ್) ಈ ಹೇಳಿಕೆಗೆ ಸಹಿ ಹಾಕಿದ್ದಾರೆ.

ಮಾರ್ಚ್ 1-14 : ಕೋಮುವಾದದ ವಿರುದ್ಧ ತೀವ್ರ ಚಳುವಳಿಗಾಗಿ ರಾಜ್ಯ ಸಮಿತಿ ಕರೆ

ಮಾರ್ಚ್ 1-14 : ನ್ಯಾಯಯುತ ಕನಿಷ್ಠ ಕೂಲಿಗಾಗಿ ರಾಜ್ಯವ್ಯಾಪಿ ಪ್ರಕ್ಷೋಭೆ ಸಿಪಿಐ(ಎಂ) ರಾಜ್ಯಸಮಿತಿ ಕರೆ

ಕರ್ನಾಟಿಕ ರಾಜ್ಯದ ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿಯು ತಾ. 9.2.1993 ರಂದು ಕಾಂ. ಶ್ರೀ ಜಿ. ವಿ. ಶ್ರೀ ರಾಮ ರೆಡ್ಡಿ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ತೀರ್ಮಾನಿಸಿದೆ.

1) ಬಿ.ಜೆ.ಪಿ. ಮತ್ತು ಅದರ ಸಹಚರ ಸಂಘಟನೆಗಳು ನಡೆಸುತ್ತಿರುವ ಕೋಮು ಸೌಹಾರ್ದ ಭಂಜಕ ಅಪಪ್ರಚಾರಗಳನ್ನು ಬಯಲು ಪಡಿಸುವರೆ, ಹಾಗೂ ಈ ಅಪಪ್ರಚಾರಗಳ ಫಲವಾಗಿ ಜನತೆ ನಿಜವಾದ ಜೀವನದ ಪ್ರಮುಖ ಪ್ರಶ್ನೆಗಳು ಹೇಗೆ ಬದಿಗೊತ್ತಲ್ಪಟ್ಟಿವೆ. ಜನಸಾಮಾನ್ಯರ ಜೀವನ ಹಾಗೂ ಕೈಗಾರಿಕೆ, ವ್ಯಾಪಾರ ಇತ್ಯಾದಿ ವ್ಯವಹಾರಗಳು ಹೇಗೆ ಅಘಾತಕ್ಕೊಳಗಾಗುತ್ತಿವೆ ಎಂಬುದನ್ನು ವಿವರಿಸುವರೆ, ಕೇಂದ್ರ ಸರ್ಕಾರದ ಜನ ವಿರೋಧಿ ಆರ್ಥಿಕ ನೀತಿಗಳನ್ನು ಖಂಡಿಸುವರೆ, ಮತ್ತು ಲಕ್ಷಾಂತರ ಕನಿಷ್ಠ ಕೂಲಿಕಾರರಿರುವ ದುಡಿಯುವ ಜನರಿಗೆ ನ್ಯಾಯಯುತ ಕನಿಷ್ಠ ಕೂಲಿ ನಿಗದಿಯಾಗಿ ಅದು ಸಿಗುವಂತೆ ಮಾಡುವರೆ ರಾಜ್ಯಾದ್ಯಂತ ಮಾರ್ಚ್ 1 ರಿಂದ ಮಾರ್ಚ್ 14 ವರೆಗೆ ಎರಡು ವಾರಗಳ ಕಾಲ ನೂರಾರು ಸಭೆಗಳನ್ನು ಜಿಲ್ಲೆಗಳಲ್ಲಿ ಮಾಡುವ ಕಾರ್ಯಕ್ರಮವನ್ನು ರಾಜ್ಯ ಸಮಿತಿಯು ಹಮ್ಮಿಕೊಂಡಿದೆ. ಎಲ್ಲಾ ಸಾಮೂಹಿಕ ಸಂಘಟನೆಗಳು ಪಕ್ಷದ ಈ ಕಾರ್ಯಕ್ರಮದಲ್ಲಿ ಭಾಗವಹಿಸುವುದಕ್ಕೆ ಪಕ್ಷ ಕರೆ ನೀಡಿದೆ.

2) ಕೆ.ಎಸ್.ಆರ್.ಟಿ.ಸಿ ದರಗಳು 25 ಶೇಕಡ ಧಿಡೀರನೆ ಏರಿಸಿ ರಾಜ್ಯ ಸರ್ಕಾರವು ರಾಜ್ಯದ ಜನತೆಗೆ ಅಪಾರ ಅನ್ಯಾಯವೆಸಗಿದೆ. ಕೆ.ಎಸ್.ಆರ್.ಟಿ.ಸಿ.ಯ ಆಡಳಿತದಲ್ಲಿ ಸೂಕ್ತ ಬದಲಾವಣೆಗಳು ತಂದು ಅದರಲ್ಲಾಗುತ್ತಿರುವ ನಷ್ಟಗಳ ನಿರ್ಮೂಲನೆ ಮಾಡಲು- ವಿಕೇಂದ್ರೀಕರಣ, ಭ್ರಷ್ಟ ಅಧಿಕಾರಿಗಳ ವಜಾ ಇತ್ಯಾದಿ- ಕ್ರಮ ಕೈಗೊಳ್ಳುವ ಬದಲು ನಷ್ಟಗಳನ್ನು ಭರ್ತಿ ಮಾಡಲು ಜನತೆಯ ಮೇಲೆ ಇನ್ನಷ್ಟು ಹೊರೆ ಹೊರಿಸುವ ಈ ಕ್ರಮವನ್ನು ಪಕ್ಷವು ತೀವ್ರವಾಗಿ ಖಂಡಿಸುತ್ತದೆ. ಈಗಾಗಲೇ ಪ್ರತಿಯೊಂದು ಜಿಲ್ಲೆಯಲ್ಲಿ ಪಕ್ಷದ ಘಟಕಗಳು, ಸಾಮೂಹಿಕ ಸಂಘಟನೆಗಳು ಪ್ರತಿಭಟನೆಯ ಕಾರ್ಯಕ್ರಮವನ್ನು ಹಾಕಿಕೊಂಡಿರುವುದನ್ನು ಶ್ಲಾಘಿಸುತ್ತಾ ಆದೇಶ ವೇಳೆ ದಿನಾಂಕ 15.2.93 ರಂದು ರಾಜ್ಯದಾದ್ಯಂತ ಎಲ್ಲಾ ಬಸ್‌ಸ್ಟ್ಯಾಂಡ್‌ಗಳಲ್ಲಿ ಕೆ.ಎಸ್.-ಆರ್.ಟಿ.ಸಿ. ಬಸ್ ದರ ಏರಿಕೆಯನ್ನು ಖಂಡಿಸುತ್ತಾ ಸಾಮೂಹಿಕ ಧರಣಿ ಹಾಗೂ ಪಿಕೆಟಿಂಗ್ ಕಾರ್ಯಕ್ರಮವನ್ನು ಹಾಕಬೇಕೆಂದು ಪಕ್ಷದ ರಾಜ್ಯ ಘಟಕವು ಕರೆ ಕೊಟ್ಟಿದೆ.

ಬಜೆಟ್ ಬರುತ್ತಿದೆ, ಎಚ್ಚರಿಕೆ!

- ಎನ್.ಕೆ.ಉಪಾಧ್ಯಾಯ

ಪ್ರತಿ ವರ್ಷ ನವಂಬರ್ ತಿಂಗಳಿಂದ ಮುಂದಿನ ನಾಲ್ಕು ತಿಂಗಳು ಅಂದರೆ ಫೆಬ್ರವರಿ ಕೊನೆಯವರೆಗೆ ಗೃಹಿಣಿಯರು ನಿದ್ದೆಯಿಲ್ಲದೆ ವ್ಯಥೆಯಲ್ಲಿ ಮುಳುಗುವ ದಿನಗಳು. ಬಂಡವಾಳಶಾಹಿ ನೀತಿಯನ್ನು ಅನುಸರಿಸುತ್ತಿರುವ ಕಾಂಗ್ರೆ ಸರಕಾರ ವಾರ್ಷಿಕ ಬಜೆಟ್ ಮಂಡಿಸುವ ಮುಂಚೆಯೇ ನವಂಬರ್-ಡಿಸೆಂಬರ್ ತಿಂಗಳಲ್ಲೇ ಉಕ್ಕು, ಸಿಮೆಂಟ್, ಪೆಟ್ರೋಲ್, ಡೀಸಲ್, ಕಲ್ಲಿದ್ದಲು ಮೊದಲಾದ ವಸ್ತುಗಳ ಬೆಲೆ ಹೆಚ್ಚಿಸಿ ಜನರಿಗೆ ಮೋಸ ಮಾಡುವ ಕ್ರಮ ಕೈಗೊಳ್ಳುತ್ತಾ ಬಂದಿದ್ದಾರೆ. ಒಂದು ಕಡೆ ಆಡಳಿತಾತ್ಮಕ ಆಜ್ಞೆಗಳಿಂದಾಗಿಯೇ ಬೆಲೆ ಹೆಚ್ಚಿಸುತ್ತಾ ಮತ್ತೊಂದೆಡೆಯಲ್ಲಿ ಅಪ್ರತ್ಯಕ್ಷ ಕರ, ಹಾಗೆಯೇ ಇನ್ನಿತರ ಹಲವಾರು ತೆರಿಗೆಗಳ ಮೂಲಕ ಗೃಹಿಣಿಯರು ಕಣ್ಣೀರು ಸುರಿಸುವ ಹಾಗೆ ಮಾಡುತ್ತಾ ಬಂದಿದ್ದಾರೆ.

ಕೇಂದ್ರ-ರಾಜ್ಯ ವಾರ್ಷಿಕ ಬಜೆಟ್‌ಗಳನ್ನು ಮಂಡಿಸಲು ಕೆಲವೇ ದಿವಸಗಳಿರುವಾಗ ಆಡಳಿತಾತ್ಮಕ ರೀತಿಯಲ್ಲಿ ಬೆಲೆ ಹೆಚ್ಚಿಸಿರುವುದು ಪ್ರಜಾಪ್ರಭುತ್ವ ಪದ್ಧತಿಗೆ ವಿರೋಧವಾದ ಕ್ರಮ. ಈ ಕ್ರಮದಿಂದಾಗಿ ವಿರೋಧ ಪಕ್ಷಗಳಿಗಾಗಲೀ ಸಾರ್ವಜನಿಕರಿಗಾಗಲೀ ಅಭಿಪ್ರಾಯ ವ್ಯಕ್ತ ಮಾಡಲು ಅವಕಾಶವೇ ಇಲ್ಲದಂತಾಗುತ್ತದೆ. ಇಂಥ ಕ್ರಮ ಕೈಬಿಡುವಂತೆ ಮಾಡುವುದು ಅತ್ಯಗತ್ಯ. ಬಂಡವಾಳಶಾಹಿ ಆರ್ಥಿಕ ನೀತಿಯ ದೋಷಗಳಲ್ಲಿ ಇದೊಂದು.

ನಮ್ಮ ದೇಶದಲ್ಲಿಯೇ ಕರ್ನಾಟಕವನ್ನೊಳಗೊಂಡು ಕಾಂಗ್ರೆ ಪಕ್ಷ ಆಡಳಿತ ನಡೆಸುತ್ತಿರುವ ರಾಜ್ಯಗಳಲ್ಲಿ ಬಜೆಟ್ ಅಧಿವೇಶನಕ್ಕೆ ಮುಂಚಿತವಾಗಿಯೇ ಕೆಲವು ವಸ್ತುಗಳ ಬೆಲೆ ಹೆಚ್ಚಿಸುತ್ತಿರುವುದನ್ನು ಕಾಣುತ್ತಿದ್ದೇವೆ. ಆದರೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಪಶ್ಚಿಮ ಬಂಗಾಳದ ಎಡರಂಗ ಸರಕಾರವಾಗಲೀ, ತ್ರಿಪುರಾದ ಎಡರಂಗ ಸರಕಾರವಾಗಲೀ ಕೇರಳದ ಎಡ ಪ್ರಜಾಪ್ರಭುತ್ವ ರಂಗ ಸರಕಾರವಾಗಲೀ ತನ್ನ ಆಡಳಿತೆಯ ಕಾಲಾವಧಿಯಲ್ಲಿ ಬಜೆಟ್ ಮುಂಚೆ ಆಡಳಿತಾತ್ಮಕ ರೀತಿಯಲ್ಲಿ ಬೆಲೆ ಹೆಚ್ಚಿಸಿಲ್ಲ, ಪಶ್ಚಿಮ ಬಂಗಾಳ ಸರಕಾರ ಈಗಲೂ ಕೂಡಾ ಆ ರೀತಿ ಮಾಡುತ್ತಿಲ್ಲ ಎಂಬುದನ್ನು ಗಮನಿಸಬೇಕಾಗಿದೆ. ಆದರಿಂದ ಬಂಡವಾಳಶಾಹೀ ಪಕ್ಷಗಳ ಆಡಳಿತ ನೀತಿ ಮತ್ತು ಸಿಪಿಐ(ಎಂ) ಎಡಪಕ್ಷಗಳ ಆಡಳಿತ ನೀತಿಯ ಅರಿವುಂಟಾಗುತ್ತದೆ, ವ್ಯತ್ಯಾಸ ಕಂಡು ಬರುತ್ತಿದೆ.

ಉಕ್ಕು ಬೆಲೆ ಹೆಚ್ಚಳ

ಕೇಂದ್ರ ಸರಕಾರ ತನ್ನ ವಾರ್ಷಿಕ ನೀತಿಗನುಸರಿಸಿ ಕೇಂದ್ರ ಬಜೆಟ್ ಮಂಡಿಸುವ ಮುಂಚೆಯೇ ಫೆಬ್ರವರಿ ಮೊದಲ ವಾರದಲ್ಲೇ ಉಕ್ಕಿನ ಬೆಲೆಯನ್ನು ಹೆಚ್ಚಿಸಿದೆ. ಈ ರೀತಿಯ ಬೆಲೆ ಹೆಚ್ಚಳದಿಂದಾಗಿ ಈ ಹಣಕಾಸು ವರ್ಷದ ಕಡೆಯ ಎರಡು ತಿಂಗಳಲ್ಲಿ ಸರಕಾರೀ ಕ್ಷೇತ್ರದ ಭಾರತ ಉಕ್ಕು ಪ್ರಾಧಿಕಾರ ರೂ. 300 ಕೋಟಿ ಹೆಚ್ಚು ಆದಾಯ ಗಳಿಸಲಿದೆ. ಎರಡು ತಿಂಗಳಿಗೆ ರೂ. 300 ಕೋಟಿಯಾದರೆ ವರ್ಷ ಒಂದಕ್ಕೆ ಎಷ್ಟಾಯಿತು. ಪ್ರತಿ ತಿಂಗಳೂ ಬರೀ ಉಕ್ಕಿನ ಬೆಲೆ ಹೆಚ್ಚಳದ ಭಾರ ರೂ. 150 ಕೋಟಿ.

ನಮ್ಮ ರಾಜ್ಯದಲ್ಲಿ

ಬಂಗಾರಪ್ಪ ಸರಕಾರ ಹೋಗಿ ವೀರಪ್ಪ ಮೊಯಿಲಿ ಸರಕಾರ ಅಧಿಕಾರಕ್ಕೆ ಬಂದಾಗ ರಾಜ್ಯದ ಆಡಳಿತೆಯಲ್ಲಿ ಅದರ ನಡಾವಳಿಕೆಯಲ್ಲಿ ನೀತಿ ನಿಯಮಗಳಲ್ಲಿ ಬದಲಾವಣೆ ಕಂಡು ಬರಬಹುದೆಂದು ಆಶಿಸಿದ್ದೆವು. ಕೋಮು ಸೌಹಾರ್ದತೆಗಾಗಿ, ಮತೀಯ ಶಕ್ತಿಗಳ ವಿರುದ್ಧ ಜನವರಿ 25ರಿಂದ 30ರವರೆಗೆ ಕೋಮು ಸೌಹಾರ್ದತಾ ಸಪ್ತಾಹ ಆಚರಿಸಿ ಕೋಮು ಸಾಮರಸ್ಯ ಪ್ರಚಾರಕ್ಕೆ ಸಹಾಯ, ಮಂತ್ರಿಗಳು ಜನರಿಗೆ ಕಷ್ಟವಾಗದೆ ಲಭಿಸುವ ಕೆಲವು

ಪುಟ 8ಕ್ಕೆ

ತ್ರಿಪುರಾ ಚುನಾವಣೆ ಮುಂದಕ್ಕೆ

ಕಾಂಗ್ರೆ-ಟಿಯುಜೆಎಸ್ ಸರಕಾರದ ನೀಚತನಕ್ಕೆ ಸಾಕ್ಷಿ

ತ್ರಿಪುರಾದ ಕಾಂಗ್ರೆ-ಟಿಯುಜೆಎಸ್ ತ್ರಿಪುರಾ ಸರಕಾರ ಚುನಾವಣಾ ಆಯೋಗಕ್ಕೆ ಸಲ್ಲಿಸಿದ ವರದಿಯನ್ನು ಹಾಗೂ ರಾಜ್ಯದಲ್ಲಿನ ಕಾನೂನು-ವ್ಯವಸ್ಥೆಯ ಸ್ಥಿತಿಯನ್ನು ವಿವರವಾಗಿ ಪರಿಶೀಲಿಸಿದ ನಂತರ "ತ್ರಿಪುರಾ ರಾಜ್ಯ ಒಂದು ಶಾಂತಿಯುತ, ನ್ಯಾಯ, ಮುಕ್ತ ಚುನಾವಣೆಗೆ ಸಿದ್ಧವಾಗಿಲ್ಲ" ಎಂಬ ನಿರ್ಣಯಕ್ಕೆ ಬಂದಿರುವ ಚುನಾವಣಾ ಆಯೋಗ ಫೆಬ್ರವರಿ 15ರಂದು ನಡೆಯಬೇಕಿದ್ದ ಚುನಾವಣೆಗಳನ್ನು ಏಪ್ರಿಲ್ 3ಕ್ಕೆ ಮುಂದೂಡಿದೆ.

ಚುನಾವಣಾ ಆಯೋಗ ತ್ರಿಪುರಾದಲ್ಲಿ 72 ಚುನಾವಣಾ ಪೂರ್ವ ಹಿಂಸಾತ್ಮ ಘಟನೆಗಳು ಸಂಭವಿಸಿವೆ. ಅವುಗಳಲ್ಲಿ 27 ದೈಹಿಕ ಧಾಳಿಗಳು. 16 ಗುಂಪು ಘರ್ಷಣೆಗಳು, 10 ಲೂಟಿಗಳು, 7 ಬಾಂಬ್ ಸಿಡಿತಗಳು, 2 ಅಪಹರಣಗಳು ಸೇರಿವೆ. ಎಂಟು ಜನ ಸತ್ತು 122 ಜನಕ್ಕೆ ಗಾಯಗಳಾಗಿವೆ.

ಚುನಾವಣಾ ಸ್ಪರ್ಧಿಗಳು ಹಾಗೂ ಅವರ ಪ್ರತಿನಿಧಿಗಳೆಲ್ಲರಿಗೂ ಪೋಲೀಸ್ ರಕ್ಷಣೆ ನೀಡಿದರೂ ಅವರು ತಮ್ಮ ಕ್ಷೇತ್ರಗಳಲ್ಲಿ ಸುಲಲಿತವಾಗಿ ಓಡಾಡುವ ಪರಿಸ್ಥಿತಿಯಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಡೆಯುವ ಯಾವುದೇ ಚುನಾವಣೆ ಮತದಾರರ ಮುಕ್ತ ಮನಸ್ಸಿನ ಆಯ್ಕೆಯಾಗಿರಲು ಸಾಧ್ಯವಿಲ್ಲ ಎಂದು ಅಲ್ಲಿನ ಕಾಂಗ್ರೆ ಸರಕಾರವನ್ನು ಖಂಡತುಂಡವಾಗಿ ಖಂಡಿಸಿದೆ.

ಚುನಾವಣೆ ನಡೆಯಲಿದ್ದ 72 ಗಂಟೆಗಳ ಮೊದಲಷ್ಟೇ ಬಂದಿರುವ ಚುನಾವಣಾ ಆಯೋಗದ ಈ ತೀರ್ಪು, ತ್ರಿಪುರಾ ಸರಕಾರದ ಕಾನೂನುಬಾಹಿರ ಚಟುವಟಿಕೆಗಳನ್ನು ಬಯಲಿಗೆಳೆದಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ. ಚುನಾವಣಾ ಮುಂದೂಡಿಕೆಗೆ ಚುನಾವಣಾ ಆಯೋಗ ನೀಡಿರುವ ಕಾರಣ ತ್ರಿಪುರಾ ಸರಕಾರದ ಮೇಲೆ ಹಾಕಿರುವ ಒಂದು ಅಭೂತಪೂರ್ವ ಆಪಾದನಾ ಪಟ್ಟಿ ಎಂದು ವರ್ಣಿಸಿರುವ ಪಿ.ಬಿ. ಚುನಾವಣೆಗಳಲ್ಲಿ ಮೋಸ ಮಾಡಲು ರಾಜ್ಯ ಸರಕಾರ ವ್ಯಾಪಕ ಯೋಜನೆ ನಡೆಸಿದೆ ಎಂಬ ಸಿಪಿಐ(ಎಂ)ನ ಹಾಗೂ ಎಡರಂಗದ ಆಪಾದನೆಗಳನ್ನು ಸಾಬೀತುಗೊಳಿಸಿದೆ ಎಂದಿದೆ.

ಕಾಂಗ್ರೆಸ್ ಮತ್ತು ರಾಜ್ಯ ಸರಕಾರದ ಮುಖ್ಯಮಂತ್ರಿಗಳು ಹಾಗೂ ಕೇಂದ್ರ ಮಂತ್ರಿ ಸಂತೋಷ್ ಮೋಹನ್ ದೇಬ್‌ರ ನೇತೃತ್ವದಲ್ಲಿ ಮುಕ್ತ ಹಾಗೂ ನ್ಯಾಯಯುತ ಚುನಾವಣೆ ನಡೆಯದಂತೆ ತಡೆಯಲು ಅತ್ಯಂತ ಒರಟು ರೀತಿಯಲ್ಲಿ ಭಯೋತ್ಪಾದಕ ಪ್ರಚಾರ ಕಾರ್ಯ ನಡೆಸಿದ್ದರು. ಫೆಬ್ರವರಿ 7ರ ರಾತ್ರಿ 10ಗಂಟೆಯ ವೇಳೆಗೆ ರಾಜ್ಯ ಪೋಲೀಸ್ ಹಾಗೂ ಅರೆಸೈನಿಕ ಪಡೆಗಳ ನಾಲ್ಕು ಟ್ರಕ್ಕುಗಳಲ್ಲಿ ಬಂದ ಜವಾನರು ರಾಜ್ಯ ಸರಕಾರದ ಆಜ್ಞೆಯ ಮೇರೆಗೆ ಸಿಪಿಐ(ಎಂ) ರಾಜ್ಯ ಸಮಿತಿಯ ಕಚೇರಿಯ ಮೇಲೆ ದಾಳಿ ನಡೆಸಿ ಪ್ರತಿಯೊಂದು ಕೋಣೆಯನ್ನು ಹುಡುಕಾಟ ನಡೆಸಿದರು - ರಾಜ್ಯ ಸಮಿತಿ ಕಚೇರಿಯಲ್ಲಿ ಶಸ್ತ್ರಾಸ್ತ್ರಗಳನ್ನು ಬಚ್ಚಿಡಲಾಗಿದೆ ಎಂದು. ಪೋಲೀಸ್ ಪಡೆಗಳು ಹುಡುಕಾಟ ನಡೆಸುತ್ತಿದ್ದಾಗ ಮುಖ್ಯಮಂತ್ರಿ ಪೋಲೀಸ್ ವೈರ್‌ಲೆಸ್‌ನಲ್ಲಿ ಮಾತನಾಡುತ್ತಾ ಎಷ್ಟು ಶಸ್ತ್ರಾಸ್ತ್ರ ಸಿಕ್ಕಿದವು ಎಂದು ಕೇಳಿದರು. ಒಂದೂವರೆ ಗಂಟೆಯ ಹುಡುಕಾಟದ ನಂತರ "ಏನೂ ದೊರೆತಿಲ್ಲ" ಎಂದು ಟಿಪ್ಪಣಿ ಬರೆದು ಹೋಗಬೇಕಾಯಿತು. ಇದು ಕಾಂಗ್ರೆಸ್(ಐ)ನ ಭಯೋತ್ಪಾದಕ ತಂತ್ರಗಳಲ್ಲಿ ಒಂದಾಗಿತ್ತು ಎಂದು ಬೇರೆ ಹೇಳಬೇಕಾಗಿಲ್ಲ.

ಈ ಹಿಂದೆ ರಾಜ್ಯ ಸರಕಾರದ ವೀಕ್ಷಕರ ಹೆಸರುಗಳನ್ನು ಚುನಾವಣಾ ಆಯೋಗ ರದ್ದು ಮಾಡಬೇಕಾಯಿತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಇಷ್ಟೆಲ್ಲಾ ಭಯೋತ್ಪಾದನೆಯ ನಡುವೆಯೂ ಫೆಬ್ರವರಿ 15ರಂದು ಚುನಾವಣೆ ನಡೆದಿದ್ದರೆ ಎಡರಂಗ ನಿರ್ಣಾಯಕ ವಿಜಯ ಗಳಿಸುತ್ತಿತ್ತು ಎಂದು ಪೊಲಿಟ್‌ಬ್ಯೂರೋ ಹೇಳಿದೆ.

ಪ್ರಜಾಪ್ರಭುತ್ವದ ರಕ್ಷಣೆಗೆ ಎಡರಂಗ ನಿರಂತರ ಪ್ರಚಾರ ನಡೆಸಬೇಕು, ತಮ್ಮ ಮತಾಧಿಕಾರ ಚಲಾಯಿಸುವ ಹಕ್ಕನ್ನು ಜನರು ಒಗ್ಗಟ್ಟಿನಿಂದ ಎತ್ತಿ ಹಿಡಿಯಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಕರೆ ನೀಡಿದೆ.

ವಾರದ ನುಡಿ

ಆಯೋಧ್ಯೆಯಲ್ಲಿ ತಲೆಬಾಗಿದ ಈ ಹೇಡಿ ಸರಕಾರ ಡಂಕೆಲ್ ಕರಡಿನ ಎದುರೂ ಅಷ್ಟೇ ಹೇಡಿತನದಿಂದ ತಲೆಬಾಗಿ ಮುಂದಿನ ಶತಮಾನದಲ್ಲಿ ಭಾರತದ ಹೆಸರೇ ಅಳಿಸಿ ಹೋಗುವಂತಾಗಬಹುದು.

- ದೇಶದ ಒಬ್ಬ ದೊಡ್ಡ ವಿಜ್ಞಾನಿ

(ಪುಟ 2ರ ಲೇಖನ ನೋಡಿ)

"ತನ್ನ ದಾಖಲೆಯ ನಷ್ಟಸಂಕಷ್ಟ ಮತ್ತು ಬೌದ್ಧಿಕ ಜಡತ್ವ ಹಾಗೂ ನಿರ್ಣಯ ಕೈಗೊಳ್ಳಲಾಗದ ಅನಿಶ್ಚಿತತೆಯಿಂದಾಗಿ ಅಯೋಧ್ಯೆಯಲ್ಲಿ ಭಾರೀ ವಿಫಲತೆ ಕಂಡ ಈ ಸರಕಾರದ ಕಾರ್ಯವೈಖರಿಯನ್ನು ನೋಡಿದರೆ ಅದು ಡಂಕೆಲ್ ಕರಡಿಗೆ ಹಿಂದೆ ಮುಂದೆ ನೋಡದೆ ತಲೆಬಾಗಿ ಅದನ್ನೊಪ್ಪಿಕೊಂಡು ದೇಶವನ್ನು ಆರ್ಥಿಕ ದಾಸ್ಯಕ್ಕೆ ಒಪ್ಪಿಸಿ ಮುಂದಿನ ಶತಮಾನದಲ್ಲಿ ಭಾರತ ಹೇಳ ಹೆಸರಿಲ್ಲದಂತೆ ಮಾಡುತ್ತದೆ ಎಂದೆನಿಸುತ್ತದೆ" - ಇದು ದೇಶದ ಒಂದು ಪ್ರಮುಖ ವಿಜ್ಞಾನ ಸಂಸ್ಥೆಯೊಂದರ ನಿರ್ದೇಶಕ ಡಾ.ಓ.ಎನ್.ರೆಡ್ಡಿಯವರು ಅತ್ಯಂತ ಸಿಟ್ಟಿನಿಂದ ಅಷ್ಟೇ ವಿಷಾದದಿಂದ ಹೇಳಿರುವ ಮಾತು. ಕೋಮುವಾದಿಗಳಿಗೆ ತಲೆಬಾಗಿದ ಈ ಸರಕಾರ ಅಷ್ಟೇ ಸುಲಭವಾಗಿ ಡಂಕೆಲ್ ಕರಡಿಗೂ ತಲೆಬಾಗಿರುವುದನ್ನು ಇತರವಿಜ್ಞಾನಿಗಳೂ ಬಲವಾಗಿ ಖಂಡಿಸಿದ್ದಾರೆ. ಭಾರತದ ಇನ್ನೊಬ್ಬ ಪ್ರಸಿದ್ಧ ಕೃಷಿ ವಿಜ್ಞಾನಿ ಡಾ.ಎಂ.ಎಸ್. ಸ್ವಾಮಿನಾಥನ್ ಇತ್ತೀಚೆಗೆ ಒಂದು ಭಾಷಣದಲ್ಲಿ ವ್ಯಕ್ತಪಡಿಸಿದ ಹಾಗೂ ಹೈದರಾಬಾದಿನ ಮೊಲ್ಯುಕುಲರ್ ಇಮ್ಯುನೋಲಜಿ ಕೇಂದ್ರದ ನಿರ್ದೇಶಕ ಡಾ.ಓ.ಎನ್. ರೆಡ್ಡಿಯವರು 'ಹಿಂದೂ' ಪತ್ರಿಕೆಯಲ್ಲಿ ಬರೆದ ಲೇಖನದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ನಮ್ಮ ಓದುಗರಿಗಾಗಿ ಇಲ್ಲಿ ಸಂಗ್ರಹಿಸಿದ್ದೇವೆ.

ಡಂಕಲ್ ಕರಡು : ದೇಶವನ್ನು ಮಾರಬೇಡಿ

ಹೈದರಾಬಾದ್‌ನ ಉನ್ನತ ಸಂಶೋದನ ಸಂಸ್ಥೆಯ ನಿರ್ದೇಶಕರ ಮನವಿ

ಅಂತರಾಷ್ಟ್ರೀಯ ಮಟ್ಟದ ವ್ಯಾಪಾರ ಸಂಬಂಧಗಳಿಗೆ ಸಂಹಿತೆಯನ್ನು ತಯಾರಿಸುವ ಅಂತರಾಷ್ಟ್ರೀಯ ಮಟ್ಟದ ಸಂಸ್ಥೆಯೊಂದಿದೆ. ವ್ಯಾಪಾರ ಮತ್ತು ಕರಗಳ ಬಗೆಗೆ ಸಾಮಾನ್ಯ ಒಪ್ಪಂದ ಇದು. ಇಂಗ್ಲೀಷಿನಲ್ಲಿ ಸಂಕ್ಷಿಪ್ತವಾಗಿ ಇದನ್ನು ಗ್ಯಾಟ್ ಎನ್ನುತ್ತಾರೆ. ಈ ಸಂಸ್ಥೆಯ ಮಹಾ ನಿರ್ದೇಶಕನ ಹೆಸರು ಸರ್ ಆರ್ಥರ್ ಡಂಕೆಲ್ ಎಂದು ಈ ಡಂಕೆಲ್ ಮಹಾಶಯ ವ್ಯಾಪಾರಗಳಿಗೆ ಸಂಬಂಧಪಟ್ಟಂತೆ ವಿವರವಾದ ನಿಯಮಗಳ ಕರಡೊಂದನ್ನು ತಯಾರಿಸಿ ಗ್ಯಾಟ್‌ನ ಸಭೆ ಮುಂದಿಟ್ಟಿದ್ದಾನೆ. ಅದೇ ಡಂಕೆಲ್ ಕರಡು.

ಈ ಡಂಕೆಲ್ ಕರಡಿನಲ್ಲಿ ವ್ಯಾಪಾರ ಸಂಭಂದಿತ ಬೌದ್ಧಿಕ ಆಸ್ತಿ ಹಕ್ಕುಗಳ ಬಗೆಗೆ ಒಂದು ಅಧ್ಯಾಯವಿದೆ. ವ್ಯಾಪಾರ ಸಂಭಂದಿತ ಬೌದ್ಧಿಕ ಹಕ್ಕುಗಳು ಎಂದರೇನು? ಸರಳವಾಗಿ ಹೇಳುವುದಾದರೆ ಒಂದು ವಸ್ತುವನ್ನು ಒಬ್ಬ ತನ್ನ ಸಂಶೋಧನೆಯ ಮೂಲಕ ಕಂಡು ಹಿಡಿದರೆ ಅದು ಆತನ ಬೌದ್ಧಿಕ ಆಸ್ತಿ. ಆಧುನಿಕ ಯುಗದಲ್ಲಿ ಇಂತಹ ಹಲವು ವಸ್ತುಗಳಿವೆ, ಇರಲಿ.

ಭಾರತದ ಮಟ್ಟಿಗೆ ಹೇಳುವುದಾದರೆ ಇಂತಹ ಆಸ್ತಿ ಹಕ್ಕುಗಳನ್ನು ಕಾಯಲು 1970 ರ ಪೇಟೆಂಟ್ ಕಾಯಿದೆ ಇದೆ. ನಮ್ಮ ಈ ಪೇಟೆಂಟ್ ಕಾಯಿದೆ ಏನು ಹೇಳುತ್ತದೆಂದರೆ ಒಂದು ವಸ್ತುವನ್ನು ಒಬ್ಬ ವ್ಯಕ್ತಿ ಕಂಡುಹಿಡಿದರೆ ಆತ ಆ ವಸ್ತುವಿಗೆ ಪೇಟೆಂಟ್ ಪಡೆಯಬಹುದು. ಆಗ ಆ ವಸ್ತುವನ್ನು ಆ ವಿಧಾನದ ಮೂಲಕ ಉತ್ಪಾದನೆ ಮಾಡಲು ಆತನಿಗೆ ಮಾತ್ರ ಅಧಿಕಾರವಿರುತ್ತದೆ. ಬೇರೆಯವರು ಅದೇ ವಿಧಾನದಲ್ಲಿ ಅದೇ ವಸ್ತುವನ್ನು ಉತ್ಪಾದನೆ ಮಾಡುವುದಾದರೆ ಪೇಟೆಂಟ್ ಹೊಂದಿರುವಾತನ ಅನುಮತಿ ಪಡೆಯಬೇಕು.

ಈಗ ಡಂಕೆಲ್ ಪ್ರಸ್ತಾಪಗಳಲ್ಲಿ ಈ ಕಾಯಿದೆಯನ್ನು ಮಾರ್ಪಡಿಸುವ ಬಗೆಗೆ ಪ್ರಸ್ತಾಪವಿದೆ. ಡಂಕೆಲ್ ಪ್ರಸ್ತಾಪಗಳ ಬಗೆಗೆ ಎರಡೇ ನಿಲುವುಗಳನ್ನು ತೆಗೆದುಕೊಳ್ಳಬಹುದು. ಈ ಪ್ರಸ್ತಾಪಗಳನ್ನು ಪೂರ್ತಿಯಾಗಿ ಒಪ್ಪಿಕೊಳ್ಳಬೇಕು ಇಲ್ಲವೇ ಪೂರ್ತಿಯಾಗಿ ತಿರಸ್ಕರಿಸಬೇಕು.

ಡಂಕೆಲ್ ಕರಡನ್ನು ಒಪ್ಪಿಕೊಂಡರೆ ಅದಕ್ಕನುಗುಣವಾಗಿ ಪೇಟೆಂಟ್ ಕಾಯಿದೆಯನ್ನು ಬದಲಿಸಬೇಕು. ಕರಡಿನಲ್ಲಿ ಪ್ರಸ್ತಾಪಿಸಲಾದ ಪೇಟೆಂಟ್ ಕಾಯಿದೆ ಉತ್ಪನ್ನ ಪೇಟೆಂಟ್‌ಗಳನ್ನು ಮಾತ್ರ ನೀಡಲು ಅವಕಾಶ ಮಾಡಿಕೊಡುತ್ತದೆ. ಅಂದರೆ ಒಂದು ಉತ್ಪನ್ನದ ಪೇಟೆಂಟ್ ಅನ್ನು ಒಬ್ಬಾತನು ಅಥವಾ ಒಂದು ಕಂಪೆನಿ ಪಡೆದರೆ ನಂತರದಲ್ಲಿ ಆ ಉತ್ಪನ್ನವನ್ನೂ ಆತ ಅಥವಾ ಆ ಕಂಪನಿ ಮಾತ್ರ ಉತ್ಪಾದಿಸಬಹುದು. ಬೇರೆಯವರು ಬೇರೆ ವಿಧಾನಗಳಿಂದಲೂ ಈ ಉತ್ಪಾದನೆ ಮಾಡುವಂತಿಲ್ಲ. ಇಂತಹ ಪೇಟೆಂಟ್ ಇಪ್ಪತ್ತು ವರ್ಷಗಳ ಕಾಲಾವಧಿಯದ್ದಾಗಿರುತ್ತದೆ. ಅಂದರೆ ಒಂದು ಕಂಪನಿ ಒಂದು ಬಾರಿ ಪೇಟೆಂಟ್ ಪಡೆದರೆ ಅದು ಇಪ್ಪತ್ತು ವರ್ಷಗಳ ಕಾಲ ಆ ಪೇಟೆಂಟ್ ಪಡೆದ ವಸ್ತುವಿನ ಸೌರ್ವಭೌಮನಾಗಿರುತ್ತದೆ. ಬೇರೆ ಯಾರೂ ಅದನ್ನು ಉತ್ಪಾದಿಸಲು ಅವಕಾಶ ಇಲ್ಲದೇ ಇರುವುದರಿಂದ ಆ ಕಂಪನಿ ಹೇಳಿದ ಬೆಲೆ ತೆತ್ತು ಆ ಜನ ಆ ವಸ್ತುವನ್ನು ಖರೀದಿಸಬೇಕಾಗುತ್ತದೆ.

ಈ ಕಾಯಿದೆಯ ದೂರಗಾಮಿ ಪರಿಣಾಮಗಳು ಹಲವು. ಒಂದೇ ವಸ್ತುವನ್ನು ಬೇರೆ ವಿಧಾನದಿಂದ ಉತ್ಪಾದಿಸುವ ಸಂಶೋಧನೆಯನ್ನೂ ಯಾರೂ ಮಾಡಲಾರರು. ಅಂದರೆ ಸಂಶೋಧನೆ ಕಡಿಮೆಯಾಗಿ ನಮ್ಮ ಉದ್ಯಮಗಳು ಬೆಳೆಯದೆ ಹೋಗುತ್ತವೆ. ಈ ಕಾಯಿದೆ ಬಲಿಷ್ಠನ ಸಾರ್ವಭೌಮತೆ ತರುತ್ತದೆ. ಅರ್ಥಾತ್ ಆಗ ಹರಿವ ನೀರಿಗೂ ದೊಣ್ಣೆನಾಯಕನ ಅಪ್ಪಣೆ ಎಂಬ ಪರಿಸ್ಥಿತಿ ಯಾಗುತ್ತದೆ.

ಈಗ ನಮ್ಮ ದೇಶದ ವಿಷಯಕ್ಕೆ ಬಂದರೆ ನಮ್ಮದು ಹಿಂದುಳಿದಿರುವ ಅಭಿವೃದ್ಧಿಶೀಲ ದೇಶ. ಅಮೇರಿಕಾ ಯುರೋಪಿನ ದೇಶಗಳು ಮತ್ತು ಜಪಾನ್ ಕೆನಡಾ ಇತ್ಯಾದಿಗಳೆಲ್ಲ ಆಗಲೇ ಅಭಿವೃದ್ಧಿ ಹೊಂದಿರುವ ದೇಶಗಳಾಗಿರುವುದರಿಂದ ಈ ಕಾಯಿದೆ ಅವರಿಗೆ ಅನುಕೂಲವಾಗುತ್ತದೆ. ಸರಳವಾಗಿ ಹೇಳುವುದಾದರೆ ಈ ದೇಶಗಳು ನಮ್ಮಂತಹ ದೇಶಗಳನ್ನೂ ಹಾಡುಹಗಲೇ ದರೋಡೆ ಮಾಡಬಹುದಾದ ಸನ್ನಿವೇಶ ನಿರ್ಮಾಣವಾಗುತ್ತದೆ.

ಮೇಲಿನ ಅಂಶಗಳ ಜೊತೆಗೆ ಇನ್ನೊಂದು ವಿಷಯ : ಇಂತಹ ಕಾಯಿದೆ ಬಂದರೆ ವಿವಿಧ ಜೀವ ರೂಪಗಳನ್ನು (ಬೀಜ, ತಳಿ, ಇತ್ಯಾದಿಗಳು) ಪೇಟೆಂಟ್ ಮಾಡಬಹುದಾಗಿರುತ್ತದೆ.

ಈಗ ಇದರ ಪರಿಣಾಮಗಳನ್ನು ನೋಡೋಣ. ಒಂದು ಬೆಳೆಯ ಮುಖ್ಯ ತಳಿಯೊಂದನ್ನು ಯಾರಾದರೂ ಪೇಟೆಂಟ್ ಮಾಡಿದರೆಂದುಕೊಳ್ಳಿ, ಆಗ ರೈತರು ಪೇಟೆಂಟ್ ಮಾಡಿದವರಿಂದ ಮಾತ್ರ ಆ ತಳಿಯನ್ನು (ಬೀಜವನ್ನು) ಪಡೆಯಬಹುದು. ತಮ್ಮ ಬೆಳೆಯಿಂದಲೇ ಬಂದ ಬೀಜವನ್ನು ಅವರು ಮುಂದಿನ ಬೆಳೆ ಬೆಳೆಯಲು ಬಳಸುವಂತಿಲ್ಲ.

ಬೆಳೆಗಳ ವಿಷಯ ಬಂದಾಗ ನಮಗೆ ಒಂದು ಬಹು ಮುಖ್ಯ ವಿಷಯ ಗೊತ್ತಿರಬೇಕು. ಬಹುತೇಕ ಬೆಳೆಗಳು ನಮ್ಮ ಮೂರನೇ ಜಗತ್ತಿನಲ್ಲೇ ಹುಟ್ಟಿದವು. ಈ ದೇಶಗಳ ರೈತರೇ ಅವುಗಳಲ್ಲಿ ಉತ್ತಮವಾದದ್ದನ್ನು ಆಯ್ಕೆ ಮಾಡಿ ಪೋಷಿಸಿಕೊಂಡು ಬಂದವರು. ಆದರೆ ಆಗ ಅಭಿವೃದ್ಧಿ ಹೊಂದಿರುವ ದೇಶಗಳು ಈ ಬೆಳೆಗಳನ್ನು ಮೂರನೇ ಜಗತ್ತಿನ ಭಾರತದಂತ ದೇಶದಿಂದ ಪಡೆದು ತಳಿಗಳನ್ನು ರೂಪಿಸಿದ್ದಾರೆ. ಭಾರತದಿಂದ ಈ ತಳಿಗಳಿಗೆ ಬೇಕಾದ ಅಮೂಲ್ಯ ಬೀಜಗಳನ್ನು ಮೂಲದ್ರವ್ಯ ಪಡೆದ ಅವರು ನಮಗೆ ಯಾವುದೇ ಪ್ರತಿಫಲ ನೀಡಲಿಲ್ಲ. ಒಟ್ಟಾರೆಯಾಗಿ ಹೇಳುವುದಾದರೆ ಜೀವ ವೈವಿಧ್ಯತೆ ಇಂದಿಗೂ ಹಿಂದುಳಿದ ದೇಶಗಳು ಅಭಿವೃದ್ಧಿಶೀಲ ದೇಶಗಳಲ್ಲಿವೆ. ಆದ್ದರಿಂದಲೇ ಮುಂದುವರಿದ ರಾಷ್ಟ್ರಗಳು 'ಈ ಜೀವ ವೈವಿಧ್ಯತೆ ಮಾನವ ಜನಾಂಗದ ಸಾಮೂಹಿಕ ಆಸ್ತಿ' ಎಂಬ ಮಾತನ್ನಾಡುತ್ತಿದ್ದಾರೆ.

ಜಗತ್ತಿಗೆ ಉತ್ತಮ ಬತ್ತದ ತಳಿಗಳನ್ನು ನೀಡಿದ ಭಾರತ ಅಥವಾ ಉತ್ತಮ ಗೋಧಿಯ ತಳಿಗಳನ್ನು ನೀಡಿದ ಮೆಕ್ಸಿಕೋ ಅಥವಾ ಅವರೆಕಾಯಿ ತಳಿಗಳನ್ನು ನೀಡಿದ ಬೊಲಿವಿಯಾ ಈ ತಳಿಯ ಬೀಜವನ್ನು ಅಮೇರಿಕ ಅಥವಾ ಯುರೋಪಿನ ಬಹುರಾಷ್ಟ್ರೀಯ ಸಂಸ್ಥೆಯಿಂದ ದುಬಾರಿ ಬೆಲೆ ತೆತ್ತು ಪಡೆಯಬೇಕಾಗಿ ಬರುವ ಸಂದರ್ಭವನ್ನು ಊಹಿಸಿಕೊಳ್ಳಿ, ಇದು ಊಹೆಯಲ್ಲ. ಡಂಕೆಲ್ ಕರಡನ್ನು ಒಪ್ಪಿಕೊಂಡರೆ ನಮಗೆ ಬರುವ ವಾಸ್ತವ ಪರಿಸ್ಥಿತಿ. ಹೈದರಾಬಾದ್‌ನ ಸೆಂಟರ್

ಪುಟ 8ಕ್ಕೆ ......

ಯಾರ ಹಿತಾಸಕ್ತಿಗಾಗಿ ಈ ಡಂಕೆಲ್ ಪ್ರಸ್ತಾಪಗಳು ?

- ಡಾ.ಎಂ.ಎಸ್.ಸ್ವಾಮಿನಾಥನ್

ಬೌದ್ಧಿಕ ಆಸ್ತಿ ಕುರಿತಾದ ಡಂಕೆಲ್ ಕರಡು ಪ್ರಸ್ತಾಪಗಳು ವಿಜ್ಞಾನಿಗಿಂತ ಹೆಚ್ಚಾಗಿ ವಕೀಲರನ್ನು ಸೃಷ್ಟಿಸಲಿವೆ. ಸಂಶೋಧನೆಗಳ ಮೂಲಕ ಹೊಸ ತಳಿಗಳ ಪೇಟೆಂಟ್‌ಗಳಿಂದ ರೈತರು ಮತ್ತು ತಳಿ ಶೋಧಕರ (ವಿಜ್ಞಾನಿಗಳ) ನಡುವೆ ಕಾನೂನಿನ ಜಗಳ ಹುಟ್ಟಿಕೊಳ್ಳಲಿದೆ. ಏಕೆಂದರೆ ಯಾವುದೇ ತಳಿ ಅಭಿವೃದ್ಧಿಗೆ ಮೂಲಭೂತ ಕಚ್ಚಾ ಸಾಮಗ್ರಿಯನ್ನು ರೈತರೇ ಒದಗಿಸಬೇಕು. ಉದಾಹರಣೆಗೆ ಐ.ಆರ್.66 ಎಂಬ ಹೊಸ ಭತ್ತದ ತಳಿ 12 ದೇಶಗಳಲ್ಲಿ ಅಭಿವೃದ್ಧಿಹೊಂದಿದೆ. ಇದನ್ನು ಪೇಟೆಂಟ್ ಮಾಡಿದರೆ ಅದರ ಪ್ರಯೋಜನ ಯಾರಿಗೆ ಹೋಗಬೇಕು? ಸಂಶೋಧನೆಗೆಂದು ಬೀಜಗಳನ್ನು ಸಂಗ್ರಹಿಸಿ ರಕ್ಷಿಸಿಟ್ಟ ವಿಜ್ಞಾನಿಗಳಿಗೋ? ರೈತರಿಗೋ? ಭಾರತದ ಮೊದಲ ಭತ್ತ ವಿಶೇಷಜ್ಞ ಡಾ. ಕೆ. ರಾಮಯ್ಯ ಹೈಬ್ರಿಡ್ ವಿಧಾನದ ಮೂಲಕ ಮೊದಲ ಜಪಾನಿಕಾ-ಇಂಡಿಕಾ ಭತ್ತದ ತಳಿ ಎಡಿ.ಟಿ.-24 ನ್ನು ಅಭಿವೃದ್ಧಿ ಪಡಿಸಿದರು. ಇದನ್ನು ನೈಜೀರಿಯಾದಲ್ಲಿ ಅಳವಡಿಸಿಕೊಳ್ಳಲಾಯಿತು. ಕೊಯಮತ್ತೂರಿನಲ್ಲಿ ವಿಕಾಸಗೊಳಿಸಿದ ಹಲವು ಕಬ್ಬಿನ ತಳಿಗಳು ವಿಶ್ವಾದ್ಯಂತ ಹರಡಿದವು.

ಭಾರತವೂ ವಿದೇಶಗಳಲ್ಲಿನ ಕೃಷಿ ಸಂಶೋಧನೆಯಿಂದ ಪ್ರಯೋಜನ ಪಡೆದಿದೆ. ಬೌದ್ಧಿಕ ಆಸ್ತಿ ಕುರಿತ ಡಂಕೆಲ್ ಕರಡು ಪ್ರಸ್ತಾಪಗಳನ್ನು ಒಪ್ಪಿಕೊಂಡರೆ ವೈಜ್ಞಾನಿಕ ವಿಚಾರಗಳ ಅಂತರಾಷ್ಟ್ರೀಯ ವಿನಿಮಯ ನಿಂತುಹೋಗಿ ವಿಜ್ಞಾನಿಗಳು ವಿಜ್ಞಾನದ ಬದಲು ವ್ಯಾಪಾರದಲ್ಲೇ ಹೆಚ್ಚು ತೊಡಗುತ್ತಾರೆ.

1992ರ ವಿಮರ್ಶೆಗಳ ಮುಖ್ಯ ಪಾಠವೆಂದರೆ ಕೃಷಿ ಉತ್ಪಾದಕತೆಯಲ್ಲಿ ಪರಿಸರ ತಡೆದುಕೊಳ್ಳಬಹುದಾದ ಮುನ್ನಡೆ ಸಾಧಿಸಿದರೆ ಮಾತ್ರವೇ ಸಾಧ್ಯ ಎಂಬುದು. ಇದರ ಮೇಲೆಯೇ ವಿಶ್ವದಲ್ಲಿ ಭವಿಷ್ಯದಲ್ಲಿ ಆಹಾರದ ಪರಿಸ್ಥಿತಿ ಸುಗಮವಾಗಿರಲು ಸಾಧ್ಯ.

ಈ ಹಿನ್ನೆಲೆಯಲ್ಲಿ ಗಾಟ್ ಮಾತುಕತೆಗಳ ಅಂತಿಮ ಫಲಿತಾಂಶ ಮಹತ್ವಪೂರ್ಣವಾಗುತ್ತದೆ. ಈ ಮಾತುಕತೆ ಯಶಸ್ವಿಯಾಗಬೇಕಾದರೆ ಕೃಷಿ ಕುರಿತಂತೆ ಒಪ್ಪಂದ ಅಗತ್ಯ. ದುರದೃಷ್ಟವಶಾತ್ ಈ ಮಾತುಕತೆಗಳಲ್ಲಿ ಪ್ರಮುಖ ಪಾತ್ರಧಾರಿಗಳು ಯುರೋಪ್, ಅಮೇರಿಕಾ ಮತ್ತು ಕೃಷಿ ರಫ್ತುಮಾಡುವ ಆಸ್ಟ್ರೇಲಿಯಾದಂತಹ ದೇಶಗಳು.

ವಿಶ್ವದಲ್ಲಿ ಸುಮಾರು 40 ಕೋಟಿ ಕೃಷಿ ಕುಟುಂಬಗಳಿವೆ. ಇವುಗಳಲ್ಲಿ 10 ಕೋಟಿ ಭಾರತದಲ್ಲಿ, ಇಷ್ಟೇ ಸಂಖ್ಯೆ ಚೀನಾದಲ್ಲಿ ಇದ್ದಾರೆ. ಆದರೆ ಗಾಟ್ ಮಾತುಕತೆಗಳ ಫಲಿತಾಂಶವನ್ನು ಧರಿಸುವುದು ಈ 20 ಕೋಟಿಗೂ ಮೀರಿದ ಕುಟುಂಬಗಳ ಹಿತಾಸಕ್ತಿಯಲ್ಲ ಅಮೇರಿಕಾ, ಯುರೋಪಿನ ಕೆಲವು ಲಕ್ಷ ಕೃಷಿ ಕುಟುಂಬಗಳ ಹಿತಾಸಕ್ತಿಗಳು ಮಾತ್ರ.

ಡಿಸೆಂಬರ್ 1991 ರಲ್ಲಿ ಪ್ರಕಟಿಸಲ್ಪಟ್ಟ ಕೃಷಿ ಕುರಿತಾದ ಡಂಕೆಲ್ ಪ್ರಸ್ತಾಪಗಳು ಕೃಷಿ ಉತ್ಪಾದನೆಗೆ ನೀಡುವ ಆರ್ಥಿಕ ಬೆಂಬಲ, ರಕ್ಷಣೆಯನ್ನು ಗಮನಾರ್ಹ ಪ್ರಮಾಣದಲ್ಲಿ ಇಳಿಸಬೇಕು ಎಂದಿದೆ. ಮಾರುಕಟ್ಟೆಗಳನ್ನು ಯಾವುದನ್ನು ಆಂತರಿಕ ಬೆಂಬಲವನ್ನು ಹಾಗೂ ರಫ್ತು ಸ್ಪರ್ಧೆ ಕುರಿತಂತೆ ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ನಿರ್ದಿಷ್ಟ ರೀತಿಯ ಭರವಸೆ ನೀಡಬೇಕು ಎನ್ನುತ್ತಿವೆ. ಗ್ಯಾಟ್ ಮಾತುಕತೆಗಳಲ್ಲಿ ಬಹುಪಾಲು ಕೃಷಿಯ ಮೇಲೆಯೇ ನಿಂತಿರುವ ದೇಶಗಳನ್ನು ಮೂಲೆಗೆ ತಳ್ಳಲಾಗಿದೆ.

ಕೊಯಮತ್ತೂರಿನಲ್ಲಿ ತಮಿಳುನಾಡು ಕೃಷಿ ವಿ.ವಿ.ಯಲ್ಲಿ ಡಾ. ಕೆ. ರಾಮಯ್ಯ ಜನ್ಮ ಶತಾಬ್ದಿ ಭಾಷಣ ಮಾಡುತ್ತಾ.


"ತಬ್ಬಲಿಯಾದ ವಿಜ್ಞಾನ"

"ಯಾವುದೊ ದೇಶದ ನೀತಿಗಳನ್ನು ನಕಲು ಮಾಡುವ ಬದಲಿಗೆ ನಮ್ಮದೇ ರಾಷ್ಟ್ರೀಯ ವಿಜ್ಞಾನ ನೀತಿಯನ್ನು ರೂಪಿಸುವ ಅವಶ್ಯಕತೆಯಿದೆ. ಸಾಲ ಪಡೆದು ಸುಮ್ಮನಿರುವುದರಲ್ಲಿ ನಮ್ಮ ಉಜ್ವಲ ಭವಿಷ್ಯವಡಗಿದೆಯೆಂದುಕೊಂಡರೆ ಅದು ತಪ್ಪು" ಹೊಸ ಆರ್ಥಿಕ ನೀತಿಯ ಪರಿಣಾಮಗಳ ಬಗೆಗೆ ದೇಶಕ್ಕೆ ಈ ಎಚ್ಚರಿಕೆ ನೀಡಿದವರು ದೇಶದ ಒಬ್ಬ ದೊಡ್ಡ ವಿಜ್ಞಾನಿ ಮತ್ತು ಟಾಟಾ ವಿಜ್ಞಾನ ಮಂದಿರದ ನಿರ್ದೇಶಕ ಡಾ. ಸಿ.ಎನ್.ಆರ್. ರಾವ್. ಹೊಸ ಆರ್ಥಿಕ ನೀತಿಯನ್ನು ಕಟುವಾಗಿ ಟೀಕಿಸಿದ ಡಾ. ರಾವ್ "ಮುಂಬರುವ ದಿನಗಳಲ್ಲಿ ಜಗತ್ತು ಹೆಚ್ಚುಹೆಚ್ಚು ಸ್ಪರ್ಧಾತ್ಮಕವಾಗುವಾಗ ಭಾರತ ವಿಜ್ಞಾನ ತಂತ್ರಜ್ಞಾನ ಮತ್ತು ಸೌಲಭ್ಯಗಳ ಮೇಲೆ ವಿನಿಯೋಗಿಸದೇ ಇದ್ದರೆ ಅದಕ್ಕೆ ಉಳಿಗಾಲವೇ ಇಲ್ಲ" ಎಂದಿದ್ದಾರೆ. ಕೆಲವೇ ಕೆಲವು ಸಂಸ್ಥೆಗಳಲ್ಲಾದರೂ ಹಣ ಹೂಡಿ ವಿಜ್ಞಾನ ತಂತ್ರಜ್ಞಾನದ ಬೆಳವಣಿಗೆಗಳಲ್ಲಾದರೂ ಮಾಡದಿದ್ದರೆ ನಾವು ಜಾಗತಿಕವಾಗಿ ಹೇಗೆ ತಾನೆ ಸ್ಪರ್ಧೆಯಲ್ಲಿ ಉಳಿಯುವೆವು? ಇದು ಕೇಳಿರುವ ಡಾ. ರಾವ್ ಅವರ ವಾದವನ್ನೇ ಹಲವು ವಿಜ್ಞಾನಿಗಳು ಒಪ್ಪಿದ್ದಾರೆ.

ವಿಶ್ವಬ್ಯಾಂಕ್ ಐ.ಎಂ.ಎಫ್ ಪ್ರಣೀತ ನೀತಿಗಳನ್ನು ವೈಭವೀಕರಿಸಿ ಅವುಗಳ ಆಜ್ಞೆಯಂತೆ ನಡೆಯುತ್ತಿರುವ ಪ್ರಧಾನಿ ಪಿ.ವಿ. ನರಸಿಂಹರಾವ್ ಸರ್ಕಾರ ದೇಶದ ವಿಜ್ಞಾನ ಕ್ಷೇತ್ರದ ದಿಗ್ಗಜ ಹಿಂದಿನ ಪ್ರಧಾನಿಗಳ ವಿಜ್ಞಾನಿ ಸಲಹೆಗಾರ ಡಾ. ಸಿ ಎನ್. ಆರ್. ರಾವ್‌ಗೆ ಮತ್ತು ದೇಶದ ವಿಜ್ಞಾನಿಗಳ ಸಮೂಹಕ್ಕೆ ಎತ್ತಿರುವ ಈ ಪ್ರಶ್ನೆಗೆ ಏನು ಉತ್ತರ ಹೇಳಬಲ್ಲರು? ನರಿನಗೆಯೇ?

ಮತ್ತೆ ಸಾಲದ (ಶೂಲದ) ಸುದ್ದಿ

ಮತ್ತೆ ವಿಶ್ವಬ್ಯಾಂಕ್ ಹೊಸ ಸಾಲಗಳ ಬಗ್ಗೆ ಮಾತನಾಡಿದೆ. ವಿಶ್ವಬ್ಯಾಂಕ್‌ನ ಅಂಗ ಸಂಸ್ಥೆಯಾದ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆ 1993-94 ರಲ್ಲಿ 400 ಮಿಲಿಯ ಡಾಲರುಗಳ ಸಾಲ ನೀಡುವ ಪ್ರಸ್ತಾಪ ಮಾಡಿದೆ. ಕಳೆದ ಸಾರಿ ವಾಷಿಂಗ್ ಟನ್‌ಗೆ ಹೋಗಿದ್ದ ನಮ್ಮ ಹಣಕಾಸು ಮಂತ್ರಿಗಳು ಈ ಸಾಲಕ್ಕೆ ಕೋರಿಕೆ ಸಲ್ಲಿಸಿದ್ದರಂತೆ. ಎಂದಿನಂತೆ ಸಂಸ್ಥೆ ಬರೇ ಸಾಲ ನೀಡುತ್ತಿಲ್ಲ. ಈ ಸಾಲದ ಉಪಯೋಗದ ಕುರಿತು ಅದು ಎರಡು ವರದಿಗಳನ್ನು ತಯಾರಿಸಿದೆಯಂತೆ.



ನರಸಿಂಹರಾವ್ ಸರಕಾರದ 20ನೇ ತಿಂಗಳಲ್ಲಿ

ವರದಿಗಳೆಂದರೆ ಮತ್ತೇನೂ ಅಲ್ಲ. ಅದು ಹೊಸ ಹೊಸ ಷರತ್ತುಗಳ ಕಂತೆ. ಭಾರತಕ್ಕೆ ಯಾವುದು ಒಳ್ಳೆಯದು ಯಾವುದು ಒಳ್ಳೆಯದಲ್ಲ ಎಂಬುದನ್ನೆಲ್ಲಾ ಹೇಳುವ ಈ ವರದಿಗಳು ಸಾಲಕ್ಕೆ ಪೂರ್ವಭಾವಿಯಾಗಿ ಬಂದಿವೆ. ಈ ವರದಿಗಳಲ್ಲಿನ ಷರತ್ತುಗಳನ್ನು ಭಾರತ ಒಪ್ಪಿ ಅನುಷ್ಠಾನಗೊಳಿಸಿದರೆ ಸಾಲದ ಬಿಡುಗಡೆಯಾಗುತ್ತದೆ ಇಲ್ಲವಾದರೆ ಇಲ್ಲ.

ಇದು ನಮ್ಮ ಆರ್ಥಿಕ ಸಾರ್ವಭೌಮತ್ವ!

ಒಂದು ಸಾವಿರ ಕೋಟಿ ರೂಪಾಯಿಗಳ ಮೊತ್ತದ ರಫ್ತು ಕುಸಿತ

ಅಯೋಧ್ಯೆ ನಂತರ ಪ್ರಕ್ಷುಬ್ಧ ಪರಿಸ್ಥಿತಿಯಿಂದಾಗಿ ರಫ್ತು ತೀವ್ರವಾಗಿ ಕುಸಿದಿದೆ. ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಕಡಿಮೆಯಾಗಲಿರುವ ರಫ್ತು ಈಗಾಗಲೇ ಹದಗೆಟ್ಟಿರುವ ವಿದೇಶಿ ವಿನಿಮಯ ಪರಿಸ್ಥಿತಿಯನ್ನು ಇನ್ನಷ್ಟು ಕೆಡಸಲಿದೆ.

ರೂಪಾಯಿ ಬೆಲೆಯಲ್ಲಿ ಕುಸಿತ

ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರತ ರೂಪಾಯಿಯ ಬೆಲೆ ಹಿಂದೆಂದೂ ಕಾಣದ ಕುಸಿತವನ್ನು ಕಂಡಿದೆ. ಅಮೆರಿಕನ್ ಡಾಲರವೊಂದಕ್ಕೆ ರೂ 32.52 ರಷ್ಟಾಗಿರುವ ರೂಪಾಯಿಯ ವಿದೇಶಿ ವಿನಿಮಯ ಶಕ್ತಿ ಹೊಡೆತ ಅನುಭವಿಸಿದೆ. ದೇಶದೊಳಗೆ ಹಣದುಬ್ಬರದ ಇಳಿತ, ಇತ್ಯಾದಿಗಳ ಬಗೆಗೆ ಕೊಚ್ಚಿಕೊಳ್ಳುವ ಸರ್ಕಾರ ಅಂತರಾಷ್ಟ್ರೀಯ ಮಟ್ಟದಲ್ಲಿ ರೂಪಾಯಿಯ ಬೆಲೆ ಸ್ಥಿರಗೊಳಿಸಲು ಯಾಕೆ ಸಾಧ್ಯವಾಗಿಲ್ಲವೋ?

ರಾಷ್ಟ್ರೀಯ ಪುನರುಜ್ಜೀವನ ನಿಧಿಯೆಂಬ ಕತ್ತಿ ಕಾರ್ಮಿಕರ ತಲೆಯ ಮೇಲೆ ತೂಗುತ್ತಿದೆ

ದೇಶದ ಎಲ್ಲ ಕಾರ್ಮಿಕ ಸಂಘಟನೆಗಳು ವಿರೋಧಿಸಿದರೂ ರಾಷ್ಟ್ರೀಯ 'ಪುನರುಜ್ಜೀವನದ ನಿಧಿ' ಎಂಬ ಕತ್ತಿ ಕಾರ್ಮಿಕರ ತಲೆಯ ಮೇಲೆ ತೂಗತೊಡಗಿದೆ. ವಿಶ್ವಬ್ಯಾಂಕ್, ಐ.ಎಂ.ಎಫ್‌ಗಳ ಅಣತಿಯಂತೆ ಸ್ಥಾಪಿತವಾಗಲಿರುವ ಈ ನಿಧಿಯ ಗಾತ್ರ ಈಗ ರೂ 2200 ಕೋಟಿಗಳಷ್ಟು. ಇದಕ್ಕೆ ವಿಶ್ವಬ್ಯಾಂಕೇ 1000 ಕೋಟಿ ರೂಪಾಯಿಗಳಷ್ಟನ್ನು ನೀಡುತ್ತದೆ. ಕುಚೋದ್ಯವೆನಿಸಬಹುದಲ್ಲವೆ? ಅಂತಹದ್ದೇನಿಲ್ಲ. ವಿಶ್ವಬ್ಯಾಂಕ್ 1000 ಕೋಟಿ ರೂಪಾಯಿಗಳ ಸಾಲ ನೀಡುತ್ತದೆ. ವಿಶ್ವಬ್ಯಾಂಕ್‌ಗೇನು ಲಾಭ ಎಂದು ಕೇಳುತ್ತೀರಲ್ಲವೇ? ಬಹುರಾಷ್ಟ್ರೀಯ ಕಂಪನಿಗಳು ಭಾರತಕ್ಕೆ ಬಂದಾಗ ಕಾರ್ಮಿಕರನ್ನು ಕುರಿಗಳಂತೆ ಬಳಸಿಕೊಳ್ಳಲು ಇದು ಸಹಾಯ ಮಾಡುತ್ತದೆಯಲ್ಲವೆ?

"ಅಯೋಧ್ಯಾಕಾಂಡ" ಕೋಮುವಾದಿ ವಿರೋಧಿ ಹೋರಾಟಕ್ಕೆ ನಮ್ಮ ಕಾಣಿಕೆ

'ರಾಕ್ಷಸ ಕಂಸನ ಮಥುರೆಯ ಮೇಲೆ ಘನ ಘೋರಾಂಧತೆ ಕವಿದಿತ್ತು'. ಆದರೆ ಡಿಸೆಂಬರ್ 6ರ ಅಯೋಧ್ಯೆಯ ನಂತರ ದೇಶಕ್ಕೆಲ್ಲಾ ಗ್ರಹಣ ಬಡಿಯಿತು. ದಿನನಿತ್ಯ ಸಾವುಗಳು ಲಕ್ಷಾಂತರ ಜನರ ನೋವುಗಳು......

"ಈ ಸಾವು ಸಂಕಟಕೆ ನೋವು ನರಳಿಕೆಗಳಿಗೆ ಇಲ್ಲವೇನು ಕೊನೆಯು?" ಇಲ್ಲವೇನು ಕೊನೆಯು? ಎಂಬ ಪ್ರಶ್ನೆ ಎಲ್ಲರ ಮುಂದಿದೆ. ನೋವುಗಳಿಗಾಗಿ ಮಿಡಿಯುತ್ತಿರುವ ಹೃದಯಗಳನ್ನು ಹುಡುಕುತ್ತಾ "ಐಕ್ಯರಂಗ" "ಅಯೋಧ್ಯಾಕಾಂಡ" ಎಂಬ ವಿಶೇಷ ಪುರವಣಿಯನ್ನು ಆರಂಭಿಸುತ್ತಿದೆ. ಈ ಕೆಲಸ ಭಾರತವನ್ನು ಕಟ್ಟುವ ಕೆಡಹುವ ಮಹಾ ಸಂಘರ್ಷದಲ್ಲಿ ಒಂದು ರಣಭೇರಿಯಾಗಿ ಮಿಡಿಯುತ್ತಿರುವ ಹೃದಯಗಳನ್ನು ಹೋರಾಟಕ್ಕೆ ಸೆಳೆಯಲಿ ಎಂಬ ಹಂಬಲ ನಮ್ಮದು. ಈ ಪುರವಣಿಯನ್ನು ಕೋಮು ಸೌಹಾರ್ದ ಬೇಕೆನ್ನುವ ಜನಸಮುದಾಯಕ್ಕೆ ಮುಟ್ಟಿಸುವ ಮೂಲಕ ಈ ಹಂಬಲವನ್ನು ಸಾಕಾರಗೊಳಿಸಬೇಕೆಂದು ಕೋರುತ್ತೇವೆ.



ಅಯೋಧ್ಯಾಕಾಂಡ
'ಐಕ್ಯರಂಗ' ವಾರಪತ್ರಿಕೆಯ ಪುರವಣಿ

ಹಿಂದೂ - ಮುಸ್ಲಿಂ ಮತಾಂಧರ ಮನಸೊಂದೆ, ಕನಸೊಂದೇ

ಸೀತಾರಾಂ ಯೆಚೂರಿ

ನಮ್ಮ ಭಾಗದಲ್ಲಿ ಅಲ್ಲಾನ ಶಾಸನಗಳನ್ನು ಜಾರಿಗ ತರುತ್ತೇವೆ, ನಿಮ್ಮ ಭಾಗದಲ್ಲಿ ವೇದ-ಪುರಾಣಗಳ, ಮನುಸ್ಮೃತಿಯ ಶಾಸನಗಳನ್ನ ಜಾರಿಗೆ ತನ್ನಿ ಎಂದು ಮೌಲಾನಾ ಮೌದೂದಿಯ ಹಾಗೂ ಮನು ವಿಶ್ವದ ಅತ್ಯಂತ ಮಹಾನ್, ಬುದ್ಧಿಶಾಲೀ ಶಾಸನ ಕತ್ರ ಎಂದ ಗೋಲ್ವಾಲ್ಕರ್ ಅಭಿಪ್ರಾಯದಲ್ಲಿ ನಿಮಗೇನಾದರೂ ವ್ಯತ್ಯಾಸ ಕಾಣುತ್ತಿದೆಯೇ? ಇವರಿಬ್ಬರಿಗೂ ಹಿಟ್ಲರ್ ದೊಡ್ಡ ಹೀರೋ ಎಂಬುದು ಗೊತ್ತೆ? ಜಾತ್ಯತೀತತೆ, ಪ್ರಜಾಪ್ರಭುತ್ವದ ವಿಷಯದಲ್ಲೂ ಜಮಾತ್-ಎ-ಇಸ್ಲಾಮಿ ಹಾಗೂ ಆರ್.ಎಸ್.-ಎಸ್. ನಡುವೆ ಎಷ್ಟೊಂದು ಬದ್ಧತೆ ಇದೆಯೆಂಬುದು ನಿಮ್ಮ ಅರಿವಿಗೆ ಬಂದಿದೆಯೇ?

ಅಷ್ಟೇ ಅಲ್ಲ, ಸ್ವಾತಂತ್ರ್ಯ ಹೋರಾಟದ ಬಗ್ಗೆಯೂ ಇಬ್ಬರ ನಿಲುವೂ ಒಂದೇ ಆಗಿತ್ತು ಎಂಬುದು ನಿಮಗೆ ತಿಳಿದಿದೆಯೇ?

ಆದ್ದರಿಂದ ಈ ಎರಡೂ ಮತಾಂಧ ಶಕ್ತಿಗಳು ಏನೇ ಪರಸ್ಪರ ವೈರತ್ವವಿದ್ದರೂ ಅವರಿಬ್ಬರ ಕನಸೂ ಒಂದೇ- ಹಿಂದೂ ಮತ್ತು ಮುಸ್ಲಿಮರ ಹಿತಾಸಕ್ತಿಗಳಿಗೆ ವಿರುದ್ಧವಾದ ಕನಸದು ಎನ್ನುತ್ತಾರೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಕಾಂ. ಸೀತಾರಾಂ ಯೆಚೂರಿ.

ಮುಸಲ್ಮಾನ ಜನಸಾಮಾನ್ಯರು ಇದನ್ನರಿತು ಗಣತಂತ್ರದಿನದ ಬಹಿಷ್ಕಾರದ ಕರೆಯನ್ನು ತಿರಸ್ಕರಿಸಿದ್ದಾರೆ. ಒಂದು ಆಧುನಿಕ ಜಾತ್ಯತೀತ ಪ್ರಜಾಪ್ರಭುತ್ವ ಭಾರತದಲ್ಲಿ ಮಾತ್ರ ತಮಗೆ ನಿಜವಾದ ಭದ್ರತೆ ಸಿಗಬಲ್ಲದು ಎಂಬುದನ್ನು ಮುಂದೆಯೂ ನೆನಪಿನಲ್ಲಿಟ್ಟುಕೊಂಡು ಜಾತ್ಯಾತೀತ ಪ್ರಜಾಪ್ರಭತ್ವ ಶಕ್ತಿಗಳೊಂದಿಗೆ ಅದು ಸೇರಿಕೊಳ್ಳಬೇಕು ಎನ್ನುತ್ತಾರೆ ಕಾಂ. ಯೆಚೂರಿ.



...ಯಾರು ಹಿತವರು?

ಕೃಪೆ: ಪಿ.ಮುಹಮ್ಮದ್

ಕಾವಿಪಡೆಯ ಧ್ವಂಸ ಕಾರ್ಯ ಮುಂದುವರೆದಿದೆ. ರಾಜಕೀಯ ಆಕಾಂಕ್ಷೆ ಈಡೇರಿಸಿಕೊಳ್ಳಲು ಕೋಮು ದ್ವೇಷವ ಊರಿ ಹಬ್ಬುವ ಕೆಲಸ ಸಾಗಿಯೇ ಸಾಗಿದೆ. ಪರಿಣಾಮವಾಗಿ ಸಾವು-ನೋವಿನ ಸರಣಿ ಮುಂದುವರಿಯುತ್ತಲೇ ಇದೆ. ಇಂತಹುದೇ ಒಂದು ಸನ್ನಿವೇಶದಲ್ಲಿ ರವೀಂದ್ರನಾಥ ಠಾಗೋರರ ಶಕ್ತಿ ಶಾಲೀ ವಾಣಿಯಿಂದ ಹೊರಹೊಮ್ಮಿದ ಸಾಲುಗಳು ನೆನಪಾಗುತ್ತವೆ-

ಹೆಂಗಸರು ಮಕ್ಕಳನ್ನೂ
ಬಿಡದ ಭಯಾನಕ ಹಸಿವಿನ
ಈ ನರಭಕ್ಷಕನನ್ನು
ಶಪಿಸಿ ಹಾಕಲು
ನನಗೆ ಗುಡುಗಿನ
ಒಂದು ದನಿ ಕೊಡು-

ಹೌದು, ರವೀಂದ್ರನಾಥ್ ಠಾಗೋರ್ ಜಲಿಯನ್-ವಾಲಾಬಾಗ್ ಹತ್ಯಾಕಾಂಡಕ್ಕೆ ಪ್ರತಿಭಟನೆಯಾಗಿ ಬ್ರಿಟಿಷ್ ಸರಕಾರ ನೀಡಿದ್ದ 'ಸರ್' ಪ್ರಶಸ್ತಿಯನ್ನು ಹಿಂದಿರುಗಿಸಿದಾಗ ಜಾತಿ, ಮತ, ಭಾಷೆಯ ಭೇದವಿಲ್ಲದೆ ಪ್ರತಿಯೊಬ್ಬ ಭಾರತೀಯನೂ ಹೆಮ್ಮೆ ಪಟ್ಟ ದಿನಗಳವು.

ಹೌದು, ಜಲಿಯನ್‌ವಾಲಾಬಾಗ್ ಹತ್ಯಾಕಾಂಡಕ್ಕೆ ಪ್ರತ್ಯುತ್ತರವಾಗಿ ಒಬ್ಬ ಬ್ರಿಟಿಷ್ ಅಧಿಕಾರಿಯನ್ನು ಗುಂಡಿನಿಂದ ಉರುಳಿಸಿದ್ದಕ್ಕಾಗಿ ಲಂಡನ್‌ನಲ್ಲಿ ಬಂಧಿತನಾದ ಉಧಮ್‌ಸಿಂಗ್ ನನ್ನ ಹೆಸರು "ರಾಮ್ ಮೊಹಮ್ಮದ್ ಸಿಂಗ್" ಎಂದು ಪ್ರತಿಯೊಬ್ಬ ಭಾರತೀಯನೂ ಹೆಮ್ಮೆ ಪಟ್ಟಿದ್ದ ದಿನಗಳವು. ಇಂತಹ ವಿಚಿತ್ರ ಹೆಸರು ಹೇಗೆ ಎಂದು ಪ್ರಶ್ನಿಸಿದಾಗ ಬ್ರಿಟಿಷ್ ಸಾಹುಕಾರರಾಹಿಂಗಳಿಂದ ಸೇಡು ತೀರಿಸಿಕೊಳ್ಳಲು ಬಂದಿರುವುದು ಒಬ್ಬ ಹಿಂದೂ, ಮುಸಲ್ಮಾನ ಅಥವಾ ಸಿಖ್ ಅಲ್ಲ, - ಒಬ್ಬ ಭಾರತೀಯ ಎಂದು ಉತ್ತರಿಸಿದ 'ರಾಮ್ ಮೊಹಮ್ಮದ್ ಸಿಂಗ್.'

ಹೌದು, ನಮ್ಮ ದೇಶದ ಪರಂಪರೆಯಲ್ಲಿನ ಹಲವಾರು ರೀತಿಯ ಭಿನ್ನತೆಗಳನ್ನೆಲ್ಲಾ ಮೀರಿ ನಿಂತ ಒಬ್ಬ ಭಾರತೀಯ. ಅಂದಿನಿಂದಲೂ ನಮ್ಮ ಕನಸಿನ ಭಾರತ "ಎಲ್ಲಿ ಮನಕೆ ಅಳುಕಿರದೋ, ಎಲ್ಲಿ ತಲೆಬಾಗಿರದೋ" ಅಂತಹ ಒಂದು ದೇಶ.

ಆದರೆ ಇಂದು ಕೋಟ್ಯಾಂತರ ಭಾರತೀಯರ ಮನಸ್ಸು ಭಯದಿಂದ, ನಮಗೆ ಭದ್ರತೆಯಿಲ್ಲ ಎಂಬ ಭಾವನೆಯಿಂದ ತುಂಬಿದೆ. ಮಧ್ಯಯುಗದ ಕ್ರೌರ್ಯವನ್ನು ನೆನಪಿಸುವ ರಕ್ಕಸತನ ಕಂಡ ದೇಶ ನಾಚಿಕೆಯಿಂದ ತಲೆತಗ್ಗಿಸುವಂತಾಗಿದೆ. ದೇಶದ ಶತ್ರುಗಳಿಗೆ ಆತ್ಮವನ್ನು ಮಾರಿಕೊಂಡಿರದ ಪ್ರತಿಯೊಬ್ಬ ದೇಶಪ್ರೇಮಿಯೂ ಈ ಸವಾಲನ್ನೂ ಎದುರಿಸಬೇಕಾದ ಸನ್ನಿವೇಶದಲ್ಲಿದ್ದಾನೆ. ನಮಗೆ ಒಂದು ಆಧುನಿಕ ಜಾತ್ಯತೀತ ಪ್ರಜಾಪ್ರಭುತ್ವ ಭಾರತ ಬೇಕೋ ಅಥವಾ ಸಮಾನತೆ, ಸ್ವಾತಂತ್ರ್ಯದ ಸುಳಿವಿರದ ಮಧ್ಯಯುಗದ ಮತೀಯ ರಾಜ್ಯಭಾರ ಬೇಕೋ ಎಂದು ನಿರ್ಧರಿಸಬೇಕಾದ ಸನ್ನಿವೇಶದಲ್ಲಿದ್ದಾನೆ.

ಮತೀಯ ರಾಜ್ಯಭಾರ ಬೇಕೆನ್ನುವ ಕಾವಿಪಡೆಗಳ ಮಂದಿ ದೇಶವನ್ನೂ ಒಡೆದು ನಾಶಮಾಡುವ ಮಾತುಗಳನ್ನು ಬಹಿರಂಗವಾಗಿಯೇ ಆಡುತ್ತಿದ್ದಾರೆ. ಶಿವಸೇನಾ ಮುಖ್ಯಸ್ಥ ಬಾಳಠಾಕ್ರೆ ಪಶ್ಚಾತ್ತಾಪದ ಸುಳಿವೂ ಇಲ್ಲದೆ ಮುಂಬೈಯ ಧ್ವಂಸಕಾರ್ಯ ನಡೆಸಿದವರು ತಾವೇ ಎಂದು ಎದೆಯುಬ್ಬಿಸಿ ಹೇಳುತ್ತಿದ್ದಾರೆ. ಮಹಾರಾಷ್ಟ್ರದಲ್ಲಿ ಶಿವಸೇನೆ, ಕೇಂದ್ರದಲ್ಲಿ ಬಿ.ಜೆ.ಪಿ. ರಾಜಕೀಯ ಅಧಿಕಾರ ಗಿಟ್ಟಿಸಿದಾಗಲಷ್ಟೇ ಶಾಂತಿ ನೆಲೆಸಲು ಸಾಧ್ಯ ಎಂದು ಹೇಳಿದ್ದಾರೆ. (ನ್ಯೂಸ್ ಟೈಮ್, ಜನವರಿ 22, 1993) ಈ ರಕ್ತಪಾತದ ಗುರಿಯೇನು ಎಂಬುದಕ್ಕೆ ಇದಕ್ಕಿಂತ ಸ್ಪಷ್ಟ ಸಾಕ್ಷಿ ಬೇಕೇ? ದಿಲ್ಲಿಯಲ್ಲಿ ಬಿ.ಜೆ.ಪಿ. ಎಂ.ಪಿ. ಮದನ್‌ಲಾಲ್ ಖುರಾನಾ "ಬಾಂಗ್ಲಾ ದೇಶದಿಂದ ನುಸುಳಿ ಬಂದವರ" ಬಗ್ಗೆ ಉತ್ಪ್ರೇಕ್ಷೆಯ ಮಾಡುತ್ತಾ ಮುಸ್ಲಿಂ- ವಿರೋಧಿ ಉದ್ರೇಕ ಎಬ್ಬಿಸಿ ದಿಲ್ಲಿಯನ್ನು ಇನ್ನೊಂದು ಮುಂಬೈಯಾಗಿಸುವ ಬೆದರಿಕೆ ಹಾಕಿದ್ದಾರೆ. ಮೊನ್ನೆ-ಮೊನ್ನೆ ಸಂವಿಧಾನ 'ಹಿಂದೂ-ವಿರೋಧಿ' ಎಂದು ಬೊಬ್ಬೆಹಾಕಿದ ಸಾಧು-ಸಂತರೆಂದುಕೊಳ್ಳುವವರ "ಧರ್ಮಸಂಸದ್" ಕೇಂದ್ರದಲ್ಲಿ ಬಿ.ಜೆ.ಪಿ. ಸರಕಾರ ಬಂದರೆ ಮಾತ್ರವೇ ಅಯೋಧ್ಯೆಯಲ್ಲಿ ದೇವಸ್ಥಾನ ಕಟ್ಟಲು ಸಾಧ್ಯ ಎಂದು ಬಹಿರಂಗವಾಗಿಯೇ ಘೋಷಿಸಿದೆ. ಆಹಾ! ಎಂತಹ ಧಾರ್ಮಿಕ ಮುಖಂಡರು! ಕಾವಿಪಡೆಗಳ ರಾಜಕೀಯ ಆಕಾಂಕ್ಷೆಗೆ ಅನುಗುಣವಾಗಿ ರಚಿಸಿಕೊಂಡ 'ಧಾರ್ಮಿಕತೆ'! ಈ ನಡುವೆ ಮುಸ್ಲಿಮರ ಮೇಲೆ ಮಾತ್ರವಲ್ಲ, ಜಾತ್ಯತೀತ ಹಿಂದೂಗಳ ಮೇಲೂ ಹಲ್ಲೆ ಅವ್ಯಾಹತವಾಗಿ ಸಾಗಿದೆ. ಸೂರತ್, ಮುಂಬೈಯಿಂದ ಬಂದಿರುವ ವರದಿಗಳನ್ನೂ ನೋಡಿದರೆ ಮಧ್ಯಯುಗದ ಕ್ರೂರಿಗಳೂ ನಾಚಿಕೆಪಡುತ್ತಿದ್ದರೇನೋ.


ಸಹಜವಾಗಿಯೇ ಕಾವಿಪಡೆಗಳ ಈ ಎಲ್ಲಾ ತಂತ್ರಗಳು ಅವರು ಬಯಸಿದಂತೆ ಅಲ್ಪಸಂಖ್ಯಾತರಲ್ಲಿ ಅಭದ್ರತೆ ಭಾವನೆ ಹುಟ್ಟಿಸುತ್ತಿದೆ. ಇದಕ್ಕೆ ಪ್ರತಿಯಾಗಿ ಉಗ್ರ ನಿಲುವು ತಳೆಯುವ ಮೂಲಭೂತವಾದಿ ಶಕ್ತಿಗಳಿಂದ ಬೆಂಕಿಗೆ ತುಪ್ಪ ಸುರಿದಂತಾಗುತ್ತಿದೆ. ಆದರೆ ಗಣತಂತ್ರದಿನವನ್ನು ಬಹಿಷ್ಕರಿಸುವ ಅವಿವೇಕದ ಪ್ರಯತ್ನವನ್ನು ಮುಸ್ಲಿಮ ಒಂದು ಪ್ರಭಾವಶಾಲಿ ವಿಭಾಗವೇ ತಿರಸ್ಕರಿಸಿತು. ಇನ್ನೂ ಮಹತ್ವಪೂರ್ಣ ಸಂಗತಿಯೆಂದರೆ ಮುಸ್ಲಿಂ ಮೂಲಭೂತವಾದಿ ಮುಖಂಡರು ಮುಸ್ಲಿಮರನ್ನು ಜಾತ್ಯತೀತ ಪ್ರಜಾಪ್ರಭುತ್ವ ಧಾರೆಯಿಂದ ದೂರವಿಡಲು ಪ್ರಯತ್ನಿಸುತ್ತಿದ್ದಾರೆ ಎಂದು ಮುಸ್ಲಿಂ ಬುದ್ಧಿಜೀವಿಗಳು ಆಪಾದಿಸಿದರು.

ಮುಸ್ಲಿಮರ ನಡುವಿನಿಂದ ಬಂದಿರುವ ಈ ದೇಶಪ್ರೇಮಿ ಧ್ವನಿ ಸ್ವಾಗತಾರ್ಹ. ಆದರೆ ಮುಸ್ಲಿಂ ಮೂಲಭೂತವಾದಿ ಶಕ್ತಿಗಳು ಮುಸ್ಲಿಮರಲ್ಲಿ ಈಗ ಹುಟ್ಟಿರುವ ಅಭದ್ರತೆಯ ಭಾವನೆಯ ಪ್ರಯೋಜನ ಪಡೆಯಲು ಪ್ರಯತ್ನಿಸುತ್ತಾರೆ ಎಂಬುದನ್ನು ಒತ್ತಿ ಹೇಳಬೇಕಾಗುತ್ತದೆ. ಈ ಇಂತಹ ಮುಸ್ಲಿಂ ಮತಾಂಧತೆ ಹಿಂದೂ ಮತಾಂಧತೆಯನ್ನು ಇನ್ನಷ್ಟು ಪೋಷಿಸಿ ಬಲಗೊಳಿಸುವ ಆಹಾರ. ನಮ್ಮ ದೇಶದಲ್ಲಿ

ಪುಟ 4ಕ್ಕೆ

ಕತ್ತಲನ್ನು ಸೀಳಿ ಮುನ್ನುಗ್ಗಿದ ಮೆರವಣಿಗೆ
ಮಂಗಳೂರು ವರದಿ
ಪುಟ 4 ನೋಡಿ

ಎಂ.ವಿ. ಕಾಮತರ ಮುತ್ತಿನಂತ ಚಿಂತನೆಗಳು!



ಫೆಬ್ರವರಿ 25ರಂದು ನಡೆಸಲು ಬಿಜೆಪಿ ಯೋಜಿಸಿದ್ದ ರ್‍ಯಾಲಿಯನ್ನು ನಿರ್ಬಂಧಿಸಿದರೂ ಕಷ್ಟ, ನಿರ್ಬಂಧಿಸದಿದ್ದರೂ ಕಷ್ಟ - ಇದು ದೆಹಲಿ ಪೋಲೀಸರ ಭಯವಂತೆ. ಬಿಜೆಪಿ ವಚನ ಮುರಿಯುವುದರಲ್ಲಿ ದಾಖಲೆ ಸ್ಥಾಪಿಸಿರುವುದ ಇದಕ್ಕೆ ಒಂದು ಕಾರಣವಾದರೆ, ತಮ್ಮ ಹಿಂಬಾಲಕರನ್ನು ಹತೋಟಿಯಲ್ಲಿಡಲು ಬಿಜೆಪಿ ಮುಖಂಡತ್ವ ಅಸಮರ್ಥವಾಗಿದೆ ಎಂಬ ಭಯ ಇನ್ನೊಂದು ಕಾರಣವಂತೆ.

* * * * * * * * *

ಆದರೆ ಬಿಜೆಪಿಯ ಒಬ್ಬ ಮುಖಂಡ ಹಾಗೂ ಎಂಪಿ ಶ್ರೀ ಒ.ರಾಜಗೋಪಾಲ್ ಪ್ರಕಾರ ಫೆಬ್ರವರಿ 25ರ ರ್‍ಯಾಲಿ ಸಂಪೂರ್ಣ ಶಾಂತಿಯುತವಾಗಿರುತ್ತಿತ್ತು. ಏಕೆ? ಏಕೆಂದರೆ ಕರಸೇವೆ ಸಂಘಟಿಸಿದ್ದವರಲ್ಲಿ ಇತರ ಸಂಘಟನೆಗಳೂ ಇದ್ದವು. ಈ ರ್‍ಯಾಲಿ ಬಿಜೆಪಿಯದು ಮಾತ್ರ!(ಟೈಮ್ಸ್ ಆಫ್ ಇಂಡಿಯಾ, ಫೆ. 8) ಅಂದರೆ ಡಿಸೆಂಬರ್ 6 ರ 'ಅಶಾಂತಿಯುತ'ವಾಗಿರಲು ಆ ಇತರ ಸಂಘಟನೆಗಳೇ ಕಾರಣವೇ? ಹಾಗಿದ್ದರೆ ಈ ಅಶಾಂತಿಗೆ ಕಾರಣವಾದ ಸಂಘಟನೆಗಳ ಮೇಲಿನ ನಿರ್ಬಂಧ ತೆಗೆಯಬೇಕೆಂಬುದು ಈ ಬಿಜೆಪಿ ರ್‍ಯಾಲಿಯ ಒಂದು ಮುಖ್ಯ ಬೇಡಿಕೆ ಏಕಾಗಬೇಕು?

* * * * * * * * *

ಪಾಟ್ನಾದ ಬಿಜೆಪಿಯ ಫೆ. 7ರ ರ್‍ಯಾಲಿಯಲ್ಲಿ ಸಿನಿಮಾ ತಾರೆ ಶತ್ರುಘ್ನ ಸಿನ್ಹಾರ ನೇತೃತ್ವದಲ್ಲಿ ಹಲವು ಭಾಷಣಕಾರರ ಬಾಯಿಂದ 'ಜೈ ಶ್ರೀರಾಮ್' ಮತ್ತು 'ಅಡ್ವಾಣಿ ಮುಂದಿನ ಪ್ರಧಾನಿ' ಎಂಬ ಮಾತು ಒಟ್ಟೊಟ್ಟಿಗೆ ಪದೇ ಪದೇ ಬಂತಂತೆ. ಆದರೆ ಪಾಟ್ನಾ ರ್‍ಯಾಲಿಯಲ್ಲಿ ಈ "ಭವಿಷ್ಯದ ಪ್ರಧಾನಿ" ಅಯೋಧ್ಯೆಯ ವಿಷಯ ಬಿಟ್ಟು ಬೇರೇನೂ ಮಾತಾಡಲೇ ಇಲ್ಲವಂತೆ. ಬಿಹಾರಕ್ಕೆ ಭಯವನ್ನುಂಟುಮಾಡಿರುವ ಕ್ಷಾಮವಂತೂ ಅವರ ಗಮನಕ್ಕೆ ಬರಲಿಲ್ಲ ಎನ್ನುತ್ತಾರೆ 'ಟೈಮ್ಸ್ ಆಫ್ ಇಂಡಿಯಾ' ದ ವರದಿಗಾರ(ಫೆ. 9)

* * * * * * * * *

ವಚನ ಭ್ರಷ್ಟತೆಯ ತಪ್ಪೊಪ್ಪಿಕೊಂಡು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಕಲ್ಯಾಣ್‌ಸಿಂಗ್ ಕಲ್ಕತ್ತೆಗೆ ಹೋದಾಗ ಒಬ್ಬ ದೊಡ್ಡ ಉದ್ಯಮಪತಿಯೊಬ್ಬರ(ಬಂಡವಾಳಗಾರರ) ನಿವಾಸದಲ್ಲಿ ತಂಗಿದ್ದರು ಎಂದು ಕೋಮುವಾದದ ಅಪಾಯದ ಬಗ್ಗೆ ವಿಚಾರಗೋಷ್ಠಿಯಲ್ಲಿ ಮಾತಾಡುತ್ತಾ ಜ್ಯೋತಿ ಬಸು ಹೇಳಿದರಂತೆ(ಸಂಯುಕ್ತ ಕರ್ನಾಟಕ, ಫೆ. 11).

* * * * * * * * *

ಆದರೆ ಇದು ಕೇವಲ ಕಮ್ಯುನಿಸ್ಟರ ಆಪಾದನೆಯಲ್ಲ ಎಂಬುದು ಫೆಬ್ರವರಿ 2ರ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಸುದ್ದಿಯನ್ನು ಓದಿದಾಗ ತಿಳಿಯುತ್ತದೆ. ಈ ಬಾರಿ ಉದ್ಯಮಿಗಳು ತಮಗೆ ಖಂಡಿತಾ ಬೆಂಬಲ ನೀಡುತ್ತಾರೆ ಎಂದು ಬಿಜೆಪಿ ಮುಖಂಡರು ಹೇಳಿಕೊಳ್ಳುತ್ತಿದ್ದಾರಂತೆ. ಏಕೆ! "ಏಕೆಂದರೆ ನಮ್ಮ ಆರ್ಥಿಕ ಪ್ರಣಾಳಿಕೆ ಭಾರತೀಯ ಉದ್ಯಮಿಗಳ ಆಕಾಂಕ್ಷೆಗಳನ್ನು ಬಹಳ ನಿಕಟವಾಗಿ ಪ್ರತಿಬಿಂಬಿಸುತ್ತದೆ. ನಿಮಗೆ ಗೊತ್ತಿಲ್ಲವೇ? ಆಂತರಿಕ ಉದಾರೀಕರಣವನ್ನು ನಾವು ಬೆಂಬಲಿಸುತ್ತೇವೆ. ಬಾಹ್ಯ ಉದಾರೀಕರಣವನ್ನು ನಾವು ವಿರೋಧಿಸುತ್ತೇವೆ" ಹಾಗೆಂದರೇನು? ಬೆಜೆಪಿಯವರಿಗೂ ಗೊತ್ತಿಲ್ಲ!

* * * * * * * * *

"ಮುಸ್ಲಿಮರಿಗೆ ಒಳ್ಳೆ ಪಾಠ ಕಲಿಸಿದ್ದಾರೆ" ಎಂದಿದ್ದಾರಂತೆ ಶಿವಸೇನೆಯ ಬಾಳಠಾಕ್ರೆ.(ಟೈಮ್ಸ್ ಆಫ್ ಇಂಡಿಯಾ, ಜನವರಿ 25). "ಮುಸ್ಲಿಮರಿಗೆಲ್ಲಾ ಅದೊಂದು(ಬಾಬ್ರಿ ಮಸೀದಿಗಾಗಿ ಹೋರಾಟ) ಪ್ರತಿಷ್ಠೆಯ ಪ್ರಶ್ನೆಯಾಗಿತ್ತು. ಆದುದರಿಂದಲೇ ಇಷ್ಟೆಲ್ಲಾ ರಾದ್ಧಾಂತಕ್ಕೆ ಕಾರಣವಾಯಿತು" - ಇದು ಬಾಳಠಾಕ್ರೆಯ ಮಾತಲ್ಲ ಸ್ವಾಮಿ. ಪ್ರಸಿದ್ಧ ಪತ್ರಕರ್ತ ಎಂ.ವಿ. ಕಾಮತರ ಗಹನಚಿಂತನೆಯಿಂದ ಮೂಡಿದ ಅಭಿಪ್ರಾಯ!(ಉದಯವಾಣಿ, ಫೆ. 9) ಇವೆರಡರಲ್ಲಿ ಏನಾದರೂ ಸಾಮ್ಯತೆ ಕಂಡರೆ ಅದಕ್ಕೆ ನಿಮ್ಮ 'ಪೊಳ್ಳು ಜಾತ್ಯಾತೀತತೆ'ಯೇ ಕಾರಣ.

* * * * * * * * *

'ಈ ಪೊಳ್ಳು ಜಾತ್ಯಾತೀತವಾದಿಗಳು ಅವರದೇ ಆದ ಪ್ರತ್ಯೇಕ ಸಂಕುಚಿತ ಸಮಾಜವೊಂದನ್ನು ನಿರ್ಮಿಸಿಕೊಂಡಿದ್ದಾರೆ - ಇದು ಅಡ್ವಾಣಿಯವರ ಅಥವಾ ಹೊ.ವೆ. ಶೇಷಾದ್ರಿಯವರ ವಾಣಿಯೆಂದುಕೊಂಡಿರಾ? ಇಲ್ಲ ಇದೂ ಕಾಮತರ ನುಡಿ ಮುತ್ತು.'

* * * * * * * * *

ಡಿಸೆಂಬರ್ 6ರ ಮತ್ತು ಬಹುಶಃ ಜನವರಿ 6ರ ಮುಂಬೈ "ಪಾಠ"ದ ನಂತರ "ಹೊಸ ಸ್ವರೂಪ ಮುಸ್ಲಿಂ ನಾಯಕತ್ವವೊಂದು ಭಾರತದಲ್ಲಿ ರೂಪುಗೊಳ್ಳುತ್ತಿದೆ. ಅವರೆದುರು ಪೊಳ್ಳು ಜಾತ್ಯಾತೀತವಾದಿಗಳೆಲ್ಲ ಮುಖಮುಚ್ಚಿ ನಾಲಿಗೆ ಬಿಗಿ ಹಿಡಿದು ಕೂರುವ ಪರಿಸ್ಥಿತಿ ಬಂದಿದೆ" ಎಂದು ಅವರಿಗೆ ಹಿಗ್ಗೋ ಹಿಗ್ಗು - ಶತ್ರುಘ್ನ ಸಿನ್ಹಾರಿಗೆ 'ಭವಿಷ್ಯದ ಪ್ರಧಾನಮಂತ್ರಿ'ಯ ಪಕ್ಕದಲ್ಲಿ ನಿಂತುಕೊಂಡಷ್ಟು?

* * * * * * * * *

ಬಹುಶಃ ಸಾಧು-ಸಂತರುಗಳು ಮತ್ತೆ ಮನುಸ್ಮೃತಿ, ಜಾತಿ ಪದ್ಧತಿ, ಅಸ್ಪೃಶ್ಯತೆಯ 'ಸನಾತನ ಪರಂಪರೆ'ಯ ಮೇಲೆ ನಿಂತ 'ಹಿಂದೂ ಸಂವಿಧಾನ' ತರಬೇಕೆಂದು ಹೇಳಿರುವುದನ್ನು ಕೇಳಿ, ಪಾಟ್ನಾದಲ್ಲಿ ಬಿಜೆಪಿ ರ್‍ಯಾಲಿಯ ವೇಳೆ ಗಾಂಧೀಜಿಯ ಹಣೆಗೆ 'ಕಾವಿಪಟ್ಟಿ' ಕಟ್ಟಿದ್ದನ್ನು, ಬಿಜೆಪಿಯವರ ಕನ್ನಡಕ್ಕೆ ಕೆಟ್ಟದಾಗಿ ಬಿಜೆಪಿ ಬಾವುಟವನ್ನು ಕಟ್ಟಿದ್ದನ್ನು ಕಂಡು ಕೂಡಾ ಅಷ್ಟೇ ಹಿರಿ ಹಿರಿ ಹಿಗ್ಗಿರಬಹುದೇ? ನಮಗೆ ಗೊತ್ತಿಲ್ಲ.

* * * * * * * * *

'ಉದಯವಾಣಿ' ಪತ್ರಿಕೆಯ ಅವರ ವಾರದ ಅಂಕಣದ ಇಂತಹ ನುಡಿಮುತ್ತಿಗಳ ಪಟ್ಟಿಯನ್ನೇ ಮಾಡಬಹುದು. ಆದರೆ ಒಂದನ್ನು ಮಾತ್ರ ಎಲ್ಲಾ 'ಪೊಳ್ಳು ಜಾತ್ಯಾತೀತವಾದಿ'ಗಳು ಗಮನಿಸಬೇಕು - ಅದರಲ್ಲೂ 'ಹಿಂದೂ ಜಾತ್ಯಾತೀತವಾದಿಗಳು'! ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಒಮ್ಮೆಯಾದರೂ ದೇವಸ್ಥಾನವೊಂದಕ್ಕೆ ನೀವು ಭೇಟಿ ನೀಡಿದ್ದೀರಾ? ಹಾಗಿದ್ದರೆ ನಿಮಗೆ 'ಹಿಂದುತ್ವ'ವನ್ನು ಗೇಲಿ ಮಾಡುವ ಹಕ್ಕೇನಿದೆ?

* * * * * * * * *

ಕಾಮತರಂತಹ 'ಹಿಂದುತ್ವ' ಯಾವುದಾದರೂ ದೇವಸ್ಥಾನದ ಕಂಡಿದೆಯೇ ಗೊತ್ತಿಲ್ಲ. "ಹಿಂದುತ್ವ"ವಾಲಾಗಳಿಗಂತಲೂ ಅದು ಕಂಡ ಬಿಜೆಪಿಯ ಚುನಾವಣಾ ಚಿಹ್ನೆ ಹೊತ್ತ ರಥಯಾತ್ರೆಗಳಲ್ಲಿ ಸಿನೆಮಾ, ಹೀರೋಗಳು 'ಭವಿಷ್ಯದ ಪ್ರಧಾನಿ'ಯ ಭಜನೆ ಮಾಡಿದ ರ್‍ಯಾಲಿಗಳಲ್ಲಿ ಅದಕ್ಕೆ ಮೋ... ಅವರು ಕಂಡ ಹಿಟ್ಲರ್‌ನ "ಆಮೋಘ ಸಾಧನೆ"ಗಳಲ್ಲಿ ಹಾಗೂ ಬಂಡವಾ... ರರಿಗೆ 'ಹಿಂದುತ್ವ' ಕಂಡದ್ದು ಬಿಜೆಪಿಯ 'ಆರ್ಥಿಕ ಪ್ರಣಾಳಿಕೆ'ಯಲ್ಲಿ ಎಂಬು... ಮರೆಯಬಿರಿ ಎನ್ನುವ ಹಕ್ಕಂತೂ ಕಾಮತರಿಗಿಲ್ಲ. ಅಲ್ಲವೇ?



ಅಯೋಧ್ಯಾಕಾಂಡ
'ಐಕ್ಯರಂಗ' ವಾರಪತ್ರಿಕೆಯ ಪುರವಣಿ



ಕತ್ತಲನ್ನು ಸೀಳಿ ಮುನ್ನುಗ್ಗಿದ ಮೆರವಣಿಗೆ

ಹಾಡಲಾಗುತ್ತದೆಯೇ
ಕರಾಳ ದಿನಗಳಲ್ಲಿ ಹಾಡು?
ಹೌದು, ಹಾಡಲಾಗುತ್ತದೆ
ಕರಾಳ ದಿನಗಳ ಪಾಡು
-ಬರ್ಟೋಲ್ ಬ್ರೆಕ್ಟ್

ಡಿಸೆಂಬರ್ 6 ಸಂಜೆ ಮಂಗಳೂರಿನ ಹಲವಾರು ಬೀದಿಗಳಲ್ಲಿ ಬಹಿರಂಗವಾಗಿ ಪಟಾಕಿ ಹಚ್ಚಿ ತಮ್ಮ ಸಂಭ್ರಮ ವ್ಯಕ್ತಪಡಿಸಿದವರಿದ್ದಾರೆ. 'ಬ್ಯಾರಿ'ಗಳಿಗೆಷ್ಟು ನಷ್ಟವಾಗಿದೆ ಎಂದು ಸಿಟಿ ಬಸ್ಸುಗಳಲ್ಲಿ ಮಾತಾಡಿಕೊಂಡು ಖುಷಿಪಟ್ಟುಕೊಂಡವರಿದ್ದಾರೆ. ಮಂಗಳೂರು ಹತ್ತಿ ಉರಿಯುವಾಗ 'ಬ್ಯಾರಿ'-ಗಳನ್ನು ಹುಡುಕಿ ಹೊಡೆಯಲು ಕೆಲ ಪೋಲಿಸರೇ ಹ್ಯಾಗೆ ಉತ್ತೇಜಿಸಿದರು ಎಂಬ ವರ್ಣನೆಯನ್ನು ಹೆಮ್ಮೆಯಿಂದ ಹೇಳಿಕೊಳ್ಳುವ ಯುವಕರು ನಿಮಗೆ ಸಿಗುತ್ತಾರೆ. ಬಹಿಷ್ಕೃತ ಆರ್.ಎಸ್.ಎಸ್.ದ ಉದ್ರೇಕಕಾರಿ ಭಿತ್ತಿ ಪತ್ರಗಳು ನಿರ್ಭಿಡೆಯಿಂದ ನಗರದ ಮುಖ್ಯ ಬೀದಿಗಳಲ್ಲಿ ಅಂಟಿಸಲಾಗುತ್ತದೆ. 'ಧರ್ಮ ಸಂಸತ್ ಮಾತ್ರ ನಮ್ಮ ಸಂವಿಧಾನ' ಎಂಬ ಕಾವಿ ಷರ್ಟ್‌ಗಳ ಅಹಂಕಾರದ ಉದ್ಘೋಷಗಳು ಜಿಲ್ಲೆಯ, ನಗರದ ಆಡಳಿತ ಸೂತ್ರಧಾರಿಗಳನ್ನು ಯಾವ ರೀತಿಯೂ ತಟ್ಟುವುದಿಲ್ಲ!

ದ.ಕ.ದಲ್ಲಿ ಯೌವನಕ್ಕೆ ಬಂದ ಯುವಕರ ಯುವತಿಯರ ಪ್ರೇಮ ಪ್ರಕರಣ ಕೂಡ ಕೋಮು ಗಲಭೆಯ ಸ್ವರೂಪ ಪಡೆದು ಇಡೀ ಬದುಕನ್ನೇ ತಲ್ಲಣಗೊಳಿಸಿಬಿಡುತ್ತದೆ. ಹೀಗೆ ಚಾಪೆ, ರಂಗೋಲಿಗಳ ಕೆಳಗೂ ನುಸುಳಿ ಕೂತು ಕರಾಮತ್ತು ನಡೆಸುವ, ಹಾಡುಹಗಲೆ ಕೋಮುವಾದಿ ಕರಾಳ ರಾಕ್ಷಸರು ರಾಜಾರೋಷವಾಗಿ ನಡೆದಾಡುವಂತಹ ಜಿಲ್ಲೆಯಲ್ಲಿ 'ಕರಾಳ ದಿನಗಳಲ್ಲಿ ಹಾಡು ಹಾಡಬಹುದೇ?' ಪ್ರಶ್ನೆ ಸಹಜ. ಆದರೆ 'ಕರಾಳ ದಿನಗಳ ಪಾಡಿನ' ಬಗ್ಗೆ 'ಹಾಡದಿದ್ದರೆ' ಕೋಮುವಾದಿಗಳಿಗೆ ಕರೆದು ಮಣೆ ಹಾಕಿ ರಾಜ್ಯಭಾರ ನಡೆಸಲು ಬಿಟ್ಟ ಹಾಗೆ ಎಂಬ ಪ್ರಜ್ಞೆಯಿಂದ ಮಾಡಿದ್ದೇ, "ದ.ಕ. ಜಿಲ್ಲಾ ಕೋಮುವಾದ ವಿರೋಧಿ ವೇದಿಕೆ." ಸಾಹಿತಿಗಳು, ಬುದ್ಧಿಜೀವಿಗಳು ವೈದ್ಯರು, ವಕೀಲರು, ವಿದ್ಯಾರ್ಥಿ ಯುವಜನರು, ಕಾರ್ಮಿಕರೊಳನ್ನೊಳಗೊಂಡ ಈ ವಿಸ್ತೃತ ವೇದಿಕೆಯ ಮುಂದೆ ಕೋಮುವಾದವನ್ನೆದುರಿಸಲು ಜವಾಬ್ದಾರಿಯುತ ಕಾರ್ಯಕ್ರಮ ರೂಪಿಸುವ ಹೊಣೆಗಾರಿಕೆಯಿದೆ.

ವ್ಯಾಪಕ ಪ್ರಚಾರ

ಈ ಹಿನ್ನೆಲೆಯಲ್ಲಿ, ಜನವರಿ 30,1948 ರ ಕೃತ್ಯವನ್ನು, ಡಿಸೆಂಬರ್ 6,1992 ಕೃತ್ಯದೊಟ್ಟಿಗೆ ಇಟ್ಟು ಆಧುನಿಕ ಭಾರತದ ಪರಂಪರೆ ಮತ್ತು ಅದಕ್ಕೊದಗಿರುವ ಅಪಾಯಗಳ ಬಗ್ಗೆ ವಿವರಣೆ ನೀಡುವ 50,000 ಕರಪತ್ರಗಳು,ಸಾವಿರಕ್ಕು ಮಿಕ್ಕಿ ಪೋಸ್ಟರ್‌ಗಳು, ಮಂಗಳೂರು ನಗರದ ಪ್ರಮುಖ ಕಡೆಗಳಲ್ಲಿ ಗೋಡೆ ಬರಹಗಳು, ಜನವರಿ 30 ರ 'ಕೋಮುವಾದ ವಿರೋಧಿ ರ್‍ಯಾಲಿ'ಗೆ ಭದ್ರ ಭೂಮಿಕೆಯೊದಗಿಸಿದವು. ಇದರೊಟ್ಟಿಗೆ, ಕಾರ್ಮಿಕ ಮುಖಂಡರು, ವಿದ್ಯಾರ್ಥಿ ಯುವಜನ ನೇತಾರರು, ಸಾಹಿತಿ, ಬುದ್ಧಿಜೀವಿಗಳು, ಬೀದಿ ಬೀದಿಗಳಲ್ಲಿ ತಿರುಗಿ ಕಾರ್ಯಕ್ರಮದ ಮಹತ್ವವನ್ನು ಪ್ರಚಾರ ಮಾಡಿದರು. ಕುಂದಾಪುರದ ಸ್ಥಳೀಯ 'ಕೋಮುವಾದ ವಿರೋಧಿ ವೇದಿಕೆ' ಯು ಏರ್ಪಡಿಸಿದ ಜನವರಿ 26 ರ ರ್‍ಯಾಲಿ, ಉಡುಪಿಯ 'ಕೋಮುವಾದ ವಿರೋಧಿ ವೇದಿಕೆ' ಯ ವತಿಯಿಂದ ಕೋಮುವಾದಿಗಳ ಸುಳ್ಳು ಪ್ರಚಾರಗಳನ್ನು ಬಯಲು ಮಾಡುವ 15,000 ಕರಪತ್ರಗಳು ಮತ್ತು ಜ. 26 ರಂದು ಉಡುಪಿಯಲ್ಲಿ ಹೆಣೆಯಲಾದ ಮಾನವ ಸರಪಳಿ, ಜನವರಿ 30 ರ ರ್‍ಯಾಲಿಗೆ ಬೆನ್ನೆಲಬು ಒದಗಿಸಿದವು. ಸ್ಪಷ್ಟವಾಗಿಯೇ, ಈ ಎಲ್ಲ ಚಟುವಟಿಕೆಗಳು, ಕೋಮುವಾದಿಗಳಿಗೆ ಚಳಿ ಹುಟ್ಟಿಸಿದವು. ಈ ಕಾರ್ಯಕ್ರಮ ಪ್ರಚಾರವನ್ನು ವಿಫಲಗೊಳಿಸುವ ಸಲುವಾಗಿ ವಿವಿಧ ಯತ್ನಗಳನ್ನು ಕೋಮುವಾದಿಗಳು ಪ್ರಾರಂಭಿಸಿದರು. ರಾತ್ರಿಯಿಡೀ ಗೋಡೆ ಬರಹ ಮಾಡುವ ವೇದಿಕೆಯ ಯುವಕರ ಮೇಲೆ, ಉದ್ರೇಕಕಾರಿ ಬರಹ ಮಾಡುತ್ತಿರುವರೆಂಬ ಹೆಸರಿನಲ್ಲಿ, ಪೋಲೀಸರಿಂದ ಕಿರುಕುಳ ಕೊಡಿಸುವ ಕೆಲಸ ನಡೆಯಿತು. ಅದು ವಿಫಲವಾದಾಗ, ಸ್ವತಃ ಬಿ.ಜೆ.ಪಿ.ಯ ನಗರ ಕಾರ್ಯದರ್ಶಿ 'ವೇದಿಕೆಯ ಕರಪತ್ರಗಳು, ಪೋಸ್ಟರುಗಳು ಉದ್ರೇಕಕಾರಿಯಾಗಿವೆ' ಎಂದು ಆರೋಪಿಸಿ ಪತ್ರಿಕಾ ಹೇಳಿಕೆ ಕೊಟ್ಟು 'ಜಾತ್ಯಾತೀತತೆಯ ಬಗ್ಗೆ ಸಾರ್ವಜನಿಕ ಚರ್ಚೆ ಬರುವಂತೆ ಸವಾಲು' ಹಾಕಲು ಪ್ರಾರಂಭಿಸಿದರು!

ಗುಂಪಿನಲ್ಲಿ ಬೆರತು ಹೋಗಿದ್ದರೂ
ಚಂಡಮಾರುತಕ್ಕೆ ಕೆರಳಿದ
ಜನಸಮುದ್ರದ ನೊರೆಯ ರಾಶಿಯ ಮೇಲೆ
ಫಾಸ್ಪರಸಿನಂತೆ ಜ್ವಲಜ್ವಲಿಸುತ್ತಿದೆ
ಮೆರವಣಿಗೆಯಲ್ಲಿನ ಆ ಮುಖ!!

-ಸುಭಾಷ್ ಮುಖ್ಯೋಪಾಧ್ಯಾಯ

ಜನವರಿ 30 ರ ಮಧ್ಯಾಹ್ನ 3 ಘಂಟೆ ಹೊತ್ತಿಗೆ, ನಗರದ ಬಾವುಟಗುಡ್ಡೆಯ ಬಳಿ, ಕಾರ್ಮಿಕರು, ಯುವಕರು, ವಿದ್ಯಾರ್ಥಿಗಳ, ಪ್ರಾಧ್ಯಾಪಕರು, ಸಾಮಾಜಿಕ ಜವಾಬ್ದಾರಿ ಅರಿತ ನಾಗರಿಕರು ಹನಿ ಹನಿಯಾಗಿ ಸೇರುತ್ತಿರುವಾಗ, ಪೋಲಿಸಿನವರು ಕೇಳತೊಡಗಿದರು "ಒಂದು ಸಾವಿರ ಜನವಾಗಬಹುದು ಅಲ್ಲವೆ?". ಹೀಗೆ ಕೇಳಲು ಕಾರಣವೂ ಇತ್ತು; ಕೆಲದಿನಗಳ ಹಿಂದೆ ನಡೆದ ಬಿ.ಜೆ.ಪಿ.ಯ ರ್‍ಯಾಲಿಯಲ್ಲಿ 300 ಜನವಿದ್ದರೆ, ಬಿ.ಜೆ.ಪಿ.ಯಲ್ಲಿ ರಾಷ್ಟ್ರ ನಾಯಕರು ಬಂದು ಭಾಷಣ ಬಿಗಿಯುವಾಗ ನೆಹರು ಮೈದಾನದಲ್ಲಿ 500 ಜನಕ್ಕಿಂತ ಹೆಚ್ಚಿರಲಿಲ್ಲ, ಎಂ.ಪಿ. ಸೀಟುಗೆದ್ದವರ ಗತಿಯೇ ಹೀಗಿರುವಾಗ, ಇವರೇನು ಮಾಡಿಯಾರು ಎಂಬ ಅನುಮಾನವಿದ್ದಿರಬೇಕು! ದೋಳಾರ ಹಾಗೂ ಬಂದರು ವಲಯಗಳಿಂದ ಹೊರಟ ಎರಡು ಉಪ ಮೆರವಣಿಗೆಗಳು, 3.30 ಘಂಟೆಗೆ ಬಂದು ಬಾವುಟಗುಡ್ಡೆ ಸೇರಿ, 5,000 ಕ್ಕೂ ಮಿಕ್ಕಿದ ಮೆರವಣಿಗೆಯೊಂದು ಹೊರಟಾಗ, ತಮ್ಮ ಲೆಕ್ಕಾಚಾರದ ಮಿತಿಯನ್ನು ಪೋಲೀಸರು ಅರಿತುಕೊಂಡರೇನೋ. 'ಕೋಮುವಾದಿಗಳಿಗೆ ಧಿಕ್ಕಾರ', 'ಹಿಂದು-ಮುಸ್ಲಿಂ- ಕ್ರೈಸ್ತ-ಸಿಖ್ಖರು ಭಾರತದ ಸಂಪತ್ತು; ಕೋಮುವಾದಿಗಳು ದೇಶಕ್ಕೆ ವಿಪತ್ತು'; 'ಜಾತ್ಯತೀತತೆ ಅಮರವಾಗಲಿ', 'ಗಾಂಧಿ ಹಂ ಶರ್ಮಿಂದ ಹೈಂ ; ತೇರೆ ಖಾತಿಲ್ ಜಿಂದಾ ಹೈಂ'ನಂತಹ ಹುರುಪು ತುಂಬಿದ ಘೋಷಣೆಗಳೊಂದಿಗೆ ನೆಹರು ಮೈದಾನದತ್ತ ಮೆರವಣಿಗೆ ಹೋಗುತ್ತಿರುವುದನ್ನು, ಮಂಗಳೂರಿನ ಉಷ್ಣ ಹವೆ ತುಂಬಿದ ಬಿಸಿಲು ಕೂಡ ರೆಪ್ಪೆ ಬಡಿಯದೇ ನೋಡುತ್ತಿತ್ತು!

ನಂತರ ನೆಹರು ಮೈದಾನದಲ್ಲಿ ನಡೆದ ಸಭೆಗೆ, ರ್‍ಯಾಲಿ ತಲುಪಿದಾಗ, ನಗರದ ಬೇರೆ ನಾಗರಿಕರು ಬಹು ಸಂಖ್ಯೆಯಲ್ಲಿ ಬಂದು ಸೇರಿದರು. 'ಸಮುದಾಯ' ಗೆಳೆಯರ ಉತ್ಸಾಹದ ಹಾಡುಗಳು ರ್‍ಯಾಲಿಯನ್ನು ಪ್ರೀತಿಯಿಂದ ಬರಮಾಡಿಕೊಂಡವು. ಹಿರಿಯ ಸ್ವಾತಂತ್ರ ಹೋರಾಟಗಾರ ಅಮ್ಮೆಂಬಳ ಬಾಳಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, ಸಾಹಿತಿ, ನಟ ಹಾಗೂ 'ಕರ್ನಾಟಕ ರಾಜ್ಯ ಕೋಮು ಸೌಹಾರ್ದತಾ ಸಮಿತಿ'ಯ ಕಾರ್ಯದರ್ಶಿ ಮಂಡಳಿ ಸದಸ್ಯ ಜಿ.ಕೆ. ಗೋವಿಂದರಾವ್, ಮಂಗಳೂರು ವಿ.ವಿಯ ಪ್ರಾಧ್ಯಾಪಕರು-ವಿಮರ್ಶಕರು ಆದ ಸಿ. ಎನ್. ರಾಮಚಂದ್ರನ್, ಬಳಕೆದಾರರ ಚಳುವಳಿಯ ಹಿರಿಯ ನೇತಾರ ಉಡುಪಿಯ ಡಾ. ಪಿ. ನಾರಾಯಣರಾವ್, ರಾಷ್ಟ್ರಮಟ್ಟದ 'ಏಕತಾ ಆಂದೋಳನ ಸಮಿತಿ'ಯನ್ನು ಪ್ರತಿನಿಧಿಸಿ ಪಿ. ರಾಮಚಂದ್ರರಾವ್, ಬಿ.ವಿ. ಕಕ್ಕಿಲ್ಲಾಯ, ಬಿ.ಎ. ಮೋಯುದ್ದಿನ್, ಭಾಗವಹಿಸಿದ್ದರು. ಹಾಗೂ 'ದ.ಕ. ಜಿಲ್ಲಾ ಕೋಮುವಾದ ವಿರೋಧಿ ವೇದಿಕೆ' ಯ ಕಾರ್ಯಕಾರಿ ಮಂಡಳಿ ಸದಸ್ಯ ಫಕೀರ್ ಮಹಮ್ಮದ್ ಕಟ್ಪಾಡಿ ಸ್ವಾಗತಿಸಿದರು. ಸಭೆಯ ಪ್ರಾರಂಭವೇ ರೋಮಾಂಚಕಾರಿಯಾಗಿತ್ತು. 1948 ರಿಂದ ಇಂದಿನವರೆಗೆ ಪ್ರತಿ ಜನವರಿ 30 ರಂದು ಗಾಂಧೀಯನ್ನು ಹತ್ಯೆಗೈದುದರ ಸಾತ್ವಿಕ ಪ್ರತಿಭಟನೆಯಾಗಿ ಉಪವಾಸಗೈಯುತ್ತಿರುವ ಸ್ವಾತಂತ್ರ ಹೋರಾಟಗಾರ ಅಮ್ಮೆಂಬಳ ಬಾಳಪ್ಪನವರು, ರಾಷ್ಟ್ರೀಯ ಸಮಗ್ರತೆ, ಕೋಮುವಾದ ವಿರೋಧಕ್ಕಾಗಿ ಪ್ರತಿಯೊಬ್ಬರು ಸಮರ್ಪಿಸಬೇಕೆಂಬ ಆಶಯ ಹೊಂದಿದ, 'ಪ್ರತಿಜ್ಞೆ' ಯನ್ನು ಭೋಧಿಸಿದಾಗ ಸಭೆಯಲ್ಲಿದ್ದ 6,000ಕ್ಕೂ ಮಿಕ್ಕಿ ಜನ ತುಂಬು ಕಂಠದಿಂದ ಮಾರ್ದನಿಗೈದರು.

"ನಾನು ಹುಟ್ಟಿದ್ದೇನೆ ಎಂಬ ಅಹಂಕಾರದಿಂದ, ನನ್ನ ಧರ್ಮ ಶ್ರೇಷ್ಠ ಎಂಬುದಾದರೆ ಅವು ಅವಮಾನವೀಯ ಮೂಲಭೂತವಾದಿಗಳ ಧರ್ಮ, ಇಂತಹ ಅಹಂಕಾರದಿಂದ ಹುಟ್ಟಿದ್ದು. ನಿಜವಾದ ಧರ್ಮ ಪ್ರೀತಿಯಿಂದ, ಜಗತ್ತಿನ ಎಲ್ಲರೊಂದಿಗು ಸಂಬಂಧ ಕಲ್ಪಿಸಿಕೊಳ್ಳುವುದರೊಂದಿಗೆ ಹುಟ್ಟುತ್ತದೆ" ಎಂದು ಅಂತಃಕರಣ ತುಂಬಿ ಮಾತನಾಡಿದರು ಜಿ.ಕೆ. ಗೋವಿಂದರಾವ್. ಬಿ.ಜೆ.ಪಿ.-ವಿ. ಹೆಚ್.ಪಿ. ಆರ್.ಎಸ್.ಎಸ್.ಗಳ ಸಾಮಾಜಿಕತಳ ಶೋಧಿಸಿ ಮಾತನಾಡಿದ ಡಾ. ಪಿ. ನಾರಾಯಣರಾವ್ ರಬೀಂದ್ರನಾಥ ಟ್ಯಾಗೋರರ ಅರ್ಥಪೂರ್ಣ ಕತೆಯೊಂದಿಗೆ ಸಭೆಯ ಮನತುಂಬಿದರು. ಸಂವಿಧಾನ, ನಾಗರಿಕ ಸಂಹಿತೆ, ಕೋಮುವಾದ ಹಬ್ಬಿಸುವಲ್ಲಿ ಬ್ರಿಟಿಷರ ಪಾತ್ರದ ಬಗ್ಗೆ ಸವಿವರವಾಗಿ ಮಾತನಾಡಿದವರು ಪ್ರೋ. ಸಿ.ಎನ್. ರಾಮಚಂದ್ರನ್. ಈ ಮೂರು ಜನ ಭಾಷಣಕಾರರು ನೆರೆದ ಸಾವಿರಾರು ಜನಕ್ಕೆ ಕೋಮುವಾದ ಕುರಿತ ಸಾಮಾಜಿಕ-ಸಾಂಸ್ಕೃತಿಕ ಮುಖ ಪರಿಚಯ ಮಾಡಿಕೊಟ್ಟರೆ, ಕೋಮುವಾದದ ರಾಜಕೀಯ ಆಯಾಮವನ್ನು ಅದನ್ನೆದುರಿಸಲು ಬೇಕಾಗಿರುವ ದೃಢತೆ ಬದ್ಧತೆಯನ್ನು, ಮೊಹಿಯುದ್ದಿನ್, ಬಿ.ವಿ. ಕಕ್ಕಿಲ್ಲಾಯ, ಪಿ. ರಾಮಚಂದ್ರರಾವ್ ವಿವರಿಸಿದರು.

ಕೊನೆಯಲ್ಲಿ ವಾಸುದೇವ ಉಚ್ಚಿಲ್ ವಂದನೆ ಸಲ್ಲಿಸಿದರು. ಸಭೆ ಮುಗಿದು ಹಿಂತಿರುಗುವಾಗ, ಅರಬ್ಬಿ ಸಮುದ್ರದಲ್ಲಿ ಮುಳುಗಿದ ಸೂರ್ಯ ನಾಳೆ ಹುರುಪಿನಿಂದ ಏಳುತ್ತಾನೆ ಎಂಬ ವಿಶ್ವಾಸ ಎಲ್ಲರಲ್ಲೂ ಮೂಡಿತ್ತು.

ಹಿಂದೂ - ಮುಸ್ಲಿಂ ಮತಾಂಧರ ಮನಸೊಂದೆ, ಕನಸೊಂದೇ

ಪುಟ 3ರಿಂದ

ಅಲ್ಪಸಂಖ್ಯಾತರ ರಕ್ಷಣೆ ದೇಶದ ಜಾತ್ಯತೀತ ಪ್ರಜಾಪ್ರಭುತ್ವದ ಮುಖ್ಯಧಾರೆಯಿಂದಲೇ ಮಾತ್ರವೇ ಸಾಧ್ಯ ಎಂಬುದು ಮತ್ತೆ-ಮತ್ತೆ ಸಾಬೀತಾಗಿರುವ ಸಂಗತಿ.

ಶಾಬಾನೋ ಪ್ರಕರಣ ಸಿಪಿಐ(ಎಂ)ನ ಎಚ್ಚರಿಕೆ ನಿಜವಾಯಿತು

ಶಾಬಾನೋ ಕೇಸಿನ ಅನುಭವದಿಂದ ಮುಸ್ಲಿಂ ಜನಸಾಮಾನ್ಯರು ಪಾಠ ಕಲಿಯಬೇಕಾಗಿದೆ. ಸರಕಾರ ಮುಸ್ಲಿಮರನ್ನು ಖುಶಿಗೊಳಿಸುತ್ತಿದೆ ಎಂದು ಆಪಾದಿಸುವ ಹಿಂದೂ ಕೋಮುವಾದಿಗಳು ಶಾಬಾನೋ ಪ್ರಕರಣದಲ್ಲಿ ಸಂಸತ್ತು ನ್ಯಾಯಾಲಯದ ತೀರ್ಪನ್ನು ಬದಲಿಸಿದ್ದನ್ನೇ ಉದಾಹರಣೆಯಾಗಿ ತೋರಿಸುತ್ತಾರೆ. ಮುಸ್ಲಿಂ ಮತಾಂಧರನ್ನು ತೃಪ್ತಿಗೊಳಿಸುವ ಈ ಕೃತ್ಯದಿಂದಾಗಿ ಹಿಂದೂ ಕೋಮುವಾದಿಗಳಿಗೆ ಮುಸ್ಲಿಂ-ವಿರೋಧಿ ಭಾವೋದ್ರೇಕ ಎಬ್ಬಿಸಲು ದೊಡ್ಡ ಅವಕಾಶ ಕಲ್ಪಿಸಿಕೊಡಲಾಯಿತು. ಆಗಲೇ ಸಿಪಿಐ(ಎಂ) ಇದರ ವಿರುದ್ಧ ಎಚ್ಚರಿಕೆ ನೀಡಿತ್ತು. ಮುಸ್ಲಿಂ ಮಹಿಳಾ ಮಸೂದೆಯನ್ನು ವಿರೋಧಿಸುತ್ತಾ ಮತಾಂಧರಿಗೆ ನೀಡುವ ಇಂತಹ ರಿಯಾಯ್ತಿಗಳು ದೇಶದ ಜಾತ್ಯಾತೀತ ಸ್ವರೂಪವನ್ನು ದುರ್ಬಲಗೊಳಿಸುತ್ತಿದೆ. ಇದರಿಂದ ಹಿಂದೂ ಕೋಮುವಾದಿಗಳು ಬಲಗೊಂಡು ಮುಸ್ಲಿಮರಲ್ಲಿನ ಅಭದ್ರತೆ ಇನ್ನೂ ಹೆಚ್ಚುತ್ತದೆ ಎಂದು ಎಚ್ಚರಿಸಿತ್ತು. ಆಗ ತಮ್ಮ ನಿಲುವಿಗೆ ಸಮರ್ಥನೆಯಾಗಿ ಮುಸ್ಲಿಂ ಜನಸಾಮಾನ್ಯರನ್ನು ಬಳಸಿದ ಮುಸ್ಲಿಂ ಮತಾಂಧ ಮುಖಂಡರಿಗೆ ಈಗ ತಮ್ಮ ಆ ಕೃತ್ಯದ ಫಲ ಏನೂ ಎಂದು ಅರಿವಾಗಿರಬೇಕು. ಜಾತ್ಯತೀತ ಶಕ್ತಿಗಳನ್ನು ದುರ್ಬಲಗೊಳಿಸುವ ಅದರ ಆಗಿನ ಪ್ರಯತ್ನ ಕೂಡಾ ಇಂದು ಕಾಣುತ್ತಿರುವ ಹಿಂದೂ ಕೋಮುವಾದಿಗಳ ಆಕ್ರಮಣಕಾರೀ ನಿಲುವಿಗೆ ತನ್ನ ಕಾಣಿಕೆಯನ್ನು ನೀಡಿತ್ತು ಎಂಬುವನ್ನು ಅವರೀಗ ಅರಿತಿರಬೇಕು.

ಈ ಅನುಭವದಿಂದಾಗಿ ಭಾರತ ಜಾತ್ಯತೀತವಾಗಿದ್ದರೆ ಮಾತ್ರವೇ ತಮ್ಮ ಭದ್ರತೆ ಸಾಧ್ಯ ಎಂಬ ಅಭಿಪ್ರಾಯ ಮುಸ್ಲಿಮ್ ಜನಸಾಮಾನ್ಯರಲ್ಲಿ ಹೆಚ್ಚಾಗುತ್ತಿದೆ. ಈ ಅಂಶವನ್ನೂ ನಾವು ಒತ್ತಿ ಹೇಳಬೇಕಾಗಿದೆ.

ಮುಸ್ಲಿಂ ಮತಾಂಧತೆ ಮುಸ್ಲಿಂ ಜನ ಸಾಮಾನ್ಯರಿಗೇ ಕೆಡುಕುಂಟುಮಾಡಿದೆ

ಈ ಹಿನ್ನೆಲೆಯಲ್ಲಿ ಮುಸ್ಲಿಂ ಮೂಲಭೂತವಾದದ ಅಥವಾ ಮತಾಂಧತೆಯ ಸ್ವರೂಪ ಏನೂ ಎಂದು ನೋಡೋಣ.

ಜಮಾತ್-ಎ-ಇಸ್ಲಾಮಿ ಅಗಸ್ಟ್ 25, 1941 ರಂದು ಸ್ಥಾಪನೆಗೊಂಡಿತು. ಪಠಾಣ್‌ಕೋಟ್‌ನಲ್ಲಿ ಮೌಲನಾ ಅಬುದ್ ಅಲ್ ಮೌದೂದಿ ಅಧ್ಯಕ್ಷತೆಯಲ್ಲಿ ಸೇರಿದ ಸಮ್ಮೇಳನದಲ್ಲಿ ಅದು ಆರಂಭವಾಯಿತು. ದೇಶ ವಿಭಜನೆಯ ನಂತರ ಮೌದೂದಿ ಪಾಕಿಸ್ತಾನಕ್ಕೆ ವಲಸೆ ಹೋದರು. ಆದರೆ ನಮ್ಮ ಉಪಖಂಡದಲ್ಲಿ ಮುಸ್ಲಿಂ ಮತಾಂಧತೆಯ ಅತ್ಯಂತ ಬಲವಾದ ದನಿಯಾಗಿಯೇ ಉಳಿದರು.

ಮುಸ್ಲಿಂ ಮತಾಂಧತೆ ಹೇಗೆ ಮುಸ್ಲಿಂ ಜನಸಾಮಾನ್ಯರ ಹಿತಾಸಕ್ತಿಗಳಿಗೆ ವಿರುದ್ಧವಾಗಿವೆ ಎಂಬುದನ್ನು ಮೌಲಾನಾ ಮೌದೂದಿಯವರ ಈ ಕೆಳಗಿನ ಹೇಳಿಕೆಯಿಂದಲೇ ತಿಳಿಯಬಹುದು-"ಭಾರತದಲ್ಲಿ ಹಿಂದೂ ಕಾನೂನಿನ ಆಧಾರದ ಮೇಲೆ ಹಿಂದೂ ಸರಕಾರ ಬಂದರೆ ಮನುವಿನ ಶಾಸನ ದೇಶದ ಶಾಸನವಾಗಿ ಮುಸ್ಲಿಮರನ್ನು ಅಸ್ಪೃಶ್ಯರಂತೆ ಕಾಣಲಾರಂಭಿಸಿ ಪೌರತ್ವದಹಕ್ಕನ್ನೂ ನೀಡದಿದ್ದರೆ ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ!" ಮೌದೂದಿಯವರ ಅಭ್ಯಂತರವಿಲ್ಲದ ಮನುಸ್ಮೃತಿಯ ಬಗ್ಗೆ ಬಿ.ಜೆ.ಪಿ. ಮುಖಂಡ ಕೆ. ಆರ್. ಮಲ್ಕಾನಿ ಏನು ಹೇಳುತ್ತಾರೆ ಎಂಬುದನ್ನು ಗಮನಿಸಿ- "ಹಿಂದೂ ಕೋಡ್-ಬಿಲ್ ಅಂಗೀಕರಿಸುವಾಗ (ಆರ್.ಎಸ್.ಎಸ್. ಮುಖಂಡ) ಗೋಲ್ವಾಲ್ಕರ್ ವಿರೋಧಿಸಿದರು. ಮನುಸ್ಮೃತಿಯೊಂದಿಗಿನ ಪ್ರಾಚೀನ ಸಂಬಂಧವನ್ನು ಮುರಿದುಕೊಳ್ಳಬೇಕಾದ ಅಗತ್ಯವಾದರೂ ಏನು?"

ಮಹಾರಾಷ್ಟ್ರದಲ್ಲಿ ಶಿವಸೇನೆ, ಕೇಂದ್ರದಲ್ಲಿ ಬಿ.ಜೆ.ಪಿ. ರಾಜಕೀಯ ಅಧಿಕಾರ ಗಿಟ್ಟಿಸಿದಾಗಲಷ್ಟೆ ಶಾಂತಿ ನೆಲೆಸಲು ಸಾಧ್ಯ ಎಂಬ ಬಾಳಾಠಾಕ್ರೆಯವರ ಹೇಳಿಕೆ ಈ ರಕ್ತಪಾತದ ಗುರಿಯೇನು ಎಂಬುದನ್ನು ಸಾಬೀತುಪಡಿಸಿದೆ.

ಮದುರೈಯಲ್ಲಿ ವಿ.ಹೆಚ್.ಪಿ. ಆಶ್ರಯದಲ್ಲಿ ನಡೆದ ಎರಡನೇ ಹಿಂದೂ ಅಡ್ವೋಕೇಟ್‌ಗಳ ಸಮ್ಮೇಳನದಲ್ಲಿ (ಏಪ್ರಿಲ್ 18-19,1992) ಉತ್ತರಪ್ರದೇಶದ ಅಡ್ವೋಕೇಟ್ ಜನರಲ್, ಮನುಸ್ಮೃತಿ ಎಲ್ಲರಿಗೂ ಎಲ್ಲಾ ಕಾಲಕ್ಕೂ ನ್ಯಾಯ ಒದಗಿಸಿದೆ ಎಂದರು. 'ಗೋಲ್ವಾಲ್ಕರ್ ಸ್ವತಃ ಮನು ಮಾನವಕುಲದ ಮೊದಲ ಅತ್ಯಂತ ಮಹಾನ್, ಬುದ್ಧಿವಂತ ಶಾಸನಕರ್ತ ಎಂದಿದ್ದರು.'

ಹೀಗೆ ಈ ವಿಷಯದಲ್ಲಿ ಹಿಂದೂ ಕೋಮುವಾದಿಗಳ, ಮುಸ್ಲಿಂ ಮೂಲಭೂತವಾದಿಗಳ ಅಭಿಪ್ರಾಯ ಟೀಕೆ ಒಂದೇ ಆಗಿದೆ ನೋಡಿ. ಅವರ ನಡುವಿನ ಧಾರ್ಮಿಕ ವ್ಯತ್ಯಾಸ ಅಥವಾ ವೈರತ್ವ ಏನೇ ಇದ್ದರೂ ಜಾತ್ಯಾತೀತತೆ, ಪ್ರಜಾಪ್ರಭುತ್ವ, ರಾಷ್ಟ್ರೀಯತೆ ಇತ್ಯಾದಿ ಬಗ್ಗೆ ಅವರಿಬ್ಬರ ಅಭಿಪ್ರಾಯದಲ್ಲಿ ಒಂದೇ. ಆಶ್ಚರ್ಯವೆನಿಸುತ್ತದೆಯೇ ? ಇವರಿಬ್ಬರೂ ಬಹುಪಾಲು ಹಿಂದೂಗಳು, ಬಹುಪಾಲು ಮುಸ್ಲಿಮರನ್ನು ದಮನ, ಅಸಮಾನತೆಗೆ ಗುರಿಪಡಿಸಿದ್ದಾರೆ.

ಈ ಇಬ್ಬರೂ ಮತಾಂಧರಲ್ಲಿ ಎಷ್ಟೊಂದು ಸಾಮ್ಯತೆ!

ಮೇ 1947 ರಲ್ಲಿ ಮೌದೂದಿ ಏನೆಂದಿದ್ದರು ನೋಡಿ- "ನಮ್ಮ ದೃಷ್ಟಿಯಲ್ಲಿ ಈ ಮೂರು ನೀತಿಗಳು (ಜಾತ್ಯತೀತತೆ,

ಅಯೋಧ್ಯಾಕಾಂಡ
'ಐಕ್ಯರಂಗ' ವಾರಪತ್ರಿಕೆಯ ಪುರವಣಿ



ಕೋಮುವಾದದ ಮೇಲೆ ವಿವಿಧ ಮುಖದ ಧಾಳಿ

: ಧಾರವಾಡದ ಸುಮಾರು ...ಗತಿಪರ ಸಾಮೂಹಿಕ ಹಾಗೂ ...ನೆಗಳು ಒಗ್ಗೂಡಿ ರಚಿಸಿಕೊಂಡ ...ತಾ ಸಮಿತಿಯ ಆಶ್ರಯದಲ್ಲಿ ...ರಂದು ಸಂಜೆ ಧಾರವಾಡದ ...ಲ್ಲಿ ಬೃಹತ್ ರ‍್ಯಾಲಿಯನ್ನು ಏರ್ಪ...ದಲಿಗೆ, ನಗರದ ಮುಖ್ಯ ಬೀದಿ...ದ ಅಳಿಯಲಿ', 'ಸಹ ಬಾಳ್ವೆ ...ಲ್ಲಿಲ್ಲ ಹಿಂದೂ ರಕ್ತ, ನಮ್ಮಲ್ಲಿಲ್ಲ ...ಮ್ಮಲ್ಲಿರುವುದು ಮಾನವ ರಕ್ತ,' ...ರಾಯುವಾಗಲಿ' ಎಂಬ ಆವೇಶ ...ಳೊಂದಿಗೆ ಮೆರವಣಿಗೆ ನಡೆಸ... ಸೌಹಾರ್ದತೆಗಾಗಿ ಈ ಹಿಂದೆ ...ವಾದ ಬೃಹತ್ ವರ್ಣಚಿತ್ರ... ಆಕರ್ಷಕವಾಗಿ ಶೃಂಗರಿಸಲ್ಪಟ್ಟ ಸಂಘಟನೆಗಳ ಮತ್ತು ಪಕ್ಷ...ಡ್ಸ್ ಇತರ ಚಿತ್ರಕಲೆಗಳನ್ನು ...ಂಡೊಯ್ಯಲಾಯಿತು. ಸಮು...ರತ ಜ್ಞಾನ ವಿಜ್ಞಾನ ಸಮಿತಿಯ ...ಯುದ್ಧಕ್ಕೂ ದೇಶಭಕ್ತಿ ಹಾಡುಗ... ಬಿ.ಜೆ.ಪಿ. ಮತ್ತು ಅದರ ಸಂಘ ವಿರೋಧಿ ಹಾಗೂ ಫ್ಯಾಸಿಸ್ಟ್ ...ಹಿರಂಗಗೊಳಿಸುವ ಮತ್ತು ಭಾರ... ಜಾತ್ಯಾತೀತತೆ, ಪ್ರಜಾಪ್ರಭುತ್ವ ಸ್ವಾತಂತ್ರ್ಯಕ್ಕಾಗಿ ಜಾಗೃತ ಜನರ ...ರಾಟದ ಅಗತ್ಯತೆಯ ಸಂದೇಶ...ದ ಕರ ಪತ್ರಗಳನ್ನು ವ್ಯಾಪಕವಾಗಿ ...ರ‍್ಯಾಲಿ ಮತ್ತು ಮೆರವಣಿಗೆಯಲ್ಲಿ ... ಸಾವಿರಕ್ಕೂ ಹೆಚ್ಚಿನ ಜನರಿಗೆ

ಹಿರಿಯ ಸ್ವಾತಂತ್ರ್ಯ ಹೋರಾಟಗಾರರೂ, ಜನತಾದಳದ ಧುರೀಣರೂ ನ್ಯಾಯವಾದಿಗಳೂ ಆದ ಜೆ.ಟಿ. ಪದಕಿ ರಾಷ್ಟ್ರೀಯ ಏಕತೆಯನ್ನು ರಕ್ಷಿಸಲು ಬದ್ಧರಾಗುವಂತೆ ಪ್ರಮಾಣ ವಚನ ಬೋಧಿಸಿದರು. ಈ ಮಹತ್ವದ ಕಾರ್ಯಕ್ರಮಗಳಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಜನರು ಭಾಗವಹಿಸಲು ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ, ಕೃಷಿ ಕಾರ್ಮಿಕರ ಸಂಘ, ಸಿ.ಐ.ಟಿ.ಯು, ಎ.ಐ.ಟಿ.ಯು.ಸಿ. ವಿಮಾ ನೌಕರರ ಸಂಘ, ಎಸ್.ಎಫ್.ಐ., ಎ.ಐ.ಎಸ್.ಎಫ್., ಡಿ.ವೈ.ಎಫ್.ಐ., ದಲಿತ ಸಂಘಟನೆಗಳು, ಬಂಡಾಯ ಮತ್ತು ಸಮುದಾಯದ ಸಂಘಟನೆಗಳು ಮತ್ತಿತರ ಸಾಮೂಹಿಕ ಸಂಘಟನೆಗಳು ಶ್ರಮಿಸಿದ್ದವು. ರ‍್ಯಾಲಿಗೆ ಪೂರ್ವಭಾವಿಯಾಗಿ ಧಾರವಾಡದ ಇಂಡಿಯನ್ ಪ್ಲೈವುಡ್ ಮತ್ತು ಸ್ವೀಟನ್ಸ್ ಕಾರ್ಮಿಕರ ಗೇಟ್ ಮೀಟಿಂಗ್ ನಡೆಸಲಾಯಿತು. ಈ ಎರಡು ಸಂಘನೆಗಳಿಂದ ಅಧಿಕ ಸಂಖ್ಯೆಯಲ್ಲಿ ಕಾರ್ಮಿಕರು ರ‍್ಯಾಲಿ ಮತ್ತು ಮೆರವಣಿಗೆಯಲ್ಲಿ ಭಾಗವಹಿಸಿರುವುದು ಗಮನಾರ್ಹವಾಗಿತ್ತು. ಈ ರ‍್ಯಾಲಿಗೆ ಜನತಾದಳ, ಸಿಪಿಐ(ಎಂ) ಮತ್ತು ಸಿಪಿಐ. ಪಕ್ಷಗಳೂ ಬೆಂಬಲಿಸಿದ್ದವು.

ಇದೇ ಸಮಿತಿಯ ಆಶ್ರಯದಲ್ಲಿ ದಿ. 28-1-93 ರಂದು ಸಂಜೆ ವಿದ್ಯಾವರ್ಧಕ ಸಂಘದ ಸಭಾಂಗಣದಲ್ಲಿ ಕವಿಗೋಷ್ಠಿ ಮತ್ತು ಸಮೂಹಗಾನ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಡಾ. ವಾಮನ ಬೇಂದ್ರೆ, ಸದಾಶಿವಮೂರ್ತಿ, ಅಶೋಕ ಶೆಟ್ಟರ್, ಪ್ರೋ. ಚಂದ್ರಶೇಖರ ಪಾಟೀಲ, ಶ್ರೀನಿವಾಸ ವಾಡಪ್ಪ ಮುಂತಾದ 20 ಕ್ಕೂ ಹೆಚ್ಚಿನ ಕವಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಶ್ರೀ. ಬಿ. ಆರ್. ವಾಡಪ್ಪಿ, ಅಧ್ಯಕ್ಷತೆ ವಹಿಸಿದ್ದರು. ಕೋಮು ವಲ್ಲರಿಯ ದುಷ್ಪರಿಣಾಮ ಸರಕಾರದ ಚಂಚಲತೆ ಮತ್ತು ನಿಷ್ಕ್ರಿಯತೆ, ಮತಾಂಧತೆಯ ಅಪಾಯ, ಸಂಘ ಪರಿವಾರದ ನಕಲೀ ರಾಷ್ಟ್ರೀಯತೆ ಮುಂತಾದ ವಿಷಯಗಳನ್ನು ಇವರ ಕವನಗಳಲ್ಲಿ ಧ್ವನಿಗೂಡಿದ್ದವು.

ದಿನಾಂಕ 26-1-93 ರಲ್ಲಿ ಸಂಜೆ ಅದೇ ಸ್ಥಳದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಪ್ರೋ. ಅಶೋಕ ಶೆಟ್ಟರ ಇತಿಹಾಸ ಮತ್ತು ಐತಿಹ್ಯ, ಶ್ರೀ ಸಿ.ಆರ್. ಭಟ್- ಸಂವಿಧಾನ ಮತ್ತು ಜಾತ್ಯಾತೀತತೆ ಮತ್ತು ಡಾ. ಸಂಜೀವನ ಕುಲ್ಕರ್ಣಿ ಮುಸ್ಲಿಂರ ಬಗ್ಗೆ ಪೂರ್ವಾಗ್ರಹಗಳು ಎಂಬ ವಿಷಯಗಳ ಕುರಿತು ಪ್ರಬಂಧ ಮಂಡಿಸಿದರು. ಪ್ರೋ. ಚಂದ್ರಶೇಖರ ಪಾಟೀಲ ಪ್ರಾಸ್ತವಿಕವಾಗಿ ಮಾತನಾಡಿದರು. ಮತ್ತು ಶ್ರೀ ಜೆ.ಟಿ. ಪದಕಿ ಅಧ್ಯಕ್ಷತೆ ವಹಿಸಿದ್ದರು. ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿಯನ್ನು ಪುನಃಮೈಗೂಡಿಸಿಕೊಂಡು ಕೋಮುವಾದದ ವಿರುದ್ಧ ಹೋರಾಡದೇಕೆಂದೂ ಜಾತ್ಯಾತೀತತೆಯ ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿ ಹಿಡಿದು ರಾಷ್ಟ್ರೀಯ ಏಕತೆಯನ್ನು ಉಳಿಸಿ ಬೆಳೆಸಬೇಕೆಂದು ಅಭಿಪ್ರಾಯ ಪಡಲಾಯಿತು.

ಈ ಸಮಿತಿಯಿಂದ ಕಲಾವಿದರಿಗೆ ಚಿತ್ರ ಕಲಾಸ್ಪರ್ಧೆ ಮತ್ತು ಹೈಸ್ಕೂಲ್ ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ರಾಷ್ಟ್ರೀಯ ಏಕತಾ ಆಂದೋಳನ ಸಮಿತಿಯು ಹಮ್ಮಿಕೊಂಡ ಸಾಮೂಹಿಕ ಸಹಿ ಸಂಗ್ರಹದಲ್ಲಿ ಸಕ್ರಿಯವಾಗಿ ಭಾಗವಹಿಸಲು ಈ ಸಮಿತಿ ನಿರ್ಧರಿಸಿದೆ.

"ಹಿಂದೂ ರಾಷ್ಟ್ರ"ವನ್ನು ನಾವು ಶತಾಯಗತಾಯ ವಿರೋಧ ಮಾಡುತ್ತೇವೆ

-- ನೀಲಗುಂದ ಸ್ವಾಮಿಯವರು

ನೀಲಗುಂದ ಸ್ವಾಮಿಯವರು ಕರ್ನಾಟಕಕ್ಕೆ ಈಗ ಬಹಳ ಪರಿಚಿತರು. ಭಕ್ತರಿಗೆ ಕೇವಲ ಧಾರ್ಮಿಕ ಪುರಾಣ ಪ್ರವಚನ ಆಶೀರ್ವಾದ ನೀಡುವುದರಿಂದ ತೃಪ್ತರಾಗದ ಈ ಸ್ವಾಮಿಯವರು ಮುಳವಾಡ ಏತ ನೀರಾವರಿಗಾಗಿ ನಡೆಸಿದ ಹೋರಾಟದಿಂದ 'ಇವರು ಬೇರೆಯೇ' ಎಂದು ಜನ ತಿಳಿಯುವಂತಾಯಿತು. ಇತ್ತೀಚೆಗೆ ಕೋಮು ದಂಗೆಗಳು ಹತ್ತಿ ಉರಿದಾಗ ಇದರಿಂದ ನೊಂದ ಈ ಸ್ವಾಮಿಯವರು ಕೋಮುವಾದದ ವಿರುದ್ಧ ಹೋರಾಟದ ಜೊತೆಗೂಡಿದ್ದಾರೆ. "ಐಕ್ಯರಂಗ" ಅವರೊಡನೆ ನಡೆಸಿದ ಒಂದು ಸಂದರ್ಶನ:

● ***ಡಿಸೆಂಬರ್ 6 ರ ಘಟನೆಯ ಬಗ್ಗೆ ನಿಮ್ಮ ಅಭಿಪ್ರಾಯವೇನು?***

ಆಗಬಾರದಂತಹಘಟನೆ. ಎಲ್ಲರ ಮನಸ್ಸು-ಹೃದಯಗಳು ಅದರಿಂದ ಒಡೆದು ಛಿದ್ರವಾಗಿದೆ. ಹಿಂದೂಗಳಿಗೆ ರಕ್ಷಣೆ ಕೊಡುತ್ತೇವೆನ್ನುವ ಶಕ್ತಿಗಳು ಮತ್ತಷ್ಟು ಅಪಾಯಕಾರಿ ಸನ್ನಿವೇಶ ತಂದೊಡ್ಡಿವೆ.

● ***ಇಂತಹ ಪರಿಸ್ಥಿತಿ ನಿಭಾಯಿಸುವುದಕ್ಕೆ ಯಾವ ರೀತಿ ಕೆಲಸ ಮಾಡಬೇಕು?***

ಬಿ.ಜೆ.ಪಿ. ಪ್ರಕಾರ ಎಲ್ಲಾ ಧರ್ಮಗುರುಗಳ, ಸಾಧುಸಂತರ ಬೆಂಬಲ ಅವರಿಗಿದೆ. ಆದರೆ ಎಲ್ಲಾ ಧರ್ಮಗುರುಗಳ ಬೆಂಬಲ ಅವರಿಗಿಲ್ಲ ಎನ್ನುವುದಕ್ಕೆ ಹಲವರ ಧೋರಣೆ, ಹೇಳಿಕೆಗಳೇ ಸಾಕ್ಷಿ. ಇಂತಹವರು ಇನ್ನೂ 60 ಗುರುಗಳನ್ನು ಒಂದು ಕಡೆ ಸಂಘಟನೆ ಮಾಡಿ ಅವರ ಸುಳ್ಳು ಪ್ರಚಾರವನ್ನು ಬಯಲು ಮಾಡುವ ಪ್ರಯತ್ನ ನಡೆಯುತ್ತಿದೆ. ಅವರು ಧರ್ಮವನ್ನು ರಾಜಕಾರಣಕ್ಕೆ ಬಳಸುತ್ತಿದ್ದಾರೆ.

● ***ದೇವಾಲಯಗಳ ಕಲ್ಪನೆಯನ್ನೆ ನಿರಾಕರಿಸಿದ ವೀರಶೈವ ಧರ್ಮದ ಕೆಲ ಗುರುಗಳೂ ಬಿ.ಜೆ.ಪಿ. ರಾಮ ದೇವಾಲಯದ ರಾಜಕೀಯದಲ್ಲಿ ಭಾಗಿಯಾಗಿದ್ದಾರಲ್ಲ..?***

ಬಹುತೇಕ ಜನರಿಗೆ ಬಿ.ಜೆ.ಪಿ.ಯವರು ಸುಳ್ಳು ಹೇಳಿದ್ದಾರೆ. ಅವರು ಮೋಸಹೋಗಿದ್ದಾರೆ. ಆದರೆ ಅವರನ್ನು ಬೆಂಬಲಿಸಿದ ಸ್ವಾಮಿಗಳಿಗೆ ಭ್ರಮನಿರಸನವಾಗುತ್ತಿದೆ. ವಿ.ಹೆಚ್.ಪಿ. ಕರೆದಾಗ ಧಾರ್ಮಿಕ ಸಮಾರಂಭಗಳೆಂದು ಹೋಗುತ್ತಾರೆ. ಆದರೆ ಆ ಸಮಾರಂಭಗಳಲ್ಲಿ ಪೇಜಾವರ ಸ್ವಾಮಿಗಳೇ ಗಣಪತಿ, ಉಳಿದ ಸ್ವಾಮಿಗಳೆಲ್ಲಾ ಅಲಂಕಾರದ ಗೊಂಬೆಗಳು ಎಂಬುದು ಹೆಚ್ಚೆಚ್ಚು ಸ್ವಾಮಿಗಳ ಗಮನಕ್ಕೆ ಬರುತ್ತಿದೆ.

● ***ವೀರಶೈವರಲ್ಲಿ ಸತ್ಯದ ಬೆಳಕು ಮೂಡಿಸಲು ಏನು ಮಾಡಬೇಕೆಂದಿರುವಿರಿ?***

ನಾವು ನಾಲ್ಕೈದು ಮಠಾಧಿಪತಿಗಳು ಜಾಗೃತರಾಗಿದ್ದೇವೆ. ಉಳಿದವರನ್ನು ಎಚ್ಚರಿಸುತ್ತಿದ್ದೇವೆ. ಇದಕ್ಕಾಗಿ ಬೆಂಗಳೂರಿನಲ್ಲಿ ದೊಡ್ಡ ಸರ್ವಧರ್ಮ ಸಮ್ಮೇಳನ ನಡೆಸುತ್ತಿದ್ದೇವೆ.

● ***ವೈದಿಕ, ನಂಬಿಕೆಗಳು, ಮನುಸ್ಮೃತಿ ಆಧಾರದ ಮೇಲೆ ಹಿಂದೂ ರಾಷ್ಟ್ರ ಕಟ್ಟಬೇಕು ಎಂದು ಮುರಳಿ ಮನೋಹರ ಜೋಷಿ ಹೇಳಿದ್ದಾರೆ. ಈ ಬಗ್ಗೆ ನಿಮ್ಮ ಅಭಿಪ್ರಾಯ ಏನು?***

ಇದನ್ನು ನಾವು ಶತಾಯಗತಾಯ ವಿರೋಧ ಮಾಡುತ್ತೇವೆ. 95 ಶೇ. ಜನ ಇಂತಹ ಹಿಂದೂರಾಷ್ಟ್ರದ ಕಲ್ಪನೆಯನ್ನು ವಿರೋಧ ಮಾಡ್ತಾರೆ. 'ಹಿಂದೂರಾಷ್ಟ್ರ' ವಿಚಾರ ಮಾಡುವ ಸಾಧುಸಂತರು ಹೆಂಡತಿ ಮಕ್ಕಳನ್ನು ಸಾಕಿ ಸಲಹಲಿಕ್ಕಾಗದೆ ಓಡಿರುವ ಪಲಾಯನವಾದಿಗಳು, ಅವರಿಗೆ ಅವರ ಹೆಂಡತಿ ಮಕ್ಕಳ ಓಟೂ ಬೀಳುವುದಿಲ್ಲ.

● ***ಮಠದ ಸ್ವಾಮಿಗಳಾಗಿ ಧಾರ್ಮಿಕ, ವಿಚಾರಗಳಲ್ಲಿ ತೊಡಗಿರುವ ನಿಮಗೆ ಕೂಡ ನೀರಾವರಿ ಮುಂತಾದ ಹೋರಾಟಗಳಿಗೆ ಪ್ರೇರಣೆ ಎಲ್ಲಿಂದ ಬಂತು?***

ವಿಜಾಪುರ ಜಿಲ್ಲೆಯ ಲಕ್ಷಾಂತರ ಎಕರೆ ಜಮೀನಿನಲ್ಲಿ ಹಸಿರು ಕಾಣಿಸುವುದು ನೂರಾರು ಎಕ್ರೆಯಲ್ಲಿ ಮಾತ್ರ. ಇದಕ್ಕೆ ಕಾರಣ ಏನು ಎಂದು ಯೋಚಿಸಿದಾಗ ರಾಜಕಾರಣಿಗಳ ನಿರಾಸಕ್ತಿ, ಜಮೀಂದಾರರ ನಿರಾಸಕ್ತಿಯೇ ಕಾರಣ ಎಂದು ತಿಳಿಯುತ್ತದೆ. ಏಕೆಂದರೆ ನೀರಾವರಿ ಆದರೆ ಅವರಿಗೆ ಆಳುಗಳು ಸಿಗುವುದಿಲ್ಲ! ನಮ್ಮ ಮಠಗಳು ನಡೆಯುವುದು ಭಕ್ತರ ಬೆಂಬಲದಿಂದ. (ಮಠ ನಡೆಸಲು) ಜೋಳ ಕೇಳಲು ಹೋದಾಗ ಭಕ್ತರು ಜೋಳ ಕೊಡಲು ಸಮರ್ಥರಿರಬೇಕಲ್ಲ? ಮಂತ್ರದಿಂದ, ಮಾವಿನಕಾಯಿ ಉದುರುವುದಿಲ್ಲ ಎಂದು ನಮಗೆ ಗೊತ್ತು. ನೀರಾವರಿಯಾಗದೆ ಮಠಗಳ ಸ್ಥಿತಿಯೂ ಉತ್ತಮವಾಗುವುದಿಲ್ಲ. ಆದ್ದರಿಂದ ನೀರಾವರಿಗಾಗಿ ಹೋರಾಡುವ ಪ್ರಶ್ನೆ ಬಂದದ್ದು ಇದಲ್ಲದೆ ಬಚಾವತ್ ಆಯೋಗದ ಪ್ರಕಾರ ಇನ್ನೂ ಎಂಟು ವರ್ಷಗಳೊಳಗೆ ನೀರಾವರಿ ಸೌಲಭ್ಯ ಕಲ್ಪಿಸಿಕೊಳ್ಳದಿದ್ದರೆ ಅದು ಶಾಶ್ವತವಾಗಿ ಇಲ್ಲವಾಗುತ್ತದೆ.

...ರ ಜಿಲ್ಲೆಯ ಪ್ರತಿ ತಾಲೂಕಿಗೂ, ...ಳ್ಳಿಗೂ ಕೋಮು ಸಾಮರಸ್ಯದ ಸಂದೇಶ

...ರ ಘಟನೆಯ ನಂತರ ಕೋಲಾರ ...(ಎಂ) ಮತ್ತು ಸಾಮೂ...ು ಕೋಮು ಶಕ್ತಿಗಳ ವಿರು...ಅಂಗವಾಗಿ ಅನೇಕ ರೀತಿಯಾದ ... ಹಾಕಿ ಯಶಸ್ವಿ ಮಾಡಿದ್ದು ಈಗ ...ಮೊದಲ ವಾರದಲ್ಲಿ ಇಡೀ ಜಿಲ್ಲೆ...ಗಳ ವಿರುದ್ಧ ಚಳವಳಿಯನ್ನು ...ಒಂದು ವಾರದ ಕಾಲ ಎಲ್ಲಾ ಹಳ್ಳಿಗೂ ಈ ಚಳುವಳಿಯನ್ನು ...ರ್ಮಾನಿಸಿದೆ.

...6ರಂದು ಅಯೋಧ್ಯೆಯಲ್ಲಿ ...-ಆರ್‌ಎಸ್‌ಎಸ್ ಗೂಂಡಾಗಳು ...ಲ್ಲಿ ನಡೆಸಿದ ಗೂಂಡಾಗಿರಿ ಮತ್ತು ...ಸಾವಿರಾರು ವರ್ಷಗಳಿಂದ ನಮ್ಮ ...ಹಿಷ್ಣುತೆಯನ್ನು ನೆಲಸಮ ಮಾಡಿ, ...ಭವಾಗಿದ್ದ ಜಾತ್ಯಾತೀತತೆ ಮತ್ತು ... ನಾಶ ಮಾಡಿದ ಈ ಶಕ್ತಿಗಳ ...ಜಿಲ್ಲೆ[illegible] ಸಿಪಿಐ(ಎಂ) ತಕ್ಷಣ ಹಲವಾರು ಕಾರ್ಯಕ್ರಮಗಳನ್ನು ...ಯ ಜನತೆಯಲ್ಲಿ ಭರವಸೆ...ಕೆಯನ್ನು ಮೂಡಿಸಲು ಪ್ರಯ...ಂಗವಾಗಿ ಡಿಸೆಂಬರ್ 8ರಂದು ...ತ್ವದಲ್ಲಿನ ಎಡಪಕ್ಷಗಳು ಮತ್ತು ...ಕರೆಯ ಮೇರೆಗೆ ಯಶಸ್ವಿಯಾದ ...ಲಾಯಿತು. ನಂತರ ಹಲವಾರು ...ಸದಸ್ಯರ ಸಭೆಗಳನ್ನು ಕರೆದು ...ನೆಯ ನಂತರದ ಬೆಳವಣಿಗೆಗಳು ಮತ್ತು ಅದರ ಅಪಾಯದ ಬಗ್ಗೆ ವಿವರಣೆ ನೀಡಲಾಯಿತು. ಗೌರಿಬಿದನೂರು, ಚಿಂತಾಮಣಿ ಮತ್ತು ಬಾಗೇಪಲ್ಲಿಗಳಲ್ಲಿ ಬಹಿರಂಗ ಸಭೆಗಳನ್ನು ಏರ್ಪಡಿಸಿ ಕೋಮುಶಕ್ತಿಗಳ ನಿಜಸ್ವರೂಪವನ್ನು ಜನರಿಗೆ ವಿವರಿಸಲಾಯಿತು.

ತಾ. 22-1-93ರಂದು ಡಿವೈಎಫ್‌ಐನ ಬಾಗೇಪಲ್ಲಿ ತಾಲೂಕು ಘಟಕವು ಜಾತ್ಯಾತೀತತೆ ಮತ್ತು ರಾಷ್ಟ್ರೀಯ ಸಮಗ್ರತೆ ಎಂಬ ವಿಷಯದ ಮೇಲೆ ನಡೆಸಿದ ವಿಚಾರ ಸಂಕಿರಣವನ್ನು ಇಡೀ ಜಿಲ್ಲೆಯ ಗಮನವನ್ನು ಸೆಳೆಯಿತು. ಇದರಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರು ಭಾಗವಹಿಸಿದ್ದರು. ಅಷ್ಟೇ ಅಲ್ಲದೆ ಗೂಳೂರು ನಿಡುಮಾಮಿಡಿ ಮಠಾಧೀಶರು ಭಾಗವಹಿಸಿದ್ದು ಒಂದು ವಿಶೇಷವಾಗಿತ್ತು.

ಇದರ ನಂತರ ರಾಷ್ಟ್ರೀಯ ಆಂದೋಳನ ಸಮಿತಿಯ ಕರೆಯ ಮೇರೆಗೆ ಇಡೀ ಜಿಲ್ಲೆಯಲ್ಲಿ ಸಹಿಸಂಗ್ರಹ ಚಳುವಳಿ ಮತ್ತು ಜನವರಿ 26ರಂದು ಮಾನವ ಸರಪಳಿಯ ಕಾರ್ಯಕ್ರಮದಲ್ಲಿ ಇಡೀ ಜಿಲ್ಲೆಯಲ್ಲಿ ಸುಮಾರು 50,000 ಜನರು ಭಾಗವಹಿಸಿದ್ದು ಸಾಧನೆಯೇ ಸರಿ. 30-1-93ರಂದು ಪ್ರತಿಜ್ಞಾ ಸ್ವೀಕಾರ ಕಾರ್ಯಕ್ರಮವು ಸಹ ಯಶಸ್ವಿಯಾಗಿ ನಡೆಯಿತು. ಇದರಲ್ಲಿಯೂ ಎಲ್ಲಾ ಕಡೆ ಸುಮಾರು 10,000 ಜನರು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಸರಕಾರವು ಹಮ್ಮಿಕೊಂಡಿದ್ದ "ಕೋಮು ಸೌಹಾರ್ದತಾ ವಾರಾಚರಣೆ"ಯಲ್ಲಿ ನಮ್ಮ ಪಕ್ಷದ ಸಂಗಾತಿಗಳು ಜಿಲ್ಲೆಯ ಹೆಚ್ಚಿನ ಕಡೆ ಸಕ್ರಿಯವಾಗಿ ಭಾಗವಹಿಸಿ ಕೋಮು ಸೌಹಾರ್ದತೆಯ ಪ್ರಾಮುಖ್ಯತೆಯ ಬಗ್ಗೆ ಒತ್ತಿ ಹೇಳುವುದರಲ್ಲಿ ಯಶಶ್ವಿಯಾಗಿದ್ದಾರೆ. ಈಗ ಮತ್ತೆ ಕೋಲಾರ ಜಿಲ್ಲೆಯ ಜಿಲ್ಲಾ ಕೇಂದ್ರದಲ್ಲಿ ಡಿವೈಎಫ್‌ಐ-ಎಸ್‌ಎಫ್‌ಐ ನೇತೃತ್ವದಲ್ಲಿ ಜಿಲ್ಲಾ ಮಟ್ಟದ ಒಂದು ವಿಚಾರ ಸಂಕಿರಣವನ್ನು ಈ ತಿಂಗಳ ಕೊನೆಯೊಳಗೆ ನಡೆಸಲು ತೀರ್ಮಾನಿಸಿದೆ.

ತಾ. 9-2-93ರಂದು ನಡೆದ ಸಿಪಿಐ(ಎಂ) ರಾಜ್ಯ ಸಮಿತಿಯ ತೀರ್ಮಾನದಂತೆ ಸಿಪಿಐ(ಎಂ) ಜಿಲ್ಲಾ ಸಮಿತಿ ತಾಂ. 11-2-93ರಂದು ಸಭೆ ಸೇರಿ ಕೋಮು ವಿರೋಧಿ ಚಳುವಳಿಯನ್ನು ತೀವ್ರಗೊಳಿಸಲು ವಿಶಾಲವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಇಡೀ ಕೋಲಾರ ಜಿಲ್ಲೆಯ 11 ತಾಲೂಕುಗಳಲ್ಲಿರುವ ಎಲ್ಲಾ ಹಳ್ಳಿಗಳಿಗೂ ಈ ಕೋಮು ಸೌಹಾರ್ದತಾ ಚಳುವಳಿಯನ್ನು ತೆಗೆದುಕೊಂಡು ಹೋಗಲು ತೀರ್ಮಾನಿಸಿದೆ. ಪ್ರತಿ ತಾಲೂಕಿನಲ್ಲಿ ಒಂದು ವಾರದ ಕಾಲ ಈ ಪ್ರಚಾರ ಸಭೆಗಳನ್ನು ನಡೆಸಿ ಈ ಸಂದರ್ಭದಲ್ಲಿ ಹಾಡುಗಳು, ನಾಟಕಗಳು ಮತ್ತು ಸಾಹಿತ್ಯದ ಪ್ರಚಾರದ ಮುಖಾಂತರ ಒಂದು ವಾರದ ಕಾಲ ಈ ಚಳುವಳಿಯನ್ನು ನಡೆಸಲು ತೀರ್ಮಾನಿಸಿದೆ. ಇದಕ್ಕೆ ಪೂರ್ವಬಾವಿ ತಯಾರಿ ಜಿಲ್ಲೆಯ ಪ್ರತಿ ತಾಲೂಕಿನಲ್ಲೂ ಭರದಿಂದ ಸಾಗಿದೆ.

ಈ ಕಾರ್ಯಕ್ರಮಕ್ಕೆ ಹಲವಾರು ಕಲಾಕಾರರನ್ನು ಚಲನಚಿತ್ರನಟರನ್ನು ಆಹ್ವಾನಿಸಲು ತೀರ್ಮಾನಿಸಲಾಗಿದೆ. ಕೋಲಾರ ಜಿಲ್ಲೆಯಲ್ಲಿನ ರಾಜಕೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಈ ಚಳುವಳಿಯು ಸಿಪಿಐ(ಎಂ) ಮತ್ತು ಸಾಮೂಹಿಕ ಸಂಘಟನೆಗಳಿಗೆ ಒಂದು ಪರೀಕ್ಷೆಯಾಗಲಿದೆ.

ರಾಷ್ಟ್ರೀಯತೆ, ಪ್ರಜಾಪ್ರಭುತ್ವ) ತಪ್ಪು. ಅವು ತಪ್ಪು ಮಾತ್ರವೇ ಅಲ್ಲ, ಇಂದು ಮಾನವಕುಲದ ಬಂದಿರುವ ಅನಿಷ್ಟಗಳ ಮೂಲಕಾರಣ. ಈ ನೀತಿಗಳನ್ನು ನಾವು ವಿರೋಧಿಸುತ್ತೇವೆ. ಅವುಗಳ ವಿರುದ್ಧ ನಮ್ಮೆಲ್ಲಾ ಶಕ್ತಿಹಾಕಿ ಹೋರಾಡುತ್ತೇವೆ"!

ಸ್ವಾತಂತ್ರ್ಯ ದೇಶದ ವಿಭಜನೆ ಇನ್ನೇನು ನಡೆಯಲಿದೆ ಎಂದು ಸ್ಪಷ್ಟವಾದಾಗ ಮೌದೂದಿಯವರು ಮೇ 1947 ರಲ್ಲಿ ಪಠಾಣ್‌ಕೋಟ್‌ನಲ್ಲಿ ಭಾಷಣ ಮಾಡುತ್ತಾ "ದೇಶದ ವಿಭಜನೆಯಾಗುವುದು ಖಂಡಿತ. ಇದರಲ್ಲಿ ಒಂದು ಭಾಗ ಮುಸ್ಲಿಮರಿಗೆ ಸಿಗುತ್ತದೆ. ಇನ್ನೊಂದು ಭಾಗ ಮುಸ್ಲಿಮೇತರ ಬಹುಸಂಖ್ಯಾತರ ಹತೋಟಿಗೆ ಬರುತ್ತದೆ. ಮುಸ್ಲಿಮರ ಕೈಗೆ ಬರುವ ಭಾಗದಲ್ಲಿ ನಾವು ಅಲ್ಲಾ ಹಾಕಿಕೊಟ್ಟ ಕಾನೂನುಗಳ ಆಧಾರದ ಮೇಲೆ ಸರಕಾರ ಹಾಗೂ ಸಂವಿಧಾನದ ತಳಪಾಯ ಹಾಕಬೇಕು ಎಂಬ ಜನಗಳ ಭಾವನೆಯನ್ನು ಎಬ್ಬಿಸಲು ಪ್ರಯತ್ನಿಸುತ್ತೇವೆ. ಅವರ ಭಾಗದಲ್ಲಿ ನೀವು ಅಲ್ಪಸಂಖ್ಯಾತರು. ಆಗ ನಿಮ್ಮನ್ನು ಕೇಳಿಕೊಳ್ಳುತ್ತೇವೆ...... ದಯವಿಟ್ಟು ರಾಮ, ಕೃಷ್ಣ, ಬುದ್ಧ, ನಾನಕರ ಬೋಧನೆಗಳನ್ನು ವಿಶ್ಲೇಷಿಸಿ .... ವೇದ, ಪುರಾಣ, ಶಾಸ್ತ್ರ, ಗ್ರಂಥಗಳನ್ನು ಆಮೂಲಾಗ್ರವಾಗಿ ಅಧ್ಯಯನಮಾಡಿ ಭಾರತದ ಸಂವಿಧಾನವನ್ನು ಅವುಗಳಲ್ಲಿರುವ ನಿರ್ದೇಶನಗಳ ತಳಪಾಯದ ಮೇಲೆ ರಚಿಸಿರಿ."

ಗೋಲ್ವಾಲ್ಕರ್ ಹೇಳಿದ, ಈಗ ಕಾವಿಪಡೆಗಳು ಹೇಳುತ್ತಿರುವುದಕ್ಕೂ ಇದಕ್ಕೂ ಏನೊಂದು ಸಾಮ್ಯವಿದೆಯಲ್ಲವೆ? ಈಗಾಗಲೇ ನಿಮಗೆ ತಿಳಿದಿರುವಂತೆ ಕಾವಿಪಡೆಗಳ "ಹಿಂದೂ ರಾಷ್ಟ್ರ"ದ ಕಲ್ಪನೆ ಯಾವುದೇ ಇತರ ನಂಬಿಕೆ, ಮತದ ಬಗ್ಗೆ ತೀವ್ರ ಅಸಹನೆಯಿಂದ ಕೂಡಿದೆಯಷ್ಟೇ ಅಲ್ಲ, ಅದಕ್ಕಿಂತಲೂ ಹೆಚ್ಚಾಗಿ ಮನುಸ್ಮೃತಿ ಇಂತಹ ಹಿಂದೂರಾಷ್ಟ್ರದ ಆಧಾರ ಎಂಬ ಅಂಶದ ಮೇಲೆ ಒತ್ತು ಹಾಕುತ್ತದೆ.

ಮನುಸ್ಮೃತಿ ಏನು ಹೇಳುತ್ತದೆ?

"ಶೂದ್ರನಿಗೆ ಸೇರಿದ ವಸ್ತುಗಳನ್ನು ಬ್ರಾಹ್ಮಣ ಏನೊಂದೂ ಮಾನಸಿಕ ಕಸಿವಿಸಿಯಿಲ್ಲದೆ ಅತ್ಯಂತ ಶಾಂತ ಮನಸ್ಸಿನಿಂದ ತನ್ನ ವಶಕ್ಕೆ ತೆಗೆದುಕೊಳ್ಳಬಹುದು. ಏಕೆಂದರೆ ಶೂದ್ರನಿಗೆ ಸೇರಿದ್ದೆಂಬುದು ಏನೂ ಇಲ್ಲ." ಎಂದಿರುವ ಮನುಸ್ಮೃತಿ "ಮಹಿಳೆಯರು, ಶೂದ್ರರು, ವೈದ್ಯರು, ಕ್ಷತ್ರಿಯರನ್ನು (ಬ್ರಾಹ್ಮಣರು ಬಿಟ್ಟು ಉಳಿದೆಲ್ಲರನ್ನು)" ಕೊಲೆ ಮಾಡಿದರೆ ಅದು ಸಣ್ಣ ಅಪರಾದವಷ್ಟೆ" ಮುಂದೆ ಮಹಿಳೆಯರಂತೂ ವೈದಿಕ ಮಂತ್ರಗಳನ್ನೂ ಉಚ್ಚರಿಸಬಾರದು, ಏಕೆಂದರೆ ಮಹಿಳೆಯೆಂದರೆ ಅಸತ್ಯವಿದ್ದಂತೆ ಎಂದಿದ್ದಾನೆ ಮನು ಮಹಾಶಯ.

ಇಬ್ಬರ ಕನಸೂ ಒಂದೇ - - 'ಮತೀಯ ರಾಜ್ಯಭಾರ'

ಹೀಗೆ ಹಿಂದೂ ಮುಸ್ಲಿಂ ಮತಾಂಧರಿಬ್ಬರೂ ಈಗಿನಂತಹ ಸನ್ನಿವೇಶದಲ್ಲಿ ಪರಸ್ಪರರನ್ನು ಪೋಷಿಸುವಂತರ ಶಕ್ತಿಗಳಷ್ಟೇ ಅಲ್ಲ, ಅವರಿಬ್ಬರ ಕನಸೂ ಕೂಡಾ ಒಂದೇ. ಜಾತ್ಯಾತೀತತೆ, ಪ್ರಜಾಪ್ರಭುತ್ವವನ್ನು ವಿರೋಧಿಸುವ ಮತೀಯ ರಾಜ್ಯಭಾರ ಈ ಎರಡು ಮತಾಂಧ ಶಕ್ತಿಗಳ ಸಾಮ್ಯತೆ. ಇಷ್ಟೇ ಅಲ್ಲ ಹಿಟ್ಲರ್ ಗೊಲ್ವಾಲ್ಕರ್‌ರವರ ನೆಚ್ಚಿನ ನಾಯಕ. ಅದೇ ರೀತಿ ಮೌಲಸಾ ಮೌದೂದಿಗೆ ಕೂಡಾ. ಈ ಎರಡೂ ಸಂಘಟನೆಗಳಲ್ಲಿ - ಆರ್.ಎಸ್.ಎಸ್. ಮತ್ತು ಜಮಾತ್- ಪ್ರಸ್ತುತ ಮುಖ್ಯಸ್ಥರು ಮುಂದಿನ ಮುಖ್ಯಸ್ಥರನ್ನು ನೇಮಿಸುತ್ತಾರೆ. ಆರ್.ಎಸ್.ಎಸ್. ಸ್ಥಾಪಕ ಹೆಡ್ಗೆವಾರ್ ಗೋಲ್ವಾಲ್ಕರ್ ಬಾಳಾ ಸಾಹೇಬ್ ದೇವರಸ್‌ರನ್ನು ನೇಮಿಸಿದರು. ದೇವರಸ್ ಮುಂದಿನ ಮುಖ್ಯಸ್ಥರನ್ನು ನೇಮಿಸುತ್ತಾರೆ.

ಜಮಾತ್-ಎ-ಇಸ್ಲಾಮಿಾ ಈ ಬಗ್ಗೆ ಏನನ್ನುತ್ತದೆ! ಮೌಲಾನಾ ಮೌದೂದಿಯ ಮಾತಲ್ಲೇ ನೋಡಿ- "ಒಬ್ಬ ವ್ಯಕ್ತಿಯ ಅಭಿಪ್ರಾಯ ಇಡೀ ಜಮಾತ್ ಮಂಡಳಿಯ ಒಮ್ಮತಾಭಿಪ್ರಾಯಕ್ಕಿಂತ ಹೆಚ್ಚು ವಿವೇಕಯುತವಾಗಿರಬಹುದು. ಆದ್ದರಿಂದ ಜಮಾತ್‌ನ ಮುಖ್ಯಸ್ಥನಿಗೆ ಬಹುಮತದವರ ಅಥವಾ ಅಲ್ಪ ಮತದವರ ಅಭಿಪ್ರಾಯವನ್ನೂ ಒಪ್ಪುವ ಅಧಿಕಾರವಿದೆ, ಅದೇ ರೀತಿ ಇಡೀ ಜಮಾತ್ ಮಂಡಳಿ ಅಭಿಪ್ರಾಯವನ್ನು ತಿರಸ್ಕರಿಸಿ ತನಗೆ ಸರಿಕಂಡಂತೆ ನಿರ್ಧರಿಸುವ ಅಧಿಕಾರವಿದೆ." ಈ ಎರಡು ಸಂಘಟನೆಗಳು ಪ್ರಜಾಪ್ರಭುತ್ವಕ್ಕೆ ಎಷ್ಟು ಬದ್ಧವಾಗಿವೆ ಎಂಬುದಕ್ಕೆ ಬೇರೆ ಸಾಕ್ಷಿ ಬೇಕೆ?

ಇಬ್ಬರೂ ಸ್ವಾತಂತ್ರ್ಯ ಹೋರಾಡದಿಂದ ದೂರವಿದ್ದವರು

ಸ್ವಾತಂತ್ರ್ಯ ಹೋರಾಟದ ಬಗ್ಗೆಯೂ ಈ ಎರಡೂ ಸಂಘಟನೆಗಳ ನಿಲುವಿನಲ್ಲಿ ಸಾಮ್ಯತೆಯಿತ್ತು. ಆರ್.ಎಸ್.ಎಸ್. ಸ್ವಾತಂತ್ರ್ಯ ಹೋರಾಟದಿಂದ ದೂರವುಳಿದಿತ್ತು ಎಂಬುದಕ್ಕೆ ಈಗ ಹಲವಾರು ಪುರಾವೆಗಳಿವೆ. "ಆರ್.ಎಸ್.ಎಸ್. ಒಂದು ಸಂಘಟನೆಯಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿಲ್ಲ. ಆದರೆ ಅದರ ಸದಸ್ಯರು ವೈಯುಕ್ತಿಕವಾಗಿ ಅದರಲ್ಲಿ ಭಾಗವಹಿಸಲು ಅಡ್ಡಿಯಿರಲಿಲ್ಲ" ಎಂದಿದ್ದಾರೆ ಆರ್.ಎಸ್.ಎಸ್. ಮುಖಂಡ ನಾನಾಜಿ ದೇಶಮುಖ್. ಏಕೆ! ಏಕೆಂದರೆ "ಆರ್.ಎಸ್.ಎಸ್‌ನ ಅಂತಿಮಗುರಿ ದೇಶವನ್ನು ವೈಭವದ ಶಿಖರಕ್ಕೇರಿಸುವುದು" (ಅಂದರೆ ಹಿಂದೂ ರಾಷ್ಟ್ರ ಕಟ್ಟುವುದು ಎಂದಷ್ಟೇ)

ಜಮಾತ್‌ನ ನಿಲುವು ಕೂಡಾ ಇದೇ ಆಗಿತ್ತು ವಸಾಹತುಶಾಹಿ ವಿರೋಧಿ ಹೋರಾಟದಿಂದ ದೂರವಿರಲು ಮೌಲಾನಾ ಮೌದೂದಿ ತನ್ನ ಹಿಂಬಾಲಕರಿಗೆ ಸಲಹೆ ನೀಡುತ್ತಿದ್ದರು. ಹೀಗೆ ಮುಸ್ಲಿಂ ಮತಾಂಧರು ಮುಸ್ಲಿಂ ಜನಸಾಮಾನ್ಯರನ್ನು ಸದಾ ಪ್ರಜಾಸತ್ತಾತ್ಮಕ ಜಾತ್ಯಾತೀತ ಆಂದೋಲನದಿಂದ ದೂರವಿಟ್ಟು ಹಿಂದೂ ಮತಾಂಧರಿಗೆ ನೆರವಾದರು. ಈಗಿನ ಸನ್ನಿವೇಶದಲ್ಲೂ ಮುಸ್ಲಿಂ ಮತಾಂಧ ಮುಖಂಡರು ಇದನ್ನೇ ಪ್ರಯತ್ನಿಸುತ್ತಾರೆ. ಆದರೆ ಹಿಂದೂ ಕೋಮುವಾದಿಗಳ ಕೋಮುದ್ವೇಷಕ್ಕೆ ಮುಸ್ಲಿಂ ಮತಾಂಧ ದ್ವೇಷ ಉತ್ತರವಲ್ಲ. ಏಕೆಂದರೆ ಇವೆರೆಡೂ ದೇಶದ, ತಾವು ಪ್ರತಿನಿಧಿಸುವೆವೆಂದು ಹೇಳಿಕೊಳ್ಳುವ ಹಿಂದೂ ಅಥವಾ ಮುಸ್ಲಿಂ ಜನಗಳ ಹಿತಾಸಕ್ತಿಗಳಿಗೆ ವಿರುದ್ಧವಾದದ್ದು.

ಶಾಬಾನೋ ಪ್ರಕರಣದಲ್ಲಿ ಮುಸ್ಲಿಂ ಮೂಲಭೂತವಾದಿ ಮುಖಂಡರ ನಿಲುವು ಹಿಂದೂ ಕೋಮುವಾದವನ್ನು ಬಲಗೊಳಿಸುತ್ತದೆ ಎಂದು ಸಿಪಿಐ(ಎಂ) ಎಚ್ಚರಿಸಿತ್ತು. ಈಗ ಮುಸ್ಲಿಂ ಮತಾಂಧ ಮುಖಂಡರಿಗೆ ಆಗ ಜಾತ್ಯತೀತ ಶಕ್ತಿಗಳನ್ನು ದುರ್ಬಲಗೊಳಿಸಲು ಪ್ರಯತ್ನಿಸಿದ ತಮ್ಮ ಕೃತ್ಯದ ಫಲವೇನು ಎಂದು ಅರ್ಥವಾಗಿರಬೇಕು.

ಗಣತಂತ್ರದಿನ ಬಹಿಷ್ಕಾರದ ಮುಸ್ಲಿಂ ಮತಾಂಧರ ಕರೆಯನ್ನು ಧಿಕ್ಕರಿಸಿ ಮುಸ್ಲಿಂ ಜನಸಾಮಾನ್ಯರು ಇದು ತಮಗೆ ಅರಿವಾಗಿಯೆಂದು ತೋರಿಸಿಕೊಟ್ಟಿದ್ದಾರೆ. ಭಾರತ ಒಂದು ಆಧುನಿಕ ಜಾತ್ಯಾತೀತ ದೇಶವಾಗಿ ಉಳಿದರೆ ಮಾತ್ರವೇ ತಮ್ಮ ಭದ್ರತೆ ಸಾಧ್ಯ ಎಂದು ಮುಸ್ಲಿಂ ಜನಸಾಮಾನ್ಯರು ಅರಿತುಕೊಳ್ಳಬೇಕು. ನಮ್ಮ ಆಧುನಿಕ ಜಾತ್ಯಾತೀತ ಪ್ರಭುತ್ವವನ್ನು ಉಳಿಸಿಕೊಳ್ಳುವ ಏಕೈಕ ಮಾರ್ಗವೆಂದರೆ ಜಾತ್ಯತೀತತೆ, ಪ್ರಜಾಪ್ರಭುತ್ವಕ್ಕೆ ಬದ್ಧರಾದ ಎಲ್ಲಾ ದೇಶಪ್ರೇಮಿಗಳು ಒಗ್ಗಟ್ಟಾಗಬೇಕು. ಇದರಲ್ಲಿ ನಾವು ವಿಫಲವಾದರೆ ಆಧುನಿಕ ಭಾರತದ ತಳಪಾಯವನ್ನು ನಾಶಪಡಿಸುವ ಮತಾಂಧ ಶಕ್ತಿಗಳನ್ನೂ ಬಲಪಡಿಸಿವಂತಾಗುತ್ತವೆ.



ಅಯೋಧ್ಯಾಕಾಂಡ 'ಐಕ್ಯರಂಗ' ವಾರಪತ್ರಿಕೆಯ ಪುರವಣಿ

ಬಿಜಾಪುರದಲ್ಲಿ ಬಹಿರಂಗ ಸಭೆ

ವಿಜಾಪೂರ : ದಿನಾಂಕ 26-1-1993 ರಂದು ರಾಷ್ಟ್ರೀಯ ಐಕ್ಯತಾ ಆಂದೋಲನ ಸಮಿತಿಯಿಂದ ಬೃಹತ್ ಬಹಿರಂಗ ಸಭೆ ನಡೆಯಿತು. ಈ ಸಭೆಯ ಅಧ್ಯಕ್ಷತೆಯನ್ನು ಎಸ್.ಡಿ. ಕರ್ಪೂರಮಠ ಅವರು ಪ್ರಾರಂಭದಲ್ಲಿ ಸಿಪಿಐ(ಎಂ) ಪ್ರಕಾಶ್ ಹಿಟ್ನಳ್ಳಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಪ್ರೊ. ವಿ.ಎನ್. ತೊರಗಲ್ ಇತಿಹಾಸ ತಜ್ಞರು, ಇವರು ಮಾತನಾಡುತ್ತಾ ಉತ್ತರ ಪ್ರದೇಶದ ಹಿಂದಿನ ಮುಖ್ಯಮಂತ್ರಿ ಕಲ್ಯಾಣಸಿಂಗ್ ಇವರು ಸುಪ್ರಿಂ ಕೋರ್ಟಿಗೆ, ಪಾರ್ಲಿಮೆಂಟಿಗೆ ಮತ್ತು ಶಾಂತಿ ಕಮಿಟಿಗೆ ಬಾಬರಿ ಮಸೀದಿ ನಾಶ ಮಾಡುವುದಿಲ್ಲವೆಂದು ಲೇಖನಿಯ ಮೂಲಕ ಆಶ್ವಾಸನೆ ಕೊಟ್ಟು ನ್ಯಾಯಾಂಗ, ಶಾಸಕಾಂಗ, ಕಾರ್ಯಾಂಗಗಳನ್ನು ಮುರಿದು ದೇಶದ್ರೋಹಿ ಕೆಲಸ ಮಾಡಿದ್ದಾರೆಂದು ಹೇಳಿದ ಅವರು ಗಾಂಧಿಯನ್ನು ಕೊಂದು ಈಗ ಆರ್.ಎಸ್.-ಎಸ್.- ಬಿ.ಜೆ.ಪಿ.ಗೆ ಗಾಂಧಿ ಜಯಂತಿ ಹಾಗೂ ರಾಷ್ಟ್ರೀಯತೆಯ ಕುರಿತು ಮಾತನಾಡುವ ನೈತಿಕ ಹಕ್ಕಿಲ್ಲವೆಂದು ನುಡಿದು ಅವರು ಜನತೆಗೆ ಖೋಟಾ ಹಿಂದುವಾದಿಗಳಿಂದ ಎಚ್ಚರಿಕೆಯಿಂದ ಇರಬೇಕೆಂದು ಮನವಿ ಮಾಡಿದರು.

ಸಿಪಿಐ(ಎಂ) ನ ಕಾಂ. ಎನ್.ಕೆ. ಉಪಾಧ್ಯಾಯ ಅವರು ಕೇಂದ್ರ ಸರಕಾರದ ಜನವಿರೋಧಿ ಹೊಸ ಆರ್ಥಿಕ ನೀತಿಗಳನ್ನು ಖಂಡಿಸಿ ಮಾತನಾಡುತ್ತಿದ್ದ ಅವರು ಬೆಲೆ ಏರಿಕೆ, ರಸಗೊಬ್ಬರ, ಖಾಸಗೀಕರಣ ಬೆಳೆಯುತ್ತಿರುವ ನಿರುದ್ಯೋಗ ಸಮಸ್ಯೆಗಳ ವಿರುದ್ಧ ನಾವು ಹೋರಾಟ ಮಾಡುವಾಗ ಕೇಂದ್ರ ಕಾಂಗ್ರೆಸ್ ಸರಕಾರ ಮತ್ತು ಬಿ.ಜೆ.ಪಿಗಳು ಶಾಮಿಲಾಗಿ ರಾಮಮಂದಿರ ಮತ್ತು ಬಾಬರಿ ಮಸೀದಿಯ ವಿವಾದ ಎಬ್ಬಿಸಿವೆ. ಅದರ ಕಡೆ ಜನರ ಗಮನ ಸೆಳೆದು ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆಗೆ ಸವಾಲು ಒಡ್ಡಿವೆಯೆಂದು ಹೇಳಿದ ಅವರು ಈ ಪೊಳ್ಳು ರಾಷ್ಟ್ರೀಯವಾದಿಗಳಾದ ಬಿ.ಜೆ.ಪಿ. ಮತ್ತು ಕಾಂಗ್ರೆಸ್ಸಿಗರಿಗೆ ತಕ್ಕ ಪಾಠ ಕಲಿಸಬೇಕೆಂದು ಜನತೆ ಕರೆ ನೀಡಿದರು. ಸಭೆಯಲ್ಲಿ ರೈತ ಮುಖಂಡ ಭೀಮಸಿ ಕಲಾದಗಿ, ಅಪ್ಪಾಸಾಹೇಬ ಯರನಾಳ ಮುಂತಾದ ನಾಯಕರು ಜನರನ್ನು ಉದ್ದೇಶಿಸಿ ಮಾತನಾಡಿದರು. ಪಶ್ಚಿಮಬಂಗಾಳದಿಂದ ಗಾಂಧಿ ಯಾತ್ರೆ ಮಾಡುತ್ತಾ ಬಂದಿರುವ ಶ್ರೀ ದತ್ತ ಅವರು ಜನರೇ ಕೋಮುಸಾಮರಸ್ಯ ಕಾಪಾಡಬೇಕೆಂದು ಮನವಿ ಮಾಡಿದರು.

ಕೊನೆಯಲ್ಲಿ ಎಸ್.ಎಫ್.ಐ. ಎಲ್ಲಪ್ಪಾ ಈರಕಲ್ ವಂದಿಸಿದರು. ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿಗಳಾದ ಕಾಂ. ಭೀಮಸಿ ಕಲಾದಗಿ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಬಿಜಾಪುರದಲ್ಲಿ ಪ್ರತಿಜ್ಞಾ ವಿಧಿ ಸ್ವೀಕಾರ

ವಿಜಾಪುರ : ಹುತಾತ್ಮ ದಿನವಾದ ಜನವರಿ 30 ರಂದು ನಗರದ ಗಾಂಧಿ ವೃತ್ತದಲ್ಲಿ ರಾಷ್ಟ್ರೀಯ ಏಕತಾ ಆಂದೋಲನ, ಸಮಿತಿಯಿಂದ ಮೌನ ಆಚರಣೆ ಹಾಗೂ ಪ್ರತಿಜ್ಞಾ ವಿಧಿ ಸ್ವೀಕಾರದೊಂದಿಗೆ ಮಹಾತ್ಮ ಗಾಂಧೀಜಿಯವರ ಹುತಾತ್ಮದಿನವನ್ನು ಆಚರಿಸಲಾಯಿತು.

ಮುಂಜಾನೆ 11 ಗಂಟೆಗೆ ಹಿರಿಯ ಸ್ವಾತಂತ್ರ್ಯ ಯೋಧರು, ಕಾರ್ಮಿಕ ಮುಖಂಡರೂ ಆದ ಎನ್. ಕೆ. ಉಪಾಧ್ಯಾಯರು ರಾಷ್ಟ್ರೀಯ ಐಕ್ಯತೆ, ಸಮಗ್ರತೆಯನ್ನು ಕಾಪಾಡುವ ಪ್ರತಿಜ್ಞಾ ವಿಧಿಯನ್ನು ಎಲ್ಲರಿಗೂ ಬೋಧಿಸಿದರು. ಮೊದಲು 5 ನಿಮಿಷ ಮೌನ ಆಚರಿಸಲಾಯಿತು.

ಈ ಸಭೆಯಲ್ಲಿ ಸ್ವಾತಂತ್ರ್ಯ ಯೋಧರಾದ ಬಾಗೇವಾಡಿ, ಸಿಪಿಐ(ಎಂ)ನ ಎನ್.ಕೆ. ಉಪಾಧ್ಯಾಯ, ಭೀಮಶಿ ಕಲಾದಗಿ, ಸಿಪಿಐನ ಪ್ರಕಾಶ್ ಹಿಟ್ನಳ್ಳಿ, ಎಲ್.ಕೆ. ಚಂಚಲಕರ, ನೀಲಗುಂದ ಸ್ವಾಮಿಜಿ, ಎಸ್.ಡಿ. ಕರ್ಪೂರಮಠ ಲಾಲಾಸಾಬ ಪಠಾಣ, ಡಿ.ವೈ.ಎಫ್.ಐ. ಅಧ್ಯಕ್ಷ ಮನ್ನೂಸಾಬ ಕಲಾದಗಿ, ಕಾರ್ಯದರ್ಶಿ ಸದಾನಂದ ಮೋದಿ, ಅಬ್ದುಲ್ ಹುಳ್ಳೂರ, ರಫಿಕ ಹಂಚನಾಳ ಹಾಗೂ ಎಸ್.ಎಫ್.ಐ.ನ ಎಲ್ಲಪ್ಪ ಇಲಕಲ್, ಎಂ.ಎ. ಮೋಕಾಶಿ ಹಾಗೂ ಜನವಾದಿ ಮಹಿಳಾ ಸಂಘಟನೆಯ ಸಂಚಾಲಕಿ ಅನಸೂಯ ಕಾಶೆ ಹಾಗೂ ಪ್ರಾಂತ ರೈತ ಸಂಘದ ಕಾರ್ಯಕರ್ತರು, ಪಾಲ್ಗೊಂಡು ಕೋಮು ಸಾಮರಸ್ಯ ಬಗ್ಗೆ ಇಂದಿನ ಗಂಭೀರ ಪರಿಸ್ಥಿತಿಯ ಬಗ್ಗೆ ಜನತೆ ಅರಿಯಬೇಕು ಎಂದು ಕೋಮುವಾದವನ್ನು ಬೇರು ಸಹಿತ ಕಿತ್ತು ಹಾಕಬೇಕೆಂದು ಜನತೆಗೆ ಕರೆ ನೀಡಿದರು.

ಚೆನ್ನದ ಗಣಿ ಕಾರ್ಮಿಕರ ರನ್ನದಂಥ ಕಾರ್ಯಕ್ರಮ

ಹಟ್ಟಿ : ಜನವರಿ 30,1993. ಹಟ್ಟಿ ಚಿನ್ನದ ಗಣಿ ಪ್ರದೇಶದಲ್ಲಿ ಒಂದು ಗಂಭೀರ ವಿಶೇಷ ವಾತಾವರಣ. ಕಠಿಣ ಮಡಿಮೆ ಸಾಗುತ್ತಿರುವಾಗಲೇ ಒಂದಷ್ಟು ಹೊತ್ತು ಎಲ್ಲಾ ಕೆಲಸ ಸ್ಥಗಿತ. ಇದು ತಮ್ಮ ಯಾವುದೇ ಆರ್ಥಿಕ ಸವಲತ್ತುಗಳಿಗಾಗಿ ಸರಕಾರವನ್ನು ಒತ್ತಾಯಿಸುವ ಕ್ರಮ ಖಂಡಿತಕ್ಕೂ ಆಗಿರಲಿಲ್ಲ. ಕೋಮುವಾದಿಗಳು ಹಾಗೂ ಛಿದ್ರಕಾರಿ ಶಕ್ತಿಗಳಿಂದ ದೇಶವನ್ನು ರಕ್ಷಣೆ ಮಾಡುವ ಬಗ್ಗೆ ಪ್ರತಿಜ್ಞೆಯನ್ನು ಸ್ವೀಕರಿಸಲು ಕೆಲಸವನ್ನು ಸ್ವಲ್ಪ ಹೊತ್ತು ಸ್ಥಗಿತಗೊಳಿಸಲಾಗಿತ್ತು

ಸಿ.ಐ.ಟಿ.ಯು ನೇತೃತ್ವದಲ್ಲಿ ಬೆಳಿಗ್ಗೆ 11 ಗಂಟೆಗೆ ನಡೆದ ಪ್ರತಿಜ್ಞೆ ಸ್ವೀಕಾರ ಸಮಾರಂಭದ ಅಧ್ಯಕ್ಷತೆಯನ್ನು ಕಂಪೆನಿಯ ಆಡಳಿತಾಧಿಕಾರಿ ಶಂಕರನಾರಾಯಣನ್ ವಹಿಸಿದ್ದರು. ಇತರ ಅಧಿಕಾರಿಗಳಾದ ಬಿ.ಜಿ. ಪಹಾ, ಎ.ಎಸ್.ಗಿಂಗಲ್, ಫಿರೋಮಾಖಾನ್ ಮೊದಲಾದವರೂ ಉಪಸ್ಥಿತರಿದ್ದರು. ಸಿ.ಐ.ಟಿ.ಯು ನಾಯಕ ಶಿವಾನಂದ ಪ್ರತಿಜ್ಞೆಯನ್ನು ಬೋಧಿಸಿದರು. ಎಂಜಿನಿಯರಿಂಗ್ ವಿಭಾಗದಲ್ಲಿ ಮಾತ್ರ ಯಶಸ್ವಿಯಾಗಿ ನಡೆದ ಈ ಕಾರ್ಯಕ್ರಮದಲ್ಲಿ 800 ಕ್ಕೂ ಹೆಚ್ಚು ಮಂದಿ ಕಾರ್ಮಿಕರು ಭಾಗವಹಿಸಿದ್ದರು.

ವಿದ್ಯಾರ್ಥಿಗಳಿಂದ : ಬೇರೊಂದು ಸಮಾರಂಭದಲ್ಲಿ ಎಸ್.ಎಫ್.ಐ. ಹಟ್ಟಿ ಘಟಕದ ಅಧ್ಯಕ್ಷ ಎಂ.ಸಿ. ನಿಂಗಪ್ಪ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು.

ಸ್ಪರ್ಧೆಗಳು: ಗಣರಾಜ್ಯೋತ್ಸವದ ಅಂಗವಾಗಿ ಎಸ್.ಎಫ್.ಐ. ಹಟ್ಟಿ ಘಟಕ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗಾಗಿ ಪ್ರಬಂಧ, ಕವನ ಮತ್ತು ರಂಗೋಲಿ ಸ್ಪರ್ಧೆಗಳನ್ನು ಏರ್ಪಡಿಸಿತ್ತು. 80 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು.

ಅಂದು ಸರಕಾರಿ ಕಿರಿಯ ಮಹಾವಿದ್ಯಾಲಯದಲ್ಲಿ ನಡೆದ ಸಮಾರಂಭದಲ್ಲಿ ಉಪನ್ಯಾಸಕ ಎಸ್.ಬಿ. ರಾಜು ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ವಿ.ಎಸ್. ಕಲ್ಲೂರ ಕೆ.ಪ್ರಸಾದ್ ಮತ್ತು ಬಿ. ಅಮರೇಶ್ ಅತಿಥಿಗಳಾಗಿದ್ದರು. ಪ್ರಿನ್ಸಿಪಾಲ್ ಮ.ಬ. ತುರುಟಿಗೆ ಅಧ್ಯಕ್ಷತೆ ವಹಿಸಿದ್ದರು. ಸ್ಪರ್ಧೆ ವಿಜೇತರಿಗೆ ಪ್ರಶಸ್ತಿ ಪತ್ರಗಳನ್ನು ವಿತರಿಸಲಾಯಿತು.

ಎಸ್.ಎಫ್.ಐ ಗುರುಗುಂಟಾ ಘಟಕ ಕೂಡಾ ಗಣರಾಜ್ಯ ದಿನದ ಅಂಗವಾಗಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿತ್ತು.

ಭದ್ರಾವತಿಯಲ್ಲಿ ಮಾನವ ಸರಪಳಿ

ಭದ್ರಾವತಿ : ಗಣರಾಜ್ಯ ದಿನದಂದು ದೇಶದ ಸಮಗ್ರತೆ ರಕ್ಷಣೆಗಾಗಿ 'ಮಾನವ ಸರಪಳಿ' ಕಾರ್ಯಕ್ರಮವನ್ನು ಭದ್ರಾವತಿಯಲ್ಲಿ ಆಯೋಜಿಸಲಾಗಿತ್ತು. ಜ. 26 ರ ಸಂಜೆ 4.50 ರಿಂದ 5 ಗಂಟೆ ನಡುವೆ ಮಾಧವಚಾರ್ ಸರ್ಕಲ್‌ನಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಸುಮಾರು 200 ಜನರು ಇದ್ದರು.

ಸಿಪಿಐ(ಎಂ) ಸಿಪಿಐ, ಜನತಾಪಕ್ಷ, ಸಮಾಜವಾದಿ ಜನತಾಪಕ್ಷ, ಡಿ.ಎಂ.ಕೆ., ಡಿ.ಎಸ್.ಎಸ್., ಡಿ.ವೈ.ಎಫ್.ಐ. ಕಾರ್ಯಕರ್ತರಲ್ಲದೆ ಕೆಲಮಂದಿ ವಕೀಲರು ಕೂಡಾ ಪಾಲ್ಗೊಂಡಿದ್ದರು.

ಜನತಾದಳದ ನಾಗೇಂದ್ರರಾವ್, ಸಿಪಿಐನ ದಯಾನಂದ ಮತ್ತು ಸ.ಜ.ಪ.ದ ಅಪ್ಪಾಜಿ ಮಾತನಾಡಿದರು.

ಪ್ರತಿಜ್ಞೆ ಸ್ವೀಕಾರ

ಹುತಾತ್ಮ ದಿನವಾದ ಜನವರಿ 30 ರಂದು ಬೆಳಿಗ್ಗೆ 11 ಗಂಟೆಗೆ ಭದ್ರಾವತಿಯ ರಂಗಪ್ಪ ಸರ್ಕಲ್ ಬಳಿ ನೆರೆದಿದ್ದ ಸುಮಾರು 50 ಮಂದಿಗೆ ಸಿಪಿಐನ ಡಿ.ಸಿ. ಮಾಯಣ್ಣ ರಾಷ್ಟ್ರೀಯ ಏಕತೆ ರಕ್ಷಣೆಯ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು.

ದಾಂಡೇಲಿಯಲ್ಲಿ ಉತ್ಸಾಹ

ದಾಂಡೇಲಿ : ದಾಂಡೇಲಿಯಲ್ಲಿ 26-1-1993 ರಂದು ಗಣರಾಜ್ಯೋತ್ಸವದಂದು ಸಿಪಿಐ(ಎಂ) ಜನತಾದಳ ಹಾಗೂ ಸಿಐಟಿಯು ಕಾರ್ಯಕರ್ತರು ಜಂಟಿಯಾಗಿ ಕಿತ್ತೂರು ಚೆನ್ನಮ್ಮ ಸರ್ಕಲ್ಲಿನಲ್ಲಿ ಸಂಜೆ 4.30 ಗಂಟೆಗೆ ಒಬ್ಬರ ಕೈ ಒಬ್ಬರು ಹಿಡಿದು ಮಾನವ ಸರಪಳಿ ನಿರ್ಮಿಸಿದರು. ಮಾನವ ಸರಪಳಿ ಕಾರ್ಯಕ್ರಮದಲ್ಲಿ ಎಲ್ಲಾ ಧರ್ಮದ ಜನರು ಅತಿ ಉತ್ಸಾಹದಿಂದ ಭಾಗವಹಿಸಿದ್ದರು. ಈ ಕಾರ್ಯಕ್ರಮವನ್ನು ಮಾಜಿ ರಾಜ್ಯಸಭಾ ಸದಸ್ಯರಾದ ಜನತಾದಳದ ಆರ್.-ಎಸ್. ನಾಯ್ಕರ್ ಉದ್ಘಾಟಿಸಿದರು ಹಾಗೂ ಸಿಪಿಐ(ಎಂ)ನ ಹರೀಶ್ ನಾಯ್ಕರು ರಾಷ್ಟ್ರೀಯ ಏಕತಾ ಆಂದೋಲನ ಸಮಿತಿ ಕರೆನೀಡಿದ್ದ ಪ್ರತಿಜ್ಞೆಯನ್ನು ಬೋಧಿಸಿದರು. ಹಾಗೂ ಅದೇ ದಿನ ಸಹಿ ಸಂಗ್ರಹ ಕಾರ್ಯವನ್ನು ಪ್ರಾರಂಭಿಸಲಾಯಿತು.

ಮೆರವಣಿಗೆ : 30-1-1993 ರಂದು ಸಿಪಿಐ(ಎಂ), ಜನತಾದಳ, ಸಿ.ಐ.ಟಿ.ಯು ಹಾಗೂ ಎ.ಐ.ಟಿ.ಯು.ಸಿ. ಕಾರ್ಯಕರ್ತರು ದಾಂಡೇಲಿಯ ಪ್ರಮುಖ ಬೀದಿಗಳಲ್ಲಿ ಕೋಮು ಸಾಮರಸ್ಯದ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆ ತೆಗೆದರು. ಮೆರವಣಿಗೆಯಲ್ಲಿ ಸುಮಾರು 500 ಜನರಿದ್ದರು. ನಂತರ ಸಂಡೇ ಮೈದಾನಲ್ಲಿ ಟಿ. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯಿತು. ಬಹಿರಂಗ ಸಭೆಯಲ್ಲಿ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ರಾಜ್ಯ ಕಾರ್ಯದರ್ಶಿಯವರಾದ ಎಸ್.ವೈ. ಗುರುಶಾಂತ್, ಜನತಾದಳದ ಉ.ಕ. ಜಿಲ್ಲಾ ಮಾಜಿ ಜಿಲ್ಲಾ ಪರಿಷತ್ ಉಪಾಧ್ಯಕ್ಷ ಪ್ರಮೋದ್ ಹೆಗಡೆ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಎಂ. ಗಂಗಣ್ಣ ಸ್ವಾಗತಿಸಿದರು. ನಂತರ ಹರೀಶ್ ನಾಯ್ಕ ಶ್ರೀ ಕೋನಾಪುರ, ಹಾಗೂ ಆರ್.ಎಸ್. ನಾಯ್ಕರವರು ಕೋಮು ಸೌಹಾರ್ದದ ಬಗ್ಗೆ ಮಾತನಾಡಿದರು. ಎಸ್.ವೈ. ಗುರುಶಾಂತರವರು ಪ್ರತಿಜ್ಞಾ ವಿಧಿಯನ್ನು ಭೋಧಿಸಿದರು.

ಸಹಬಾಳ್ವೆಯಲ್ಲಿ ನಂಬಿಕೆ ಇಲ್ಲದವರನ್ನು ಹಿಮ್ಮೆಟ್ಟಿಸಿ

ಕಳೆದ ವರ್ಷದ ಡಿಸೆಂಬರ್ 6 ರ ನಂತರ ದೇಶದಲ್ಲಿ ಶಾಂತಿ, ಭಾವೈಕ್ಯತೆ, ಸಹೋದರತೆಯ ಅಡಿಗಲ್ಲು ಅಲುಗಾಡುತ್ತಿದೆ. ಇದರಿಂದ ದೇಶವು ಬಾಹ್ಯ ಮತ್ತು ಆಂತರಿಕವಾಗಿ ಹೆಚ್ಚಿನ ಗಂಡಾಂತರಕ್ಕೆ ಒಳಗಾಗಿದೆ. ಅಧಿಕಾರ ದಾಹಕ್ಕೆ ಮೂಲಭೂತವಾದಿಗಳು ನಂಬಿಕೆ, ಭಾವನೆಗಳನ್ನು ಪ್ರಚೋದಿಸಿ ಕೆರಳಿಸುವುದೇ ಹೆಚ್ಚಾಗಿದೆ. ಜನತೆ ಮಧ್ಯೆ ನಿಜವಾದ ಸಮಸ್ಯೆಗಳ ಬಗ್ಗೆ ...ಗ ಅವಕಾಶವಿಲ್ಲದಂತೆ ಪ್ರಚೋದನಾಕಾರಿ ಹೇಳಿಕೆ ಬರಹಗಳ ಮೂಲಕ ದೇಶದಲ್ಲಿ ಕೋಮು ದಳ್ಳುರಿಯನ್ನು ಹೆಚ್ಚಿಸುತ್ತಿದ್ದಾರೆ. ಆದ್ದರಿಂದ ದೇಶದ ಅಭಿವೃದ್ಧಿ ಮತ್ತು ಸಮಗ್ರತೆಗೆ ಜಾತ್ಯತೀತ ಶಕ್ತಿಗಳು ಮತ್ತು ವ್ಯಕ್ತಿಗಳನ್ನು ಸಂಘಟಿಸಿ ಶಾಂತಿಯ ಸಹಮತ ಸಹಬಾಳ್ವೆ ಮೇಲೆ ನಂಬಿಕೆ ಇಲ್ಲದವರನ್ನು ಹಿಮ್ಮೆಟ್ಟಿಸಬೇಕೆಂದು ಉಪನ್ಯಾಸಕ ಹಾಗೂ 'ಸಮುದಾಯ' ಜಿಲ್ಲಾ ಕಾರ್ಯದರ್ಶಿ ಜಿ.ವಿ. ಆನಂದಮೂರ್ತಿ ಕರೆ ನೀಡಿದ್ದಾರೆ.

ಜನವರಿ 31 ರಂದು ಡಿ.ವೈ.ಎಫ್.ಐ. ತುಮಕೂರು ಜಿಲ್ಲಾ ಪ್ರಥಮ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕರ್ನಾಟಕ ಪ್ರಾಂತ ರೈತ ಸಂಘಟನೆಯ ಕಾರ್ಯದರ್ಶಿ ಹೆಚ್.ಸಿ ಬೆನ್ನಪ್ಪನವರು ಮಾತನಾಡಿ ಯುವಜನತೆಯು ಸಂಘಟಿತರಾಗಿ ಅಂತರಾಷ್ಟ್ರೀಯ, ರಾಷ್ಟ್ರೀಯ ಸಮಸ್ಯೆಗಳನ್ನು ಅಭ್ಯಾಸ ಮಾಡಿ ಸರಿಪಡಿಸಲು ಶ್ರಮಿಸಬೇಕೆಂದು ಸಲಹೆ ಮಾಡಿದರು. ಮತ್ತೊಬ್ಬ ಮುಖ್ಯ ಅತಿಥಿ ಬಲಹಾಮ ಮಾತನಾಡಿದರು.

ಆರ್. ಭಾಸ್ಕರ ಸ್ವಾಗತಿಸಿದರು ಆರ್. ...ಂದ್ರ ವಂದಿಸಿದರು. ಸಂಘಟನಾ ಸಮಿತಿ ಸಂಚಾಲಕ ಉಮೇಶ್ ವರದಿಯನ್ನು ಮಂಡಿಸಿದರು.

ಹೊಸ ಜಿಲ್ಲಾ ಸಮಿತಿಯ ಅಧ್ಯಕ್ಷರಾಗಿ ...ರ್.ಎಸ್. ಚೆನ್ನಬಸವಣ್ಣ, ಉಪಾಧ್ಯಕ್ಷರಾಗಿ ಜಗದೀಶ್, ಸುಬ್ರಹ್ಮಣ್ಯಂ, ಅಲ್ಬರ್ಟ್, ಚೆನ್ನಬಸಪ್ಪ, ಎಸ್.ಪಿ. ಕಾರ್ಯದರ್ಶಿಯಾಗಿ ಜಿ. [illegible], ಸಹಕಾರ್ಯದರ್ಶಿಗಳಾಗಿ ಕೆ.ಜಿ. ಸ್ವಾಮಿ, ಶ್ರೀ ರಾಮಪ್ಪ, ನರಸಿಂಹರಾಜು. ಎಂ. [illegible]ಯಾಗಿ ಆರ್. ಸುರೇಂದ್ರ ಮತ್ತು 11 ... ಸಮ್ಮೇಳನ ಆಯ್ಕೆ ಮಾಡಿತು. ...ವ ಸಮಾರೋಪ ಸಮಾರಂಭವು ಹೊಸ ಜಿಲ್ಲಾ ಸಮಿತಿ ಅಧ್ಯಕ್ಷರಾದ ಆರ್.-ಎಸ್. ಚೆನ್ನಬಸವಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು. ಭಾರತ ಜ್ಞಾನ ವಿಜ್ಞಾನ ಸಮಿತಿ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಸಿ. ಯತಿರಾಜು ಮುಖ್ಯ ಅತಿಥಿಯಾಗಿದ್ದರು.

ರಾಯಚೂರಿನಲ್ಲಿ : ಡಿ. 31 ರಾಯಚೂರಿನಲ್ಲಿ ಕೋಮುವಾದದ ವಿರುದ್ಧ ಒಂದು ದೊಡ್ಡ ಬಹಿರಂಗ ಸಭೆ. ಡಿ. 6ರ ಘಟನೆಯ ನಂತರ ರಾಯಚೂರಿನಲ್ಲಿ ಕೋಮುವಾದಿ ಶಕ್ತಿಗಳು ಬಹಳಚುರುಕಾಗಿ ತಮ್ಮ ಅಪಪ್ರಚಾರದ ಧಾಲಿ ನಡೆಸುತ್ತವೆ. ಆದರೆ ಜಾತ್ಯಾತೀತ ಶಕ್ತಿಗಳನ್ನು ಎಚ್ಚರಿಸುವ ಕೆಲಸ ಆಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಡಿ.31 ಸಂಘಟಿಸಿದ ಸಭೆಗೆ ಉತ್ಸಾಹದ ಪ್ರತಿಕ್ರಿಯೆ. ರಾಯಚೂರಿನಲ್ಲಿ ಜಾತ್ಯಾತೀತ ವಿರೋಧ ಪಕ್ಷಗಳ ಪ್ರಮುಖ ಮುಖಂಡರೆಲ್ಲಾ ಒಂದೇ ಜಾತ್ಯಾತೀತತೆಯ ಶಕ್ತಿಗಳಲ್ಲಿ ನೆಚ್ಚಿಕೆ ಮೂಡಿಸಿದರೆ, ಜನರ ಪ್ರತಿಕ್ರಿಯೆಯೂ ಉತ್ಸಾಹಕರವಾಗಿತ್ತು. ನಗರದ ಕರ್ನಾಟಕ ಸಂಘದ ಸಭಾಂಗಣ ತುಂಬಿ ತುಳುಕುತ್ತಿತ್ತು. ಅಂದು ರಾಷ್ಟ್ರೀಯ ಏಕತಾ ಆಂದೋಲನದ ರಾಯಚೂರು ಜಿಲ್ಲಾ ಸಮಿತಿಯ ರಚನೆಯಾಯಿತು. ಸಹಿ ಸಂಗ್ರಹ ಚಳುವಳಿಯ ಉದ್ಘಾಟನೆಯೂ ಅಂದೇ ನಡೆಯಿತು.

ಈ ಸಭೆಯಲ್ಲಿ ಶಾಸಕ ಶ್ರೀ ಎಂ.ಎಸ್. ಪಾಟೀಲ ಜಿಲ್ಲೆಯಲ್ಲಿ ಸಹಿ ಸಂಗ್ರಹ ಚಳುವಳಿಯನ್ನು ಉದ್ಘಾಟಿಸುತ್ತಾ ಸಂಘ ಪರಿವಾರದ ಕೋಮುವಾದ ಕ್ರೂರ ಧಾಲಿಯನ್ನು ಎದುರಿಸುವಲ್ಲಿ ಪ್ರಧಾನಿ ನರಸಿಂಹರಾವ್ ಸಂಪೂರ್ಣ ವಿಫಲವಾಗಿದ್ದು ಈ ದೇಶದ ದುರಂತ ಎಂದು ಬಣ್ಣಿಸಿದರು.

ಏಕತೆಯ ಪ್ರತಿಜ್ಞೆಯನ್ನು ಬೋಧಿಸುತ್ತಾ ಜಿಲ್ಲೆಯ ಖ್ಯಾತ ಸಾಹಿತ ಶ್ರೀ ಶಾಂತರಸರು, ದೇಶದ ಪ್ರಸ್ತುತ ಸಂದರ್ಭದಲ್ಲಿ ಸಾಹಿತಿಗಳು ಬರಹಗಾರರು, ಏಕಾಂತದಿಂದ ಹೊರಹಂದು ಫ್ಯಾಸಿಸ್ಟ್ ವಿರೋಧಿ ಚಳುವಳಿಯಲ್ಲಿ ಭಾಗವಹಿಸದಿದ್ದರೆ ಈ ಸವಾಲನ್ನು ಸ್ವೀಕರಿಸಲಿದ್ದರೆ, ಕೋಮುವಾದಿಗಳು ಜನಪರ ಸಾಹಿತಿಗಳ ಬಾಯಿಗೆ ಬೀಗ ಹಾಕುವ ಶಾಸನ ತಂದಾರು ಎಂದು ಎಚ್ಚರಿಸಿದರು.

• ಲೋಕಸಭಾ ಸದಸ್ಯ ಶ್ರೀ ಅಬ್ದುಲ್ ಸಮದ್ ಸಿದ್ದಿಕಿ ಡಿಸೆಂಬರ್ 6ರ ಘಟನೆಯಿಂದ ಮುಸ್ಲಿಂ ಜನರು ತತ್ತರಿಸಿ ಹೋಗಿದ್ದಾರೆ. ಬಹುಸಂಖ್ಯಾತ ಜನ ಬಿಜೆಪಿ ಜೊತೆಗಿಲ್ಲ ಎಂಬುದನ್ನು ಸಾಬೀತು ಪಡಿಸಲು ಏಕತಾ ಆಂದೋಲನದ ಮೇಲೆ ದೊಡ್ಡ ಜವಾಬ್ದಾರಿ ಇದೆ ಎಂದರು.

ಜಿಲ್ಲಾ ಸಿಐಟಿಯು ಅಧ್ಯಕ್ಷ ಮತ್ತು ಸಿಪಿಐ (ಎಂ) ಪಕ್ಷದ ಜಿಲ್ಲಾ ಸಮಿತಿ ಸದಸ್ಯ ಕಾಂ.ರಾಘವೇಂದ್ರ ಕುಷ್ಟಗಿ, ಸಂಸದೀಯ ಪ್ರಜಾಪ್ರಭುತ್ವದ ನಾಶದ ಪಣತೊಟ್ಟ ಸಂಘ ಪರಿವಾರವನ್ನು ಮೂಲೆ ಗುಂಪಾಗಿಸದಿದ್ದರೆ ಧರ್ಮ ಸಂಸತ್ತಿನ ಹೆಸರಿನಲ್ಲಿ ಫ್ಯಾಸಿಸ್ಟ್ ಪ್ರಭುತ್ವ ತಲೆ ಎತ್ತುರವ ಅಪಾಯವಿದೆ ಎಂದರು.

ಜಿಲ್ಲಾ ಜನತಾದಳದ ಅಧಯಕ್ಷ ಶ್ರೀ ಅಮೀನರೆಡ್ಡಿ ಪಾಟೀಲ ಅಧ್ಯಕ್ಷತೆಯಲ್ಲಿ ನಡೆಯ ಈ ಸಭೆಯಲ್ಲಿ ಎರಡು ಲಕ್ಷ ಸಹಿ ಸಂಗ್ರಹ ಮಾಡುವ ಗೊತ್ತುವಳಿ ಸ್ವೀಕರಿಸಲಾಯಿತು ಮತ್ತು ಜಿಲ್ಲಾ ಮಟ್ಟದ ರಾಷ್ಟ್ರೀಯ ಏಕತಾ ಆಂದೋಲನ ಸಮಿತಿಯ ಅಧ್ಯಕ್ಷರಾಗಿ ಶ್ರೀ ಎಂ.ಎಸ್.ಪಾಟೀಲ, ಎಂಎಲ್ಎ ಅವರನ್ನು ಮತ್ತು ಕಾರ್ಯದರ್ಶಿಯಾಗಿ ರಾಘವೇಂದ್ರ ಕುಷ್ಟಗಿಯನ್ನು ಆಯ್ಕೆ ಮಾಡಲಾಯಿತು. ಇದೇ ಸಮಯದಲ್ಲಿ ಮಾಜಿ ಶಾಸಕ ಶ್ರೀ ನಾಗಪ್ಪ ನ್ಯಾಯವಾದಿಗಲು ಖೋಟಾ ಹಿಂದೂವಾದಿಗಳ ನಿಜ ಸ್ವರೂಪ ಎಂಬ ಸೀತಾರಾಂ ಯೆಚೂರಿಯವರ ಕಿರು ಹೊತ್ತಿಗೆಯನ್ನು ಬಿಡುಗಡೆ ಮಾಡಿದರು.

ನಗರಸಭಾ ಸದಸ್ಯ ಶೇಕ ರಿಜವಾನ ಸ್ವಾಗತಿಸಿ, ಕಾಂ.ಮಲ್ಲಯ್ಯಾ ಜಾಲಹಳ್ಳಿ ವಂದನಾರ್ಪಣೆ ಮಾಡಿದ ಈ ಸಭೆಯಲ್ಲಿ ಮಾಜಿ ಮಂತ್ರಿ ಶ್ರೀಮತಿ ಪುಷ್ಪಾವತಿ, ಎಐಟಿಯುಸಿ ನಾಯಕ ರಹೀಂ ಸಾಬ, ಸಿಪಿಐ(ಎಂ) ಕಾರ್ಯದರ್ಶಿ ಬಿ.ಲಿಂಗಪ್ಪಾ, ಗಂಗಾಧರ ಕುಷ್ಟಗಿ ಭಾಗವಹಿಸಿದರು.

ಮಂಗಳೂರಿನಲ್ಲಿ ಸತ್ಯಶೋಧಕ ಸಮಿತಿ

ಮಂಗಳೂರಿನಲ್ಲಿ ಕೋಮುವಾದ ವಿರೋಧಿ ಸಮಿತಿ ಫೆಬ್ರವರಿ 6 ರಂದು ಸಭೆ ಸೇರಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋಮುಗಲಭೆಗಳು ನಡೆದ ಸ್ಥಳಗಳಿಗೆ ಭೇಟಿ ನೀಡಿ ಸತ್ಯಸಂಗತಿಯನ್ನು ವರದಿ ಮಾಡಲು ಪ್ರಸಿದ್ಧ ಪತ್ರಿಕಾಕರ್ತರು ಹಾಗೂ ಬರಹಗಾರರನ್ನು ಒಳಗೊಂಡ ಒಂದು ಸತ್ಯ ಶೋಧಕ ಸಮಿತಿಯನ್ನು ನೇಮಿಸಿದೆ. ಈ ತಂಡ ಫೆ-12 ರಂದು ಗಲಭೆ ಸಂತ್ರಸ್ತ ಪ್ರದೇಶಗಳಿಗೆ ಭೇಟಿ ನೀಡಿ ವರದಿ ನೀಡಲಿದೆ. ಸತ್ಯ ಶೋಧಕ ಸಮಿತಿಯ ಸದಸ್ಯರು- ಲೇಖಕರಾದ ಫಕೀರ್ ಮಹಮ್ಮದ್ ಕಟ್ಪಾಡಿ, ಜಿ. ರಾಜಶೇಖರ್ ಪಿ. ಮುಹಮ್ಮದ್, 'ಪ್ರಜಾವಾಣಿ' ಪತ್ರಿಕೆಯ ಮಂಗಳೂರು ಬ್ಯೂರೋ ಮುಖ್ಯಸ್ಥ ಇ.ವಿ. ಸತ್ಯನಾರಾಯಣ್ ಮತ್ತು 'ಮುಂಗಾರು' ಪತ್ರಿಕೆಯ ಚಿದಂಬರ್ ಬೈಕಂಪಾಡಿ ಹಾಗೂ ಲೋಲಾಕ್ಷ

ಎಸ್.ಎಫ್.ಐ. ಲಿಂಗಸ್ಗೂರು ತಾಲೂಕು ಸಮ್ಮೇಳನ

ಹಟ್ಟಿ : ಎಸ್.ಎಫ್.ಐ. ಲಿಂಗ್ಸೂರು ಪ್ರಥಮ ತಾಲೂಕು ಸಮ್ಮೇಳನ ಇತ್ತೀಚೆಗೆ ಹಟ್ಟಿಯಲ್ಲಿ ನಡೆಯಿತು. ಉಪನ್ಯಾಸಕ ಎಸ್.ಬಿ. ರಾಜು ಉದ್ಘಾಟಿಸಿದರು. ಸಿ.ಐ.ಟಿ.ಯು ಮುಖಂಡರಾದ ಎಂ .ಮೌಲಾ, ಅಮರ ಗುಂಡಪ್ಪ, ರೈತಸಂಘ ನಾಯಕ ಬಿ. ಹನುಮಂತಪ್ಪ, ಮಾಜಿ ಪ್ರಧಾನ ಪರಸಿಂಗ್ ಬಾನು ಠಾಕೂರ್ ಅತಿಥಿಗಳಾಗಿ ಭಾಗವಹಿಸಿದ್ದರು. ಎಸ್.ಎಫ್.ಐ ಜಿಲ್ಲಾ ಸಮಿತಿ ಮಾಜಿ ಅಧ್ಯಕ್ಷ ಹಾಗೂ ಸಿ.ಐ.ಟಿ. ಯು ನಾಯಕ ಶೇಕ್ಷಾಖಾದ್ರಿ ವಿಶೇಷ ಅತಿಥಿಯಾಗಿದ್ದರು.

ಸಮ್ಮೇಳನದಲ್ಲಿ ಆಯ್ಕೆಯಾದ ಸಮಿತಿ ಬಿ. ಅಮೇರೇಶ್ ಅಧ್ಯಕ್ಷ ಬಿ. ಮಹಮದಾಲಿ ಮತ್ತು ಬಸವರಾಜ-ಉಪಾಧ್ಯಕ್ಷರೂ ಆಶಿಕಿ- ಕಾರ್ಯದರ್ಶಿ, ಶಿವಪ್ಪ ಮತ್ತು ಶರಣಬಸವ- ಸಹಕಾರ್ಯದರ್ಶಿಗಳು ಹಾಗೂ 9 ಮಂದಿ ಸಮಿತಿ ಸದಸ್ಯರು.

ಡಿ.ವೈ.ಎಫ್.ಐ ಸಮಾವೇಶ

ಕವಲಗುಂದಿ : ಡಿ.ವೈ.ಎಫ್.ಐ. ಕವಲಗುಂದಿ ಗ್ರಾಮ ಘಟಕದ ಸಮಾವೇಶ ಜನವರಿ 26 ರಂದು ನಡೆಯಿತು. ರಂಗೇಗೌಡ ಅಧ್ಯಕ್ಷತೆ ವಹಿಸಿದ್ದರು. ಬಿ.ಎ.ಸುಂದರ್ ಸಂಘಟನೆಯ ಧ್ಯೇಯೋದ್ದೇಶ ಕಾರ್ಯಕ್ರಮಗಳ ಕುರಿತು ವಿವರಿಸಿದರು. ಸಂಗಮೇಶ ಸ್ವಾಗತಿಸಿದರು. ಕೆ. ನಾಗಾರಾಜು ವಂದಿಸಿದರು.

ಡಿ.ವೈ.ಎಫ್.ಐ. ಕವಲಗುಂದಿ ಗ್ರಾಮ ಘಟಕದ ಸಂಚಾಲಕರಾಗಿ ಕೆ.ಎಸ್. ಕುಮಾರ್, ಸಹ ಸಂಚಾಲಕರಾಗಿ ಶಿವಕುಮಾರ ಮತ್ತು ಆರು ಮಂದಿ ಸದಸ್ಯರನ್ನು ಸಮಾವೇಶ ಆಯ್ಕೆ ಮಾಡಿತ್ತು.

ಪ್ರಗತಿ ಪರ ಹೋರಾಟಗಳಿಗೆ ಹಿನ್ನಡೆ

ತುಮಕೂರು : ಯುವಜನರ ಪ್ರಮುಖ ಪ್ರಶ್ನೆಯಾದ ಉದ್ಯೋಗದ ಹಕ್ಕು ಮೂಲಭೂತ ಹಕ್ಕಾಗಬೇಕು ಎಂಬ ಒತ್ತಾಯದ ಬದಲಿಗೆ ಇಂದು ಕೋಮು ಸೌಹಾರ್ದತೆ ಉಳಿಸಿ ಎಂದು ಒತ್ತಾಯಿಸುವ ಸ್ಥಿತಿ ಬಂದಿದೆ. ಇದಕ್ಕೆ ಕಾರಣ ದೇಶವನ್ನು ಹತ್ತಿ ಉರಿಯುವಂತೆ ಮಾಡಿರುವ ಕೋಮುವಾದಿಗಲು ಎಂದು ಡಿ.ವೈ.ಎಫ್.ಐ. ರಾಜ್ಯ ಅಧ್ಯಕ್ಷ ಹಾಗೂ ಹೈ ಕೋರ್ಟಿನ ಖ್ಯಾತ ವಕೀಲರೂ ಹೆಚ್.ಎನ್. ನಾಗಮೋಹನ್-ದಾಸ್ ಅಭಿಪ್ರಾಯಪಟ್ಟಿದ್ದಾರೆ. ಅಯೋಧ್ಯೆ ಘಟನೆ ಹಿನ್ನಲೆಯಲ್ಲಿ ನಡೆದ ಕೋಮುಗಲಭೆಗಳು ಎಲ್ಲಾ ಪ್ರಗತಿಪರ ಹೋರಾಟಗಳಿಗೆ ಹಿನ್ನಡೆಯಾಗಿದೆ. ಆದ್ದರಿಂದ ಕೋಮುವಾದದ ವಿರುದ್ಧ ಹೋರಾಟವನ್ನು ತೀವ್ರಗೊಳಿಸಬೇಕೆಂದು ತಿಳಿಸಿದರು. ಇತ್ತೀಚೆಗೆ ಇಲ್ಲಿ ಎಸ್.-ಎಫ್.ಐ ಮತ್ತು ಡಿ.ವೈ. ಎಫ್.ಐ. ವತಿಯಿಂದ ಏರ್ಪಡಿಸಿದ್ದ ಕೋಮುವಾದ ಮತ್ತು ಯುವಜನತೆ ಎಂಬ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ಈ ದೇಶದಲ್ಲಿ ಚಾತುರ್ವರ್ಣ ಇರಬೇಕೆಂದು ಹೇಳುವದರ ಮೂಲಕ ಕೋಮುವಾದಿಗಳು (ಸಂಘಪರಿವಾರ) ಜಾತ್ಯತೀತ ಮೌಲ್ಯವನ್ನು ಎತ್ತಿಹಿಡಿಯುವ ಸಂವಿಧಾನ ವಿರುದ್ಧ ಕೆಲಸ ಮಾಡುತ್ತಿದ್ದಾರೆ. ಕುಣಿಗಲ್‌ನ ಕೆ.ಪಿ. ಕೃಷ್ಣಸ್ವಾಮಿಯವರು ನುಡಿದರು ಅವರು ವಿಚಾರ ಸಂಕಿರಣದಲ್ಲಿ ಅತಿಥಿಗಳಾಗಿ ಭಾಗವಹಿಸಿದ್ದರು. ಓಟು ಗಳಿಸುವ ಆಕಾಂಕ್ಷೆಯಿಂದಾಗಿ ಕಾಂಗ್ರೆಸ್ ಮತ್ತು ಬಿ.ಜೆ.ಪಿ.ಗಳು ಒಂದೇ ಚೀಲದಲ್ಲಿ ಕೈ ಹಾಕಿವೆ ಎಂದೂ ಅವರು ಆಪಾದಿಸಿದರು.

'ಐಕ್ಯರಂಗ' ಪತ್ರಿಕೆಯ ಜಿ.ಎನ್. ನಾಗರಾಜ್‌ರವರು ದೇಶವನ್ನು ಕಟ್ಟುವ ಹಾಗೂ ಕೆಡಹುವ ಶಕ್ತಿಗಳ ನಡುವೆ ತೀವ್ರ ಸಂಘರ್ಷ ಆರಂಭವಾಗಿದೆ ಎಂದರು. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಭಾರತವೆಂಬ ದೇಶದ ನಿರ್ಮಾಣದ ಕೆಲಸ ಆರಂಭವಾದಂದಿನಿಂದ ದೇಶವನ್ನು ಕೆಡಹುವ ಕಂದಾಚಾರಿ ಶಕ್ತಿಗಳು - ಹಿಂದೂ- ಮುಸ್ಲಿಂ ಮತಾಂಧರು ಒಂದು ಕಡೆ ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಮತ್ತೊಂದು ಕಡೆ ದೇಶವನ್ನು ಒಡೆಯಲು ಕೆಲಸ ಮಾಡುತ್ತಿವೆ. ಸ್ವಾತಂತ್ರ್ಯವನ್ನು ಪಡೆದಾಗ ಸಂವಿಧಾನವನ್ನು ರೂಪಿಸಿದಾಗ ದೇಶವನ್ನು ಕಟ್ಟುವಲ್ಲಿ ಜನತೆ ಮಹತ್ವದ ವಿಜಯವನ್ನು ಪಡೆದರು. ದೇಶವನ್ನು ಕೆಹುವ ಶಕ್ತಿಗಳು ಇಂದು ಪ್ರಬಲರಾಗಿ ಎಲ್ಲ ಕಡೆ ಬೆಂಕಿ ಹಚ್ಚುತ್ತಾ ನಡೆದಿರುವಾಗ ಯುವಜನತೆ ಐಕ್ಯತೆಯನ್ನು ರಕ್ಷಿಸಲು ದೇಶವನ್ನು ಕಟ್ಟಲು ಕಂಕಣಬದ್ಧರಾಗಬೇಕೆಂದು ಕರೆ ನೀಡಿದರು.

ಡಿ.ವೈ.ಎಫ್.ಐ ಸಂಚಾಲಕ ಬಿ.ಉಮೇಶ್ ಸ್ವಾಗತಿಸಿದರು. ಕೆ.ಸಿ ಸ್ವಾಮಿ ವಂದಿಸಿದರು.

ಇರಾಕ್-ಇಸ್ರೇಲ್‌ಗಳ ಮೇಲೆ ದಿಗ್ಬಂಧನದಲ್ಲಿ ತಾರತಮ್ಯ

ಅಮೇರಿಕಾದ 'ಒಳ್ಳೆ ಮನುಷ್ಯ'ನ ದುಷ್ಟ ಮನಸ್ಸು ಬಹಿರಂಗ

ಬೆಳೆಯುತ್ತಿರುವ ಅಂತರ್ರಾಷ್ಟ್ರೀಯ ಒತ್ತಡಕ್ಕೆ ಮಣಿದು ಇಸ್ರೇಲ್ ಪ್ರಧಾನಿ ಗಡಿಪಾರಾದ ಪ್ಯಾಲೆಸ್ಟೀನ್ನರ ಬಗೆಗಿನ ತಮ್ಮ ಬಿಗಿನಿಲುವು ಸಡಿಲಿಸತೊಡಗಿದ್ದಾರೆ. ಅಮೇರಿಕನ್ ಸೂಚನೆಯ ಪ್ರಕಾರ 400 ಕ್ಕೂ ಹೆಚ್ಚು ಗಡಿಪಾರಾದವರಲ್ಲಿ 100 ಜನರನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಅವರು ಒಪ್ಪಿದ್ದಾರೆ. ಉಳಿದವರನ್ನು ಮುಂದಿನ ಒಂದು ವರ್ಷದೊಳಗೆ ವಾಪಸು ತೆಗೆದುಕೊಳ್ಳುವುದಾಗಿ ಅಮೇರಿಕನ್ ಸೂಚನೆಯ ಸಾರಾಂಶ: ಈ ಸೂಚನೆಯನ್ನು ಇಸ್ರೇಲ್ ಒಪ್ಪಿದರೆ, ಇಸ್ರೇಲ್ ಮೇಲೆ ಭದ್ರತಾ ಸಮಿತಿ ಹೊರಿಸಬಹುದಾದ ದಿಗ್ಬಂಧನ ವಿರುದ್ಧ ತನ್ನ ವೀಟೋ ಬಳಸುವುದಾಗಿ ಅಮೇರಿಕ ಹೇಳಿದೆ.

ಗಡಿಪಾರಾದ ಪ್ಯಾಲೆಸ್ಟೀನ್ನರು ಈ ಇಸ್ರೇಲ್-ಅಮೇರಿಕನ್ ಸೂಚನೆಯನ್ನು ತಿರಸ್ಕರಿಸಿದ್ದಾರೆ. ಒಡೆದು ಆಳುವ ನೀತಿಯನ್ನು ವಿರೋಧಿಸಿದ್ದಾರೆ. ಗಡಿಪಾರದ ಪ್ಯಾಲೆಸ್ಟೀನ್ನರ ಪರಿಸ್ಥಿತಿ ಚಳಿ ಆಹಾರ, ವೈದ್ಯಕೀಯ ಸೌಲಭ್ಯದ ಕೊರತೆಯಿಂದ ಬಿಗಡಾಯಿಸುತ್ತಿದ್ದರೂ, ಈ ಅವಮಾನವನ್ನು ಸಹಿಸಲು ಅವರು ತಯಾರಿಲ್ಲ.

ಈ ತಿರಸ್ಕಾರದಿಂದ ಅಮೇರಿಕದ ನಾಟಕ ನಡೆಯದಾಗಿದೆ.

ಅಮೇರಿಕ ಮತ್ತು ಇಸ್ರೇಲ್‌ನ ಈ ಹಾವು ಸಾಯಬಾರದು-ಕೋಲು ಮುರಿಯಬಾರದು ಎಂಬಂತಹ ನಾಟಕ, ಇಸ್ರೇಲ್ ವಿರುದ್ಧ ದಿಗ್ಬಂಧನಕ್ಕೆ ಒತ್ತಡ ಮುಂದಕ್ಕೆ ಹಾಕಲು ಮಾತ್ರ ಎಂಬುದು ಸ್ಪಷ್ಟ. ಅದೇ ಸಮಯದಲ್ಲಿ ಅಂತಹ ದಿಗ್ಬಂಧನದ ನಿರ್ಣಯ ಭದ್ರತಾ ಸಮಿತಿ ಪಾಸುಮಾಡಿದರೆ, ಅದರ ವಿರುದ್ಧ ವೀಟೋ ಉಪಯೋಗವನ್ನು ಸಮರ್ಥಿಸಿಕೊಳ್ಳಲು ನಾಟಕವಷ್ಟೇ. ಗಡಿಪಾರಾದ ಪ್ಯಾಲೆಸ್ಟೀನ್ನರ ಬಿಕ್ಕಟ್ಟಿಗೆ ತಮ್ಮ 'ಸಮಾಧಾನಕರ ಸೂಚನೆ'ಯನ್ನು ಪ್ಯಾಲೆಸ್ಟೀನ್ನರು ತಿರಸ್ಕರಿಸಿದ್ದಾರೆ ಎಂದು ಹೇಳಿಕೊಳ್ಳಲು ಅಷ್ಟೇ.

ಈ ನಡುವೆ ಇಸ್ರೇಲ್ ಗಡಿಪಾರಾದವರನ್ನು ವಾಪಸು ತೆಗೆದುಕೊಳ್ಳಬೇಕೆಂಬ ಭದ್ರತಾ ಸಮಿತಿ ನಿರ್ಣಯ ಸಂಖ್ಯೆ 799 ಜಾರಿ ಮಾಡಬೇಕು ಇಲ್ಲವೆ, ಇಸ್ರೇಲ್ ಮೇಲೆ ಆರ್ಥಿಕ ದಿಗ್ಬಂಧನ ಹಾಕಬೇಕೆಂಬ ನಿರ್ಣಯ ಕರಡೊಂದನ್ನು ಅರಬ್ ದೇಶಗಳು ಭದ್ರತಾ ಸಮಿತಿಯಲ್ಲಿ ತರಲಿವೆ. ಭದ್ರತಾ ಸಮಿತಿ ಸದಸ್ಯ ದೇಶಗಳೊಂದಿಗೆ ಅವು ಅನೌಪಚಾರಿಕ ಚರ್ಚೆ ನಡೆಸಿದ್ದು 15 ರಲ್ಲಿ 9 ದೇಶಗಳು ನಿರ್ಣಯವನ್ನು ಸಮರ್ಥಿಸುವ ಸಾಧ್ಯತೆ ಇದೆ. ಅಮೆರಿಕದ ಬಾಲಬಡುಕ ಅರಬ್ ದೇಶಗಳೂ ಈ ನಿರ್ಣಯವನ್ನು ಬೆಂಬಲಿಸಿವೆ ಎಂಬುದು ಗಮನಾರ್ಹ.

ಹೊಸ ಅಧ್ಯಕ್ಷ ಕ್ಲಿಂಟನ್‌ರ ವಿದೇಶ ನೀತಿ, ಬುಶ್‌ರವಷ್ಟೇ ಆಕ್ರಮಣಕಾರಿ, ಮೂರನೇ ಜಗತ್ತಿನ ವಿರೋಧಿ ಎಂಬುದು ಈಗಾಗಲೇ ಸ್ಪಷ್ಟವಾಗುತ್ತಿದೆ. ಈ ಇಸ್ರೇಲ್- ಅಮೇರಿಕನ್ ನಾಟಕದ ಹಿಂದೆ ಅಮೇರಿಕದ ಶ್ರೀಮಂತ ಜ್ಯೂ ಲಾಬಿ ಇದೆ. ಡೆಮಾಕ್ರಾಟಿಕ್ ಪಕ್ಷದ ಮೇಲೆ ಜ್ಯೂ ಲಾಬಿಗೆ ಇನ್ನೂ ಹೆಚ್ಚಿನ ಪ್ರಭಾವಿದೆಯಂತೆ. ಕ್ಲಿಂಟನ್‌ರ 'ಒಳ್ಳೆ ಮನುಷ್ಯ' ಇಮೇಜು ಅಂತರ್ರಾಷ್ಟ್ರೀಯ ವಲಯದಲ್ಲಂತೂ ಬಯಲಾಗಹತ್ತಿದೆ. ಈ ನಿರ್ಣಯ ಭದ್ರತಾ ಸಮಿತಿ ಪಾಸು ಮಾಡಿ ಅಮೇರಿಕ ವಿಟೋ ಬಳಸಿದರೆ, ಸೋವಿಯೆತ್ ಯೂನಿಯನ್‌ನ ವಿಘಟನೆ ನಂತರ ಮೊದಲ ವಿಟೋ ಬಳಕೆಯಾಗಲಿದೆ.

ಇಂತಹ ಸಂದರ್ಭದಲ್ಲಿ ವಿಶ್ವಸಂಸ್ಥೆ ಭದ್ರತಾ ಸಮಿತಿಯ ಶಾಶ್ವತ ಸದಸ್ಯರು ಮತ್ತು ಅವರ ವೀಟೋ ಅಧಿಕಾರದ ಬಗ್ಗೆ ಈಗಾಗಲೇ ಆರಂಭವಾಗಿರುವ ಚರ್ಚೆ ವಿವಾದಕ್ಕೆ ಪುನಃ ಬಿಸಿಯೇರಬಹುದು, ಈಗಿನ ಬದಲಾದ ಅಂತರ್ರಾಷ್ಟ್ರೀಯ ಪರಿಸ್ಥಿತಿಯಲ್ಲಿ ವಿಶ್ವಸಂಸ್ಥೆ ಭದ್ರತಾ ಸಮಿತಿ ಹೆಚ್ಚು ಪ್ರಜಾಸತ್ತಾತ್ಮಕ ರೀತಿಯಲ್ಲಿ ಪುನರ್ರಚನೆಯಾಗಬೇಕು ಎಂದು ಅಲಿಪ್ತ ದೇಶಗಳು ಒತ್ತಾಯಿಸುತ್ತಾ ಬಂದಿವೆ. ಭದ್ರತಾ ಸಮಿತಿಯನ್ನು ವಿಸ್ತರಿಸಬೇಕು. ಐದು ಶಾಶ್ವತ ಸದಸ್ಯರ ಪದ್ಧತಿ ತೆಗೆಯಬೇಕು, ಇಲ್ಲವೆ ವಿಟೋ ಅಧಿಕಾರ ತೆಗೆಯಬೇಕು, ಪ್ರಮುಖ ಸಂಘರ್ಷ ಪರಿಹಾರಕ್ಕೆ ನಿರ್ಣಯ ಕೈಗೊಳ್ಳುವ ಭದ್ರತಾ ಸಮಿತಿ ಹೆಚ್ಚು ಪ್ರಾತಿನಿಧಿಕವಾಗಿರಬೇಕು ಇವು ಅಲಿಪ್ತ ದೇಶಗಳ ಕೆಲವು ಸಲಹೆಗಳು ಈ ಒತ್ತಾಯಕ್ಕೆ ಪ್ರತಿಯಾಗಿ ಅಮೇರಿಕನ್ ನಾಯಕತ್ವದಲ್ಲಿ ಸಾಮ್ರಾಜ್ಯಶಾಹಿ ದೇಶಗಳು, ಅವುಗಳಿಗೆ ಅನುಕೂಲಕರವಾದ ಬದಲಾವಣೆಗಳನ್ನು ಸೂಚಿಸುತ್ತವೆ. ಜಪಾನ್, ಜರ್ಮನಿಗಳನ್ನು ಶಾಶ್ವತ ಸದಸ್ಯರಾಗಿ ತೆಗೆದುಕೊಳ್ಳುವುದು ಅವರ ಸೂಚನೆ.

ಉಗ್ರಗಾಮಿಗಳ ಬಹಿಷ್ಕಾರದ ನಡುವೆಯೂ ಕಾಂಬೋಡಿಯದಲ್ಲಿ ಚುನಾವಣೆ ನಿರ್ಧಾರ

ವಿಶ್ವ ಸಂಸ್ಥೆಯ ಮೇಲ್ವಿಚಾರಣೆಯಲ್ಲಿ ಕಾಂಬೋಡಿಯಾದ 13 ವರ್ಷಗಳ ಗೆರಿಲ್ಲಾ ಕದನ ಕೊನೆಗೊಳಿಸಿ, ಚುನಾವಣೆ ಆಧಾರದ ಮೇಲೆ ಸಂವೈಧಾನಿಕ ಸರ್ಕಾರ ರಚಿಸುವ ಕೆಲಸ ಅಷ್ಟೇನೂ ಸರಾಗವಾಗಿ ಸಾಗುತ್ತಿಲ್ಲ. 1970 ರ ದಶಕದಲ್ಲಿ ಅಧಿಕಾರದಲ್ಲಿದ್ದಾಗ 10 ಲಕ್ಷ ಜನರ ಕಗ್ಗೊಲೆಗೆ ಕಾರಣರಾಗಿದ್ದರೆ ಖೇಮರ್ ರೋಜ್ ಶಾಂತಿಯುತ ಚುನಾವಣೆಗೆ ಅಡ್ಡಗಾಲು ಹಾಕುತ್ತಿದೆ. ಎಲ್ಲಾ ರಾಜಕೀಯ ಪಕ್ಷಗಳೂ ಚುನಾವಣೆಗಾಗಿ ರಿಜಿಸ್ಟರ್ ಮಾಡಿಕೊಳ್ಳಬೇಕಾಗಿದ್ದು, ಡಿಸೆಂಬರ್ 27 ರ ಗಡುವು ಕಳೆದರೂ ಖೇಮರ್ ರೋಜ್ ಇನ್ನೂ ರಿಜಿಸ್ಟರ್ ಮಾಡಿಸಿಕೊಂಡಿಲ್ಲ. ಉಳಿದ ಮೂರು ಪ್ರಮುಖ ರಾಜಕೀಯ ಪಕ್ಷಗಳು ಈಗಾಗಲೇ ರಿಜಿಸ್ಟರ್ ಮಾಡಿಸಿಕೊಂಡಿವೆ ಇದಲ್ಲದೆ ವಿಶ್ವಸಂಸ್ಥೆ ತಾತ್ಕಾಲಿಕ ಸರಕಾರದ ಜತೆ ಖೇಮರ್ ರೋಜ್ ಕಳೆದ ಒಂದು ವರ್ಷದಿಂದಲೂ ಸಹಕರಿಸುತ್ತಿಲ್ಲ. ವಿಶ್ವಸಂಸ್ಥೆ ಪಡೆಗಳ ಜತೆ ಘರ್ಷಣೆಗಳಾಗಿವೆ.

ವಿಶ್ವಸಂಸ್ಥೆಯ ಕೆಲವು ಕಾರ್ಯಕರ್ತರು ಈ ಘರ್ಷಣೆಗಳಲ್ಲಿ ಸತ್ತಿದ್ದಾರೆ. ಕೆಲವು ವಿಶ್ವಸಂಸ್ಥೆಯ ಕಾರ್ಯಕರ್ತರನ್ನು ಅಪಹರಿಸಲಾಗಿದೆ.

ಈ ಎಲ್ಲಾ ಬೆಳವಣಿಗೆಗಳಾಗಿದ್ದರೂ ಖೇಮರ್ ರೋಜ್ ಸಹ ಭಾಗವಹಿಸಿದ್ದ ಸುಪ್ರೀಂ ನೇಶನಲ್ ಕೌನ್ಸಿಲ್(ಎಸ್.ಎನ್.ಸಿ) ಸಭೆಯಲ್ಲಿ ಮೇಯಲ್ಲಿ ಚುನಾವಣೆ ನಡೆಸುವುದೆಂದು ನಿರ್ಧರಿಸಲಾಗಿತ್ತು. ಖೇಮರ್ ರೋಜ್ ಚುನಾವಣೆಗೆ ರಿಜಿಸ್ಟರ್ ಮಾಡಿಸಿರದಿದ್ದರೂ, ಚುನಾವಣೆ ಮೊದಲೇ ನಿರ್ಧರಿಸಿದಂತೆ ನಡೆಸಬೇಕೆಂದು ಎಸ್. ಎನ್.ಸಿ. ತೀರ್ಮಾನಿಸಿದೆ. ಖೇಮರ್ ರೋಜ್‌ನ ಹಿಂಸಾತ್ಮಕ ಕ್ರಮಗಳನ್ನು ಖಂಡಿಸಿ ಅವನ್ನು ನಿಲ್ಲಿಸುವಂತೆ ವಿಶ್ವಸಂಸ್ಥೆ ತಾತ್ಕಾಲಿಕ ಸರ್ಕಾರದ ಜತೆ ಸಹಕರಿಸುವಂತೆ ಎಸ್.ಎನ್.ಸಿ. ಮನವಿ ಮಾಡಿದೆ.

ಕಾಂಬೋಡಿಯಾದ ಥೈಲೆಂಡ್‌ನ ಗಡಿ ಪ್ರದೇಶದ ಪ್ರಾಂತ್ಯಗಳನ್ನು ನಿಯಂತ್ರಿಸುತ್ತಿರುವ ಖೇಮರ್ ರೋಜ್ ಚುನಾವಣೆಗಳಲ್ಲಿ ಭಾಗವಹಿಸದಿದ್ದರೆ, ಕಾಂಬೋಡಿಯಾದ ರಾಜಕೀಯ ಬಿಕ್ಕಟ್ಟು ಪರಿಹಾರ ಆಗುವುದೋ ಎಂದು ಕಾದು ನೋಡಬೇಕಾಗಿದೆ.

20 ಸಾವಿರ ಉದ್ಯೋಗ ಕೊಡಿಸಿದ ಮೇಜರ್ ಭಾರತ ಭೇಟಿ!

ಬ್ರಿಟಿಷ್ ಪ್ರಧಾನಿ ಜಾನ್ ಮೇಜರ್‌ರವರ ಭಾರತ ಭೇಟಿಯನ್ನು ಕೆಲವು ಬ್ರಿಟಿಷ್ ಪತ್ರಿಕೆಗಳು ಟೀಕಿಸಿದ್ದವು. ಬ್ರಿಟಿಷ್ ಕಲ್ಲಿದ್ದಲು ಗಣಿಗಳ ವಿವಾದ ಇತ್ಯರ್ಥ ಮಾಡುವ ಬದಲು ಅದನ್ನು ಬದಿಗೊತ್ತಿ ವಿದೇಶ ಭೇಟಿ ಕೈಗೊಂಡಿರುವುದು ಟೀಕೆಯ ಸಾರಾಂಶವಾಗಿತ್ತು. ಟೀಕೆಗೆ ಉತ್ತರಿಸುತ್ತಾ ಜಾನ್ ಮೇಜರ್ ಅವರ ಭೇಟಿ ಸಫಲವಾಗಿದೆ ಎಂದು ಸಮರ್ಥಿಸಿಕೊಂಡ ರೀತಿ ಸ್ವಾರಸ್ಯಕರವಾಗಿದೆ. ಭಾರತ ಭೇಟಿ ಬ್ರಿಟನ್‌ನಲ್ಲಿ 20 ಸಾವಿರ ಉದ್ಯೋಗ ಸೃಷ್ಟಿಸಿದೆಯಂತೆ! 100 ದಶಲಕ್ಷ ಪೌಂಡುಗಳ ಕಾಂಟ್ರಾಕ್ಟ್ ಬ್ರಿಟಿಷ್ ಗ್ಲಾಸ್ ಕಂಪನಿಗೆ, 140 ದಶಲಕ್ಷ ಪೌಂಡುಗಳ ಕಾಂಟ್ರಾಕ್ಟ್ (ವಿದ್ಯುತ್ ಟ್ರಾನ್ಸ್‌ಮಿಶನ್) ಜಿ.ಇ.ಸಿ.- ಅಲ್ಸ್‌ಥೋಮ್‌ಗೆ ಜಾನ್‌ಮೇಜರ್ ಕೊಡಿಸಿದ್ದಾರಂತೆ.

ಜಾನ್ ಮೇಜರ್ ಭೇಟಿ 20 ಸಾವಿರ ಉದ್ಯೋಗಗಳನ್ನು ಬ್ರಿಟನ್‌ನಲ್ಲಿ ಸೃಷ್ಟಿಸಿದ್ದಾರೆ, ಅಷ್ಟೇ ಅದಕ್ಕಿಂತಲೂ ಹೆಚ್ಚಿನ ಉದ್ಯೋಗಗಳನ್ನು ಭಾರತದಲ್ಲಿ ಕಡಿಮೆ ಮಾಡದೆ ಎಂದು ತೆಗೆದುಕೊಳ್ಳಬಹುದೇ ?!



ಶರತ್ಚಂದ್ರ

ಕಾಬೂಲ್‌ನಲ್ಲಿ ರಾಕೆಟ್ ಸಮರ

ಆಫ್‌ಘಾನಿಸ್ತಾನದ ರಾಜಕೀಯ ಬಿಕ್ಕಟ್ಟು ಇನ್ನೂ ಪರಿಹಾರವಾಗಿಲ್ಲ. ಸರ್ಕಾರ ಮತ್ತು ಹೆಕ್‌ಮತ್‌ಯಾರ್ ಗೆರಿಲ್ಲಾ ಪಡೆಗಳ ನಡುವಣ ಸಮರ ಕಳೆದ ಎರಡುವಾರಗಳಲ್ಲಿ ತೀವ್ರವಾಗಿದೆ. ತೀವ್ರ ರಾಕೆಟ್ ಸಮರ ನಡೆಸಲಾಯಿತು. ಕಾಬೂಲ್‌ನ ಹಲವು ಕಡೆ 118 ರಾಕೆಟ್‌ಗಳು ಬಿದ್ದು ಭಾರಿ ಸಾವು ನೋವು ಉಂಟುಮಾಡಿದೆ. 28 ಸಾವು, 65 ಗಾಯಾಳುಗಳ ಬಗ್ಗೆ ವರದಿ ಬಂದಿವೆ. ಕಾಬೂಲ್‌ನ ಪರಿಸ್ಥಿತಿ ಎಷ್ಟು ಗಂಭೀರವಾಗಿದೆಯೆಂದರೆ ಭಾರತವನ್ನು ರಾಯಭಾರ ಕಛೇರಿಯ ಸಿಬ್ಬಂದಿ ಸದಸ್ಯ ತಾತ್ಕಾಲಿಕವಾಗಿ ಕಡಿತಮಾಡುವ ನಿರ್ಧಾರಮಾಡಿದೆ.

ಪಂಚಾಯತ್ ಚುನಾವಣೆಗಳು : ಸಿಪಿಐ(ಎಂ)ಗೆ ಅದ್ಭುತ ವಿಜಯ



ಪ್ರತ್ಯೇಕವಾದಿ ಭಯೋತ್ಪಾದಕರಿಂದ ಹಿಂಸೆಯ ತಾಣವಾಗಿದ್ದ ಪಂಜಾಬ್ ಮತ್ತೆ ಶಾಂತಿಯ ಹಾದಿಯನ್ನು ಹಿಡಿದಿದೆ. ಇತ್ತೀಚೆಗೆ 3 ಹಂತಗಳಲ್ಲಿ ಪಂಚಾಯತ್ ಚುನಾವಣೆಗಳು ರಾಜ್ಯಾದ್ಯಂತ ಶಾಂತಿಯುತವಾಗಿ ನಡೆದವು.

ಚುನಾವಣೆಗಳಲ್ಲಿ ಅತ್ಯುತ್ಸಾಹದಿಂದ ಹಾಗೂ ದೊಡ್ಡ ಪ್ರಮಾಣದಲ್ಲಿ ಪಾಲ್ಗೊಂಡಿದ್ದಕ್ಕಾಗಿ ಸಿಪಿಐ(ಎಂ) ಪಂಜಾಬ್ ಕಾರ್ಯದರ್ಶಿ ಮಂಡಳಿ ಜನರನ್ನು ಅಭಿನಂದಿಸಿದೆ. ಚುನಾವಣೆಗಳಲ್ಲಿ ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳ ಸರಪಂಚರು ಮತ್ತು ಪಂಚರು ಕೂಡಾ ಆಯ್ಕೆಯಾಗಿರುವ ಬಗ್ಗೆ ಕಾರ್ಯದರ್ಶಿ ಮಂಡಳಿ ತೃಪ್ತಿ ವ್ಯಕ್ತಪಡಿಸಿದೆ. ಸಿಪಿಐ(ಎಂ) ಹಾಗೂ ಇತರ ಎಡಪಕ್ಷಗಳ ಸರಪಂಚರು ಹಾಗೂ ಪಂಚರ ಸಂಖ್ಯೆ ಕಳೆದ ಬಾರಿಗಿಂತ ಹೆಚ್ಚಾಗಿರುವುದು ಗಮನಾರ್ಹವಾಗಿದೆ. ಸಿಪಿಐ(ಎಂ) ಹಾಗೂ ಸಿಪಿಐ ಗೆದ್ದ ಸ್ಥಾನಗಳ ಸಂಖ್ಯೆ ಸುಮಾರು ಮೂರು ಪಟ್ಟು ಹೆಚ್ಚಿದೆ.

ಕಳೆದ ಒಂದು ದಶಕದಲ್ಲಿ ಇದು ಮೊದಲ ಪಂಚಾಯತ್ ಚುನಾವಣೆಯಾಗಿದೆ.

ಅಕಾಲಿಗಳಿಗೆ ಪಾಠ

ಖಲಿಸ್ತಾನ ಭಯೋತ್ಪಾದಕರ ಕುರಿತು ಅಕಾಲಿಗಳು ತಳೆದ ಧೋರಣೆಗಳಿಂದಾಗಿ ಅವರ ಶಕ್ತಿಯೇ ದುರ್ಬಲವಾಗಿದೆ. ಇದು ಅವರಿಗೆ ಒಂದು ಪಾಠವಾಗಬೇಕು ಎಂದು ಪಂಚಾಯತ್ ಚುನಾವಣೆಗಳಲ್ಲಿ ಅಕಾಲಿಗಳ 'ಸಾಧನೆ' ಬಗ್ಗೆ ಪ್ರತಿಕ್ರಿಯಿಸಿರುವ ಸಿಪಿಐ(ಎಂ) ಹೇಳಿದೆ.

ನಿರ್ಬಂಧಗಳಿಂದ ಜಗ್ಗೆವು ನಾವು...

ಅಧಿಕಾರಿಗಳು ಹೇರಿರುವ ಹಲವಾರು ಕಠಿಣ ನಿರ್ಬಂಧಗಳು ಹಾಗೂ ಸಿಪಿಐ(ಎಂ) ಕಾರ್ಯಕರ್ತರ ಮೇಲೆ ವಸ್ತುಶಃನಿಷೇಧ ಇದ್ದರೂ ಅಸ್ಸಾಮ್‌ನಲ್ಲಿ ಕೋಮುವಾದ ವಿರೋಧಿ ಆಂದೋಳನವನ್ನು ಉತ್ಸಾಹದಿಂದ ನಡೆಸಲಾಗುತ್ತಿದೆ. ಜನವರಿ 26 ರಂದು ರಾಜ್ಯಾದ್ಯಂತ 'ರಾಷ್ಟ್ರೀಯ ಏಕತಾ' ದಿನವನ್ನು ಆಚರಿಸಲಾಯಿತು. 30 ರಂದು ಪ್ರತಿಜ್ಞೆ ಸ್ವೀಕಾರ ಸಮಾರಂಭ ನಡೆಯಿತು. ಅದರ ಮುನ್ನ ದಿನ ಗುವಾಹಟಿಯಲ್ಲಿನ ಸೋನಾರಾಮ್ ಹೈಸ್ಕೂಲ್ ಮೈದಾನದಲ್ಲಿ ರಾಜ್ಯಮಟ್ಟದ ಪರಿಣಾಮಕಾರಿಯಾದ ಕೋಮುವಾದ ವಿರೋಧಿ ರ್‍ಯಾಲಿಯನ್ನು ನಡೆಸಲಾಯಿತು.

ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯ ಬಿನಯ ಕೃಷ್ಣ ಚೌಧರಿ ಸಹಿತ ವಿವಿಧ ಪಕ್ಷಗಳ ಹಾಗೂ ಸಂಘಟನೆಗಳ ನಾಯಕರು ರ್‍ಯಾಲಿಯಲ್ಲಿ ಮಾತನಾಡಿದರು.

ಗಲಭೆಪೀಡಿತ ಪ್ರದೇಶಗಳಿಗೆ ಸುರ್ಜಿತ್ ಭೇಟಿ

ಜನವರಿ 27 ರಂದು ಹಳೆ ದೆಹಲಿಯಲ್ಲಿ ಕೆಲವು ಪ್ರದೇಶಗಳಲ್ಲಿ ಹಿಂಸೆ ಮತ್ತೆ ಭುಗಿಲೆದ್ದಿತ್ತು. ಅದರಲ್ಲಿ ಇಬ್ಬರು ಮೃತಪಟ್ಟಿದ್ದರು.

ಇನ್ನೂ ಕರ್ಫ್ಯೂ ಜಾರಿಯಲ್ಲಿರುವಾಗಲೇ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರಿಕಿಷನ್ ಸಿಂಗ್ ಸುರ್ಜೀತ್ ಜ. 30 ರಂದು ಗಲಭೆ ಪೀಡಿತ ಪ್ರದೇಶಗಳಿಗೆ ತೆರಳಿ ನೊಂದ ಜನರೊಂದಿಗೆ ಮಾತುಕತೆ ನಡೆಸಿದರು. ಸುರ್ಜೀತ್ ಹಿಂಸಾಚಾರ ನಡೆದ ಬೆನ್ನಲ್ಲೆ ಆ ಪ್ರದೇಶಗಳಿಗೆ ಭೇಟಿ ಕೊಟ್ಟ ಪ್ರಥಮ ರಾಷ್ಟ್ರೀಯ ನಾಯಕರಾಗಿದ್ದಾರೆ. ಅವರ ಜತೆ ಪಕ್ಷದ ದೆಹಲಿ ರಾಜ್ಯ ಕಾರ್ಯದರ್ಶಿ ಜೋಗಿಂದರ್ ಶರ್ಮಾ ಮತ್ತು ಇತರ ಸ್ಥಳೀಯ ನಾಯಕರು ಇದ್ದರು.

ಈ ಮುಖಂಡರುಗಳಿದ್ದ ನಿಯೋಗ ಹಳೆದೆಹಲಿಯ ಓಣಿ ಓಣಿಗಳಲ್ಲಿ ಸಂಚರಿಸಿ ಹಾನಿಗೊಂಡ ದೇವಾಲಯಕ್ಕೆ ಭೇಟಿ ನೀಡಿತು, ಗಾಯಾಳುಗಳೊಂದಿಗೆ ಚರ್ಚಿಸಿತು. ಗಾಯಾಳುಗಳೊಂದಿಗೆ ಚರ್ಚಿಸಿತು. ಹಾಗೂ ಮೃತಪಟ್ಟ ಒಬ್ಬನ ಕುಟುಂಬದ ಸದಸ್ಯರನ್ನು ಭೇಟಿಯಾಯಿತು. ಸೌಹಾರ್ದದಿಂದ ಜೀವನ ನಡೆಸುವ ಪರಂಪರೆಯುಳ್ಳ ಹಳೆ ನಗರದ ಜನರು, ಗಾಳಿ ಸುದ್ದಿಗಳಿಗೆ ಕಿವಿಗೊಡಬಾರದು ಎಂದು ಸುರ್ಜೀತ್ ಮನವಿ ಮಾಡಿದರು. ಹೊರಗಿನವರ ಪ್ರಚೋದನೆ ಒಳಗಾಗದೆ ಭಾತೃತ್ವ ಹಾಗೂ ಸೌಹಾರ್ದತೆಯನ್ನು ಮುಂದುವರಿಸಿಕೊಂಡು ಬರಬೇಕು ಎಂದು ಸೂಚಿಸಿದರು.

27 ರಂದು ಸಂಭವಿಸಿದ ಹಿಂಸಾಚಾರ ಪೂರ್ವ ಯೋಜಿತವಾಗಿತ್ತು ಆಕ್ರಮಣ, ದೊಂಬಿ ನಡೆಸಿದವರು ಸ್ಥಳೀಯರಲ್ಲ, ಹೊರಗಿನವರು ಎಂದು ಸಂತ್ರಸ್ತ ಜನರು ಸಿಪಿಐ(ಎಂ) ನಾಯಕರಿಗೆ ತಿಳಿಸಿದರು.

ಗಲಭೆ ವೇಳೆ ಪೋಲೀಸರು ನಡೆಸಿದ ಗೋಲೀಬಾರಿನಲ್ಲಿ ಮಹಮದ್ ಷಹದ್‌ಖಾನ್ ಎಂಬ 21 ವರ್ಷ ಪ್ರಾಯದ ತರುಣ ಮೃತಪಟ್ಟನು. ಆತ ತನ್ನ ಅಂಗಡಿಯನ್ನು ಮುಚ್ಚಿ ಮನೆಗೆ ಹಿಂದಿರುಗುತ್ತಿದ್ದಾಗ ಪೋಲೀಸರ ಗುಂಡಿಗೆ ಬಲಿಯಾದ. ಹವೇಲಿ ಅಜಮ್‌ಕಾನ್ ಪ್ರದೇಶದಲ್ಲಿ ಈ ಘಟನೆ ನಡೆಯಿತು. ಷಹದ್ ಖಾನ್‌ನ ದುಃಖತಪ್ತ ತಾಯಿಯನ್ನು ಮತ್ತಿತರರು ಭೇಟಿಯಾಗಿ ಸಮಾಧಾನ ಪಡಿಸಿದರು.

ಸಂತ್ರಸ್ತ ಜನರ ಮನೆಗೆ ಸಚಿವರಾಗಲಿ ಅಧಿಕಾರಿಗಳಾಗಲೀ ಬಂದು ಸಹಾನುಭೂತಿ ವ್ಯಕ್ತಪಡಿಸಿಲ್ಲ ಎಂದು ಈ ಪ್ರದೇಶದ ಜನರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಒತ್ತೆಯಾಳುಗಳ ಬಿಡುಗಡೆ

ಆಂಧ್ರಪ್ರದೇಶದಲ್ಲಿ ಜನವರಿ 30 ರಂದು ಆರಂಭವಾದ ಅಪಹರಣ ಪ್ರಕರಣ ಕೊನೆಯ ಹಂತವನ್ನು ತಲುಪಿದೆ. ಪೀಪಲ್ಸ್‌ವಾರ್ ಗ್ರೂಪ್ ನಕ್ಸಲೀಯರು ತಮ್ಮ ವಶದಲ್ಲಿದ್ದ ಕಾಂಗ್ರೆ ಶಾಸಕ ಬಾಲರಾಜು ಸಹಿತ ಐವರು ಅಪಹೃತರ ಪೈಕಿ ನಾಲ್ವರನ್ನು ಫೆಬ್ರವರಿ 11 ರಂದು ಮುಂಜಾನೆ 3.30 ಕ್ಕೆ ಬಿಡುಗಡೆಗೊಳಿಸಿದರು. ಕೊಯ್ಯೂರು ಅರಣ್ಯ ಪ್ರದೇಶದಲ್ಲಿ ಈ ಅಪಹೃತರು ಉಗ್ರಗಾಮಿಗಳಿಂದ ಮುಕ್ತರಾದರು.

ಈ ಮಧ್ಯೆ ನಕ್ಸಲೀಯ ನಾಯಕ ಕ್ರಾಂತಿ ರಣದೇವನನ್ನು ವಾರಂಗಲ್‌ನಿಂದ ವಿಶಾಖಪಟ್ಟಣಂ ಜೈಲಿಗೆ ಸ್ಥಳಾಂತರಿಸಲಾಗಿದೆ. ರಣದೇವ್ ಬಿಡುಗಡೆ ನಕ್ಸಲೀಯರ ಪ್ರಮುಖ ಬೇಡಿಕೆಯಾಗಿದೆ. ಒಂದು ನ್ಯಾಯಾಲಯ ರಣದೇವ್ ಬಿಡುಗಡೆಗೆ ಜಾಮೀನು ನೀಡಿದೆ ಆದರೆ ಆಂಧ್ರದ ಇನ್ನೂ ಒಂದೆರೆಡು ನ್ಯಾಯಾಲಯಗಳಲ್ಲಿ ಬಾಕಿಯಿರುವ ಹಾಗೂ ಮಹಾರಾಷ್ಟ್ರದ ಚಂದ್ರಾಪುರ ನ್ಯಾಯಾಲಯದಲ್ಲಿ ಸಲ್ಲಿಸಲಾಗಿರುವ ಜಾಮೀನು ಅರ್ಜಿ ಇತ್ಯರ್ಥವಾಗುವವರೆಗೆ ರಣದೇವ್ ಬಿಡುಗಡೆ ಅಸಂಭವವಾಗಿದೆ.

ಆಂಧ್ರಪ್ರದೇಶದಲ್ಲಿ ಮಾನವ ಸರಪಳಿ

ಕೋಮು ಸೌಹಾರ್ದ ಸ್ಥಾಪನೆಗಾಗಿ ಗಣರಾಜ್ಯ ದಿನದಂದು ಆಂಧ್ರಪ್ರದೇಶ ರಾಜಧಾನಿ ಹೈದರಾಬಾದ್‌ನಲ್ಲಿ ಡಿ.ವೈ.ಎಫ್.ಐ ನಗರ ಸಮಿತಿ ಮಾನವ ಸರಪಳಿ ಕಾರ್ಯಕ್ರಮವನ್ನು ಆಯೋಜಿಸಿತ್ತು. ಹತ್ತು ಸಾವಿರಕ್ಕೂ ಹೆಚ್ಚು ಜನರು ಇದರಲ್ಲಿ ಪಾಲ್ಗೊಂಡಿದ್ದರು.

ಸಂಕಿರಣ

ಹರ್ಯಾಣಾದ ರೋಹ್ಟಕ್‌ನಲ್ಲಿ ರಾಷ್ಟ್ರೀಯ ಏಕತಾ ಆಂದೋಳನದ ಸ್ಥಳೀಯ ಸಮಿತಿ ವಿಚಾರ ಸಂಕಿರಣವನ್ನು ವ್ಯವಸ್ಥೆಗೊಳಿಸಿತ್ತು. ಸಂಕಿರಣದಲ್ಲಿ ಭಾಗವಹಿಸಿದವರು ಬಿ.ಜೆ.ಪಿ. ಮತ್ತು ಕೋಮುವಾದಿ ಶಕ್ತಿಗಳ ನಿಜವಾದ ಮುಖದ ಬಗ್ಗೆ ಹಾಗೂ ರಾಜಕೀಯ ಅಧಿಕಾರ ಗಳಿಕೆಗಾಗಿ ಈ ಶಕ್ತಿಗಳು ಧಾರ್ಮಿಕ ಮತ್ತು ಸಾಂಸ್ಕೃತಿಕ ಚಿಹ್ನೆಗಳನ್ನು ಬಳಸಿಕೊಳ್ಳುವ ಅಪಾಯಗಳ ಕುರಿತು ಚರ್ಚೆ ನಡೆಸಿದರು.



ಗಲಭೆ ಸಂತ್ರಸ್ತರನ್ನು ಸಂತೈಸುತ್ತಿರುವ ಸುರ್ಜಿತ್

KRNM/BGS - 405 MAG[S] PRB DECR 319 - 78/79

ಎಸ್‌ಎಫ್‌ಐ ಆಶ್ರಯದಲ್ಲಿ ಪ್ರಬಂಧ ಸ್ಪರ್ಧೆ

ಹರಪನಹಳ್ಳಿ : ಎಸ್‌ಎಫ್‌ಐ ಹರಪನಹಳ್ಳಿ ತಾಲೂಕು ಸಮಿತಿಯು ಗಣರಾಜ್ಯೋತ್ಸವ ದಿನಾಚರಣೆಯ ಅಂಗವಾಗಿ ಹೈಸ್ಕೂಲ್ ಮತ್ತು ಕಾಲೇಜು ಮಟ್ಟದ ಪ್ರಬಂಧ ಸ್ಪರ್ಧೆಗಳನ್ನು ನಡೆಸಿತು. ವಿಷಯ ಅನುಕ್ರಮವಾಗಿ ರಾಷ್ಟ್ರೀಯ ಭಾವೈಕ್ಯತೆಯಲ್ಲಿ ವಿದ್ಯಾರ್ಥಿಗಳ ಪಾತ್ರ, ರಾಷ್ಟ್ರದ ಅಭಿವೃದ್ಧಿಯಲ್ಲಿ ಯುವಕರ ಪಾತ್ರ ಎಂದಾಗಿತ್ತು. ಈ ಸ್ಪರ್ಧೆಯಲ್ಲಿ 70ಕ್ಕೂ ಹೆಚ್ಚು ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ಪ್ರಬಂಧ ಸ್ಪರ್ಧೆಯ ನಂತರ ಈ ಮೇಲ್ಕಂಡ ವಿಷಯದ ಬಗ್ಗೆ ಸಮಿತಿಯು ಒಂದು ಸಂಕಿರಣ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಸಭೆಯ ಅಧ್ಯಕ್ಷತೆಯನ್ನು ಎಸ್. ಬಸವರಾಜ್(ಪ್ರಾಂಶುಪಾಲರು, ಎಸ್‌ಯುಜೆಎಂ ಕಾಲೇಜ್) ವಹಿಸಿದ್ದರು. ಮುಖ್ಯ ಅತಿಥಿಯಾಗಿದ್ದ ಪ್ರೊಫೆಸರ್ ಎಸ್.ಎಸ್.ಹಿರೇಮಠ(ಎಡಿಜಿ ಕಾಲೇಜ್ ಕನ್ನಡ ಉಪನ್ಯಾಸಕರು), ಕೋಮುವಾದಿ ಸಂಘಟನೆಗಳನ್ನು ನಿಷೇಧ ಮಾಡಿರುವುದನ್ನು ಸ್ವಾಗತಿಸುತ್ತಾ ನಮ್ಮ ಜೀವನದಲ್ಲಿ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕೆಂದು ಹೇಳಿದರು. ಉಪನ್ಯಾಸಕ ಎಂ.ಮರುಳಸಿದ್ದಯ್ಯ, ಪಿ.ಬಿ. ಶಿವಣ್ಣ ಎಸ್‌ಯುಜೆಎಂ ಕಾಲೇಜ್ ಶಿಕ್ಷಣ ಉಪನ್ಯಾಸಕರು ಮತ್ತು ಸರಕಾರಿ ಪದವಿ ಪೂರ್ವ ಕಾಲೇಜಿನ ಇತಿಹಾಸ ಉಪನ್ಯಾಸಕರಾದ ಬಿ.ಬಸವಂತಪ್ಪ ಅವರುಗಳೂ ಮಾತನಾಡಿದರು.

ಕುಮಾರಿ ಟಿ.ಮಂಜುಳಾ ಆಗಮಿಸಿದ ಅತಿಥಿಗಳಿಗೆ ನೆನಪಿನ ಕಾಣಿಕೆಯನ್ನು ವಿತರಿಸಿದರು. ಪ್ರಾರ್ಥನೆ ಗೀತೆಯನ್ನು ಕುಮಾರಿ ಪಿ.ಎಂ.ಶಶಿಕಲಾ ಹಾಡಿದರು. ಕೆ. ಮೊಹಮ್ಮದ್ ಆಲಿ ಸ್ವಾಗತಿಸಿದರು. ಹನುಮಂತನಾಯ್ಕ ಧನ್ಯವಾದ ಅರ್ಪಿಸಿದರು.

ಜನವರಿ 26ರಂದು ನಡೆದ ಬಹಿರಂಗ ಸಭೆಯಲ್ಲಿ ಕಾಲೇಜ್ ಪ್ರಾಚಾರ್ಯರಾದ ಎಸ್. ಬಸವರಾಜ ವಿಜೇತ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪ್ರಶಸ್ತಿ ಪತ್ರ ಹಾಗೂ ಬಹುಮಾನ ವಿತರಿಸಿದರು.

ಪಡಿತರ ಚೀಟಿಗಾಗಿ ಮಹಿಳೆಯರ ಚಳುವಳಿ

ಪರಹತಾಬಾದ್(ಬಿಜಾಪುರ) : ಪರಹತಾಬಾದ್ ಗ್ರಾಮದ ಜನವಾದಿ ಮಹಿಳಾ ಸಂಘಟನೆಯ ಮಹಾದೇವಿ ಎಂ. ಸಜ್ಜನರ ನೇತೃತ್ವದಲ್ಲಿ ನೂರಾರು ಜನ ಮಹಿಳೆಯರು ಸ್ಟೇಷನ್ ಬಜಾರದಿಂದ ಜಿಲ್ಲಾಧಿಕಾರಿಗಳ ಕಚೇರಿವರೆಗೆ ಮೆರವಣಿಗೆ ನಡೆಸಿ ಒಂದು ಮನವಿ ಪತ್ರ ಅರ್ಪಿಸಿದರು.

ಮನವಿ ಪತ್ರದಲ್ಲಿ ವಿಶೇಷವಾಗಿ ಬಡ ಕೃಷಿ ಕಾರ್ಮಿಕರ ಮಹಿಳೆಯರಿಗೆ ಹಸಿರು ಕಾರ್ಡ್ ಕೊಡುವ ಬಗ್ಗೆ ಒತ್ತಾಯಿಸಲಾಗಿತ್ತು. ಕೂಡಲೇ ತಹಸೀಲ್ದಾರರಿಗೆ ತಿಳಿಸಿ ಹಸಿರು ಕಾರ್ಡ್ ಕೊಡುವ ವ್ಯವಸ್ಥೆ ಮಾಡುತ್ತೇವೆಂದು ಆಶ್ವಾಸನೆ ನೀಡಿ ಜಿಲ್ಲಾಧಿಕಾರಿಯವರು ಮಹಿಳೆಯರನ್ನುದ್ದೇಶಿಸಿ ಮಾತನಾಡಿದರು. ಅನಂತರ ಸಿಪಿಐ(ಎಂ) ನಾಯಕ ಎಸ್.ಕೆ. ಉಪಾಧ್ಯಾಯ ಮಾತನಾಡಿದರು. ಒಂದು ವೇಳೆ ಅಧಿಕಾರಿಗಳು ಸಮಸ್ಯೆಯನ್ನು ಬಗೆಹರಿಸದಿದ್ದರೆ ಮತ್ತೆ ಮತ್ತೆ ಹೋರಾಟಕ್ಕೆ ಸಿದ್ಧರಾಗಬೇಕು ಎಂದು ಅವರು ಕರೆ ನೀಡಿದರು.

ಮಹಾದೇವಿ ಎಂ. ಸಜ್ಜನವರು ಮಾತನಾಡಿ ಹಸಿರುಕಾರ್ಡ್ ಮತ್ತು ಸಹಕಾರ ಸಂಘದ ಸೊಸೈಟಿಯ ಕಾಳಸಂತೆ ಹಾಗೂ ಅವ್ಯವಹಾರಗಳನ್ನು ತಡೆಯಬೇಕೆಂದು ಆಗ್ರಹಿಸಿದರು. ಹಸಿರು ಕಾರ್ಡ್ ಪಡೆಯಲು ಅರ್ಹರಾದ 140 ಜನ ಮಹಿಳೆಯರ ಪಟ್ಟಿಯನ್ನು ಅಧಿಕಾರಿಗಳಿಗೆ ಒಪ್ಪಿಸಲಾಗಿದೆ.

ಆನಂತರ ತಹಸೀಲ್ದಾರರನ್ನು ಒಂದು ನಿಯೋಗ ಭೇಟಿಯಾದಾಗ 1ನೇ ... ಪರಿ ನಂತರ ಸಮಸ್ಯೆ ಬಗೆಹರಿಸುತ್ತೇವೆಂದು ಆಶ್ವಾಸನೆ ನೀಡಿದರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಘಟಕದ ಕಾರ್ಯದರ್ಶಿ ಕಲ್ಲಪ್ಪಾ ಕಿರಣಗಿ, ಈ ರೀತಿ ಅಧಿಕಾರಿಗಳು ಆಶ್ವಾಸನೆ ನೀಡಿದ್ದಾರೆ. ಆದರೆ ಈ ಸಲ ನಿಮ್ಮ ಕೈಗೆ ಹಸಿರು ಕಾರ್ಡ್ 8ನೇ ತಾರೀಖಿನ ಒಳಗಾಗಿ ಬರದೇ ಇದ್ದಲ್ಲಿ ಮತ್ತೆ ಚಳುವಳಿಗೆ ಇಳಿಯಬೇಕೆಂದು ಕರೆ ಕೊಟ್ಟರು.

ಕೋಮುವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸಲು ವಿಮಾ ನೌಕರರಿಗೆ ಕರೆ

ಮಂಗಳೂರು : ಕೋಮುವಾದಿ ಶಕ್ತಿಗಳ ಬೆಳವಣಿಗೆಯು ದೇಶದಪ್ರಜಾಪ್ರಭುತ್ವ, ಜಾತ್ಯಾತೀತತೆ ಮತ್ತು ಸಮಗ್ರತೆಗೆ ಮಾರಕವಾಗಿದೆ. ಸಂಘಟಿತ ಕಾರ್ಮಿಕರ ಐಕ್ಯತೆಯನ್ನು ಮುರಿಯಲು ಕೋಮುವಾದಿ ಶಕ್ತಿಗಳು ಪ್ರಯತ್ನಿಸಿ, ಆರ್ಥಿಕ ಸಮಸ್ಯೆಗಳ ವಿರುದ್ಧದ ಹೋರಾಟದ ದಿಕ್ಕನ್ನು ತಪ್ಪಿಸುತ್ತಿವೆ. ಈ ನಿಟ್ಟಿನಲ್ಲಿ ಕೋಮುವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸುವುದು ದುಡಿಯುವ ಜನತೆಯ ಇಂದಿನ ಚಾರಿತ್ರಿಕ ಅವಶ್ಯಕತೆಯಾಗಿದೆ ಎಂದು ವಿಮಾ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಪಿ.ವಿಶ್ವನಾಥ ರೈ ಅಭಿಪ್ರಾಯಪಟ್ಟಿದ್ದಾರೆ.

ಅವರು ಇತ್ತೀಚೆಗೆ ವಿಮಾ ನೌಕರರ ಸಂಘದ ಮಂಗಳೂರು ಘಟಕದ ವಾರ್ಷಿಕೋತ್ಸವವನ್ನುದ್ದೇಶಿಸಿ ಮಾತನಾಡುತ್ತಿದ್ದರು. ವಿಮಾ ನೌಕರರ ಸಂಘದ ಅಧ್ಯಕ್ಷ ಬಿ.ಆರ್.ವಿ.ಕಾಮತ್ ಮಾತನಾಡಿ, ಕೇಂದ್ರ ಸರಕಾರದ ಜನವಿರೋಧಿ, ಆರ್ಥಿಕ ಕೈಗಾರಿಕಾ ನೀತಿಗಳ ವಿರುದ್ಧ ಮುಂಬರುವ ದಿನಗಳಲ್ಲಿ ದೊಡ್ಡ ರೀತಿಯ ಹೋರಾಟಗಳನ್ನು ನಡೆಸಲು ಸಜ್ಜಾಗಿರಬೇಕೆಂದು ಹೇಳಿದರು.

ಸಭೆಯ ಅಧ್ಯಕ್ಷತೆಯನ್ನು ಮಂಗಳೂರು ಘಟಕದ ಅಧ್ಯಕ್ಷ ಬಿ.ಮಾಧವ ವಹಿಸಿದ್ದರು. ಪ್ರಾದೇಶಿಕ ಕಾರ್ಯದರ್ಶಿ ನಾಗೇಶ್‌ಕುಮಾರ್ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ಮಂಗಳೂರು ಘಟಕದ ಕಾರ್ಯದರ್ಶಿ ಯು.ಪಾಂಡು ವರದಿಯನ್ನು ಮಂಡಿಸಿದರು.

ಮುಂದಿನ ಸಾಲಿಗಾಗಿ ಮಂಗಳೂರಿನಲ್ಲಿ ನಾಲ್ಕು ಘಟಕಗಳನ್ನು ರಚಿಸಲಾಯಿತು. ಮಂಗಳೂರು 1 ಘಟಕದ ಅಧ್ಯಕ್ಷರಾಗಿ ಯು. ರಾಜಾರಾಂ, ಕಾರ್ಯದರ್ಶಿ ಕೆ.ಎಸ್. ಶಶಿಧರ್, ಜತೆ ಕಾರ್ಯದರ್ಶಿ ಕೃಷ್ಣಪ್ಪ ಕೊಂಚಾಡಿ, ಕೋಶಾಧಿಕಾರಿ ಗಿರಿಧರ ನಾಯಕ್, ಮಂಗಳೂರು 2 ಘಟಕ, ಅಧ್ಯಕ್ಷ ಬಿ.ಮಾಧವ, ಕಾರ್ಯದರ್ಶಿ ಜಯರಾಂ ನೆಲ್ಲಿತ್ತಾಯ, ಜತೆ ಕಾರ್ಯದರ್ಶಿ ಡಿ.ದಿವಾಕರ್, ಕೋಶಾಧಿಕಾರಿ ಅನಂತ ಪದ್ಮನಾಭ, ಮಂಗಳೂರು 3 ಘಟಕ ಅಧ್ಯಕ್ಷ ಯು. ಪಾಂಡು, ಕಾರ್ಯದರ್ಶಿ ರಾಘವೇಂದ್ರರಾವ್, ಜತೆ ಕಾರ್ಯದರ್ಶಿ ಡೆಂಬೆಲ್ ರಾವ್ರೋಸ್, ಕೋಶಾಧಿಕಾರಿ ರೋಹಿಣಿ, ಮಂಗಳೂರು 4 ಘಟಕ ಅಧ್ಯಕ್ಷ ಎಲ್.ಬಿ. ಪೂಜಾರಿ, ಕಾರ್ಯದರ್ಶಿ ಹರಿಶೆಟ್ಟಿಗಾರ್, ಕೋಶಾಧಿಕಾರಿ ವಸಂತ್‌ಕುಮಾರ್.

ಸಭೆಯ ಆರಂಭದಲ್ಲಿ ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಕೆ.ಎಸ್. ಶಶಿಧರ್ ವಂದಿಸಿದರು.

ಸಂಘಟಿತರಾಗಿ ಸಮಸ್ಯೆಗಳನ್ನು ಎದುರಿಸಲು ಕರೆ

ಪ್ರತಿಯೊಬ್ಬ ಕಾರ್ಮಿಕರಿಗೂ ಸುಖಜೀವನಕ್ಕೆ ಸಿಗಬೇಕಾದ ವೇತನ ಕೊಡಬೇಕು ಎಂದು ನಮ್ಮ ಸಂವಿಧಾನದಲ್ಲೇ ಇದೆ. ಮನುಷ್ಯ ಬದುಕಬೇಕಾದರೆ ಊಟ ಮಾಡಬೇಕು, ಈ ಊಟಕ್ಕೆ ಬೇಕಾದ ಸಾಮಗ್ರಿಗಳು, ಬಟ್ಟೆ, ವಾಸಕ್ಕಾಗಿ ಮನೆ - ಇದನ್ನೆಲ್ಲಾ ಒಟ್ಟು ಸೇರಿಸಿ ಕನಿಷ್ಠ ಕೂಲಿ ನಿರ್ಣಯವಾಗಬೇಕು. ಇದಕ್ಕಾಗಿ ದೆಹಲಿಯಲ್ಲಿ ನಾಲ್ಕು ವರ್ಷಗಳ ಹಿಂದೆ 14 ಲಕ್ಷ ಕಾರ್ಮಿಕರು ಹೋರಾಟ ನಡೆಸಿ, ರೂ. 1,300 ಕನಿಷ್ಠ ಕೂಲಿ ಪಡೆಯುವುದಕ್ಕೆ ಸಾಧ್ಯವಾಯಿತು. 1984ರಲ್ಲಿ ಪ್ರೆಸ್ ಕಾರ್ಮಿಕರ ಕನಿಷ್ಠ ವೇತನ ಪರಿಷ್ಕರಿಸಿ ಜಾರಿಗೆ ಬಂತು. ಇದು ಎರಡು ವರ್ಷಗಳಿಗೊಮ್ಮೆ ಬದಲಾಗಬೇಕು. ಆದರೆ ಸರಕಾರ ಇದನ್ನು ಪುನರ್ ಪರಿಷ್ಕರಿಸಿ ಜ್ಯಾರಿ ಮಾಡುವುದಿಲ್ಲ. ಕಾರ್ಮಿಕರ ಒಂದೇ ಶಕ್ತಿ ದುಡಿಯುವ ಶಕ್ತಿ. ಅದು ನಮ್ಮ ಚಾಲಕ ಶಕ್ತಿ. ನಮ್ಮ ದುಡಿಮೆಗೆ ಮಾತ್ರ ಸಂಬಳ. ಆದರೆ ಅದೂ ದುಡಿಮೆಗೆ ಸರಿಯಾಗಿ ಸಿಗುವುದಿಲ್ಲ ಮತ್ತು ಮಾಲಕರ ದಬ್ಬಾಳಿಕೆಗಳನ್ನೂ ಸಹಿಸಿ ಕೆಲಸ ಮಾಡುವ ಸ್ಥಿತಿ ಉಂಟಾಗಿದೆ. ಇದನ್ನೆಲ್ಲಾ ಎದುರಿಸಬೇಕಾದರೆ ಸಂಘಟಿತರಾಗಬೇಕು ಎಂದು ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ. ನಾಯರ್ ಹೇಳಿದ್ದಾರೆ. ಜನವರಿ 26ರಂದು ಉಡುಪಿ ಕಡಿಯಾಳಿನಲ್ಲಿ ನಡೆದ ಪ್ರೆಸ್ ಕಾರ್ಮಿಕರ ಮಹಾಸಭೆಯನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು.

ಇಂದು ರಾಷ್ಟ್ರ ಗೊಂದಲಮಯ ಪರಿಸ್ಥಿತಿಯಲ್ಲಿದೆ. ಕೇಂದ್ರ ಸರಕಾರದ ತಪ್ಪು ಆರ್ಥಿಕ ನೀತಿಗಳಿಂದ, ಕೈಗಾರಿಕಾ ನೀತಿಗಳಿಂದ ನಮ್ಮ ದೇಶದ ಆರ್ಥಿಕ ಸ್ಥಿತಿ ಹದಗೆಡುತ್ತಿದೆ. ಇದರಿಂದ ಜನಸಾಮಾನ್ಯರು, ರೈತರು, ಕಾರ್ಮಿಕರು ಸಂಕಷ್ಟಕ್ಕೀಡಾಗುತ್ತಿದ್ದಾರೆ. ಇದನ್ನು ಕಾರ್ಮಿಕ ವರ್ಗ ವಿರೋಧಿಸಬೇಕು ಎಂದು ವಿ.ಜೆ.ಕೆ. ನಾಯರ್ ಪ್ರೆಸ್ ಕಾರ್ಮಿಕರಿಗೆ ಕರೆ ನೀಡಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಕಾರ್ಮಿಕ ಅಧಿಕಾರಿ ವಿನ್ಸೆಂಟ್ ಎಸ್.ಡಿಸೋಜ ಕಾರ್ಮಿಕ ಕಾನೂನಿನ ಬಗ್ಗೆ ವಿವರಣೆ ನೀಡಿದರು.

ಬಜೆಟ್ ಬರುತ್ತಿದೆ, ಎಚ್ಚರಿಕೆ!

ಪುಟ 1ರಿಂದ

ಅಂಶಗಳನ್ನು ಬಿಟ್ಟರೆ ಮೊಯಿಲಿ ಆಡಳಿತೆಯಲ್ಲಿ ಕಳೆದ ಎರಡು ತಿಂಗಳಲ್ಲಿ ಗುಣಾತ್ಮಕ ಬದಲಾವಣೆ ಕಂಡು ಬರುತ್ತಿಲ್ಲ. ಇದರ ಕುರಿತು ಕೆಲವು ಕಾಲ ವೀಕ್ಷಿಸಿದರೂ ತಪ್ಪೇನಿಲ್ಲ. ಆದರೆ ಸ್ವಲ್ಪಮಟ್ಟಿಗಾದರೂ ಮೊಯಿಲಿ ಸರಕಾರ ಎಚ್ಚರಿಕೆಯಿಂದ ಹೆಜ್ಜೆ ಇಡಬಹುದೆಂದು ಅಪೇಕ್ಷಿಸಿದವರಿಗೆ ನಿರಾಶೆ ಉಂಟಾಗಿದೆ.

ಬಸ್ ದರ ಏರಿಕೆ

ಉಕ್ಕಿನ ಬೆಲೆ ಹೆಚ್ಚಳದಿಂದಲೇ ಸಮಾಧಾನಗೊಳ್ಳದ ಕೇಂದ್ರ ಸರಕಾರ ರೈಲ್ವೇ ಪ್ರಯಾಣ ದರ ಹೆಚ್ಚಿಸುವುದರಲ್ಲಿ ಸಂಶಯವಿಲ್ಲ. ಕಲ್ಲಿದ್ದಲಿನ ಬೆಲೆಯೂ ಹೆಚ್ಚಾಗಬಹುದು.

ಆದರೆ ಮೊಯಿಲಿ ಸರಕಾರ ಎಲ್ಲವನ್ನು ಮೀರಿ ಈಗ ಬಸ್ ಪ್ರಯಾಣ ದರ ಹೆಚ್ಚಿಸಿದೆ. ಶೇ. 22ರಿಂದ 25ರಷ್ಟು ಹೆಚ್ಚಾಗಿದೆ. ಆದರೆ ಒಂದೇ ಕಂತಿನಲ್ಲಿ ಇಷ್ಟು ಹೆಚ್ಚಳ ಎಂದೂ ಕಂಡಿಲ್ಲ. ಕೆಎಸ್‌ಆರ್‌ಟಿಸಿ ಅಧಿಕಾರಿಗಳ ಹೇಳಿಕೆಯಂತೆ ಸಂಸ್ಥೆ 1991-92ರಲ್ಲಿ ರೂ. 19.09 ಕೋಟಿ, 1992-93ರಲ್ಲಿ 91.89ಕೋಟಿ ನಷ್ಟವಾಗಿದೆಯೆಂತೆ. ದರ ಹೆಚ್ಚಳವಾಗದಿದ್ದರೆ 1993-94ರಲ್ಲಿ ರೂ. 129.11 ಕೋಟಿ ನಷ್ಟ ಅನುಭವಿಸಬೇಕಾಗಿದೆಯಂತೆ.

ಭೀಮಣ್ಣ ಖಂಡ್ರೆಯವರು ಮಂತ್ರಿಯಾಗಿ ಮೊಯಿಲಿ ಸರಕಾರ ಸೇರಿ ರಸ್ತೆ ಸಾರಿಗೆಯ ಜವಾಬ್ದಾರಿ ಹೊತ್ತುಕೊಂಡಾಗ ಹೇಳಿದ ಮಾತೇನೆಂದರೆ, ಕೆಎಸ್‌ಆರ್‌ಟಿಸಿಯಲ್ಲಿ ಬಹಳಷ್ಟು ಸೋರಿಕೆ ದುರಾಡಳಿತೆ ದುಂದುವೆಚ್ಚಗಳಿಂದಾಗಿ ಸಾರಿಗೆ ಸಂಸ್ಥೆ ಬಹಳಷ್ಟು ಹಾನಿ ಎದುರಿಸಬೇಕಾಗಿದೆ. ಬಸ್ಸುಗಳು ಸಾಕಷ್ಟಿಲ್ಲದೆ ಜನ ಬಸ್ ಟಾಪಿನ ಮೇಲೆ ಸಂಚಾರ ಮಾಡಬೇಕಾಗಿದೆ. ನಾನು ಇವುಗಳನ್ನೆಲ್ಲಾ ನಿವಾರಿಸಿ ಆಡಳಿತೆ ಲಾಭದಾಯಕವಾಗಿ ನಡೆಯುವಂತೆ ಮಾಡಿ ಜನರಿಗೆ ಹೆಚ್ಚು ಸೌಲಭ್ಯ ಒದಗಿಸುತ್ತೇನೆಂದು ಹೇಳಿದ್ದರು. ಮುಖ್ಯಮಂತ್ರಿ ವೀರಪ್ಪ ಮೊಯ್ಲಿಯವರೇ ಅದೇ ಹಾಡು ಹಾಡಿದ್ದರು. ಮಾತ್ರವಲ್ಲ ಬಸ್ ಪ್ರಯಾಣ ದರ ಹೆಚ್ಚಿಸುವುದಿಲ್ಲವೆಂಬ ಆಶ್ವಾಸನೆ ನೀಡಿದ್ದರು. ಆದರೆ ಆಶ್ವಾಸನೆ ಉಳಿಯಲಿಲ್ಲ.

ಬಸ್ ದರ ಹೆಚ್ಚಳವನ್ನು ಭೀಮಣ್ಣ ಖಂಡ್ರೆಯವರೂ, ವೀರಪ್ಪ ಮೊಯಿಲಿಯವರೂ ಬಲವಾಗಿ ಸಮರ್ಥಿಸಿ ಎಂಥ ಪರಿಸ್ಥಿತಿಯಲ್ಲಿಯೂ ಅದನ್ನು ಕಡಿಮೆ ಮಾಡುವುದಿಲ್ಲವೆಂದು ಹೇಳಿದ್ದಾರೆ. ವಿಧಾನಸಭೆಯ ಪ್ರಾರಂಭಕ್ಕೆ ಒಂದು ವಾರದ ಮುಂಚೆ ಬಜೆಟ್ ಮಂಡನೆಯ 15 ದಿನಗಳ ಮುಂಚೆ ಈ ರೀತಿ ಒಂದೇ ಸಮನೆ ಹೇಳದೆ ಕೇಳದೇ ಬಸ್ ದರ ಹೆಚ್ಚಿಸಿದ್ದು ಖಂಡನೀಯ. ಆದರೆ ಕಮ್ಯುನಿಸ್ಟ್ ಪಾರ್ಟಿ ಮುಖಂಡತ್ವದ ಎಐಟಿಯುಸಿ ನೇತೃತ್ವದ ಕೆಎಸ್‌ಆರ್‌ಟಿಸಿ ವರ್ಕರ್ಸ್ ಯೂನಿಯನ್ನು ಈ ಬಸ್ ದರ ಹೆಚ್ಚಿಸಿರುವುದನ್ನು ಸ್ವಾಗತಿಸಿರುವುದು ಆಶ್ಚರ್ಯದ ಸಂಗತಿ. ಕೆಎಸ್‌ಆರ್‌ಟಿಸಿ ನೌಕರರ ಹೆಂಡರು ಮಕ್ಕಳಿಗೆ ಪುಕ್ಕಟೆ ಪ್ರಯಾಣದ ಸೌವಲತ್ತಿದೆಯೇ? ಇಲ್ಲದಿದ್ದರೆ ಬೆಲೆಯೇರಿಕೆಯ ಸಮರ್ಥನೆ ಸರಿಯೇ? ಸಮರ್ಥನೆ ಸರಿಯಲ್ಲೆಂದು ನಾವು ಹೇಳುತ್ತೇವೆ.

ಇವುಗಳು ಮಾತ್ರವಲ್ಲದೆ ಬಸ್ ದರ ಹೆಚ್ಚಿಸಿದಂತೆಯೇ, ಹಲವಾರು ಹೊಸ ಕರಗಳ ಭಾರ ಕೇಂದ್ರ ಮತ್ತು ರಾಜ್ಯ ಸರಕಾರಗಳಿಂದ ಹೇರಲ್ಪಡುತ್ತದೆ.

ದಿವಸಕ್ಕೆ ಐದೋ ಹತ್ತೋ ಗಳಿಸುವವರಿಗೂ ಎರಡು ಹೊತ್ತಿನ ಗಂಜಿಯ ಚಿಂತೆ, ಹಾಗೆಯೇ ಮಧ್ಯಮ ವರ್ಗದವರಿಗೆ ಉಪವಾಸವಿದ್ದರೂ ಮರ್ಯಾದೆಯ ಚಿಂತೆ.

ಇವುಗಳಿಗೆಲ್ಲಾ ಪರಿಹಾರ ವೀರಪ್ಪ ಮೊಯಿಲಿಯವರ ಬಜೆಟ್‌ನಲ್ಲಿ ಕಾಣಬಹುದೇ?

ದೇಶವನ್ನು ಮಾರಬೇಡಿ ....

ಪುಟ 2ರಿಂದ

ಫಾರ್ ಮೊಲಿಕ್ಯೂಲರ್. ಇಮ್ಯೂನೊಲೊಜಿಯ (ಅಂದರೆ ಸೋಂಕು ರಕ್ಷಣಾಶಾಸ್ತ್ರ ವಿಜ್ಞಾನ ಕೇಂದ್ರದ) ನಿರ್ದೇಶಕರಾದ ಶ್ರೀ ಒ.ಎಸ್. ರೆಡ್ಡಿಯವರು ನೀಡುವ ಕೆಳಗಿನ ಉದಾಹರಣೆ ನೋಡಿದರೆ ನಮಗೆ ಇದರ ಗಂಭೀರತೆ ಅರ್ಥವಾಗುತ್ತದೆ.

ಮಾನವನ ದೇಹದಲ್ಲಿನ ಮೇದೋಜೀರಕ ಗ್ರಂಥಿ ಇನ್ಸೂಲಿನ್ ಉತ್ಪಾದಿಸುತ್ತದೆ. ಈ ಇನ್ಸುಲಿನ್ ನಮ್ಮ ರಕ್ತದಲ್ಲಿನ ಸಕ್ಕರೆಯ ಪ್ರಮಾಣವನ್ನು ನಿಯಂತ್ರಿಸುತ್ತದೆ. ಈ ಗ್ರಂಥಿ ಕೆಲಸ ಮಾಡದೆ ಇನ್ಸುಲಿನ್ ಉತ್ಪಾದನೆ ನಿಂತರೆ 'ಸಕ್ಕರೆ ಕಾಯಿಲೆ' ಶುರುವಾಗುತ್ತದೆ. ಈ ಕಾಯಿಲೆಯನ್ನು ಹತೋಟಿಯಲ್ಲಿಡಲು ಕೃತಿಮವಾಗಿ ಇನ್ಸುಲಿನ್ ಅನ್ನು ಮಾತ್ರೆ ಇಂಜೆಕ್ಷನ್ ರೂಪದಲ್ಲಿ ಪಡೆಯಬೇಕಾಗುತ್ತದೆ. ಅಥವಾ ಹೊಸ ತಂತ್ರಜ್ಞಾನದ ಅವಿಷ್ಕಾರದಿಂದಾಗಿ ಜೀವವಾಹಿ ಎಂಜಿನಿಯರಿಂಗ್ ಬಳಸಿ ಬ್ಯಾಕ್ಟೀರಿಯಾಗಳ ಮೂಲಕ ಈ ಇನ್ಸುಲಿನ್ ಅನ್ನು ಉತ್ಪಾದಿಸಬಹುದು. ಆದರೆ ಇಂದು ಜಾಗತಿಕ ಮಟ್ಟದಲ್ಲಿ ಅಮೇರಿಕದ 'ಎಲಿ ಲಿಲ್ಲಿ' ಮತ್ತು ಡೆನ್ಮಾರ್ಕ್‌ನ 'ನೋವಾ' ಈ ಎರಡು ಕಂಪೆನಿಗಳು ಮಾತ್ರ ಈ ಹೊಸ ತಂತ್ರಜ್ಞಾನ ಪಡೆದಿವೆ. ರಶ್ಯಾದಲ್ಲಿ ಈ ತಂತ್ರಜ್ಞಾನ ವಿಫಲವಾಯಿತಂತೆ. ಕ್ಯೂಬಾ ಸಹ ಈ ತಂತ್ರಜ್ಞಾನ ಪಡೆದಿದೆ.

ಈಗ ಡಂಕೆಲ್ ಕರಡನ್ನು ಒಪ್ಪಿಕೊಂಡರೆ ಮೇಲಿನ ಎರಡು ಕಂಪನಿಗಳು ಮಾತ್ರ ಈ ತಂತ್ರಜ್ಞಾನದ ಒಡೆಯರಾಗುತ್ತವೆ. ಯಾಕೆಂದರೆ ಅವು ವಸ್ತು (ಇನ್ಸುಲಿನ್) ಮತ್ತು ವಿಧಾನ ಎರಡೂ ಪೇಟೆಂಟ್‌ಗಳನ್ನು ಪಡೆದಿದ್ದಾರೆ. ತಂತ್ರಜ್ಞಾನದಲ್ಲಿ ನಾವು ಬೇರೆ ವಿಧಾನಗಳನ್ನೂ ಕಂಡು ಹಿಡಿದರೂ ಇನ್ಸುಲಿನ್ ಉತ್ಪಾದನೆ ಮಾಡುವಂತಿರುವುದಿಲ್ಲ. ಅಂದರೆ ಈ ಎರಡು ಕಂಪನಿಗಳ ಗುಲಾಮರಾಗಬೇಕಾಗುತ್ತದೆ. ಪ್ರತಿಯೊಂದು ವಸ್ತುವಿನ ವಿಷಯದಲ್ಲೂ ಹೀಗಾದರೆ ನಮ್ಮ ಸ್ವಾತಂತ್ರ್ಯ ಸಾರ್ವಭೌಮತ್ವ ಇವುಗಳಿಗೆ ಏನಾಗುತ್ತವೆ ನೀವೇ ಯೋಚಿಸಿ.

ಈ ಸಮಸ್ಯೆಗೆ ಯಾರಾದರೂ ಸುಲಭದ ಪರಿಹಾರವೊಂದನ್ನು ಸೂಚಿಸಿಯಾರು. 'ಎಲ್ಲ ವಸ್ತುಗಳಿಗೆ ನಾವೇ ಪೇಟೆಂಟ್ ಪಡೆಯಬಹುದಲ್ಲವೇ' ಎಂದು. ಇದು ಅಷ್ಟು ಸುಲಭವಾಗುವುದಿಲ್ಲ. ಸಾಮ್ರಾಜ್ಯಶಾಹಿಗಳ ಅಪರಿಮಿತ ಬಂಡವಾಳದೊಂದಿಗೆ ಸಾಮಾನ್ಯದವರು ಸ್ಪರ್ಧಿಸಲು ಸಾಧ್ಯವಾಗುವುದಿಲ್ಲ. ಜೊತೆಗೆ ಡಂಕೆಲ್ ಪ್ರಸ್ತಾಪಗಳೂ ಎಲ್ಲ ರೀತಿಯಲ್ಲಿ ಅವರಿಗೆ ಅನುಕೂಲವಾಗೇ ಇವೆ. ಒಂದು ಪೇಟೆಂಟ್ ಪಡೆಯಲು ಕೋಟ್ಯಾನುಗಟ್ಟಲೆ ರೂಪಾಯಿಗಳನ್ನು ವ್ಯಯಿಸಬೇಕಾಗುತ್ತದೆ. ಮತ್ತೆ ಬಲಿಷ್ಠನ ಕಾರುಬಾರೇ ನಡೆಯುವುದು.

ಡಂಕೆಲ್ ಕರಡಿನ ಮೇಲೆ ರಾಜ್ಯ ಮಟ್ಟದ ಚರ್ಚಾಗೋಷ್ಠಿ

ಕರ್ನಾಟಕ ಪ್ರಾಂತ ರೈತ ಸಂಘ ಬೆಂಗಳೂರಿನಲ್ಲಿ ಡಂಕೆಲ್ ಕರಡಿನ ಮೇಲೆ ಚರ್ಚಾಗೋಷ್ಠಿ ಏರ್ಪಡಿಸಿದೆ. ಈ ಚರ್ಚಾಗೋಷ್ಠಿಯಲ್ಲಿ ಭಾಗವಹಿಸಲು ಈ ಕೆಳಗಿನವರನ್ನು ಆಹ್ವಾನಿಸಲು ಉದ್ದೇಶಿಸಲಾಗಿದೆ.

- ಡಾ. ಮಾಧವ ಮೆನನ್, ನಿರ್ದೇಶಕರು, ರಾಷ್ಟ್ರೀಯ ಕಾನೂನು ವಿದ್ಯಾಲಯ
- ಶರಣ ಬಸವೇಶ್ವರ ಅಂಗಡಿ, ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ.
- ಡಾ. ಪ್ರಕಾಶ್ ಸಿ. ರಾವ್, ಎ.ಕೆ.ಜಿ. ಸ್ಮಾರಕ ಸಂಸ್ಥೆ.
- ಕಾಂ. ಜಿ.ಎನ್. ನಾಗರಾಜ್, ಕಾರ್ಯಾಧ್ಯಕ್ಷರು, ಕರ್ನಾಟಕ ಪ್ರಾಂತ ಕೃಷಿ ಕೂಲಿಗಾರ ಸಂಘ

ಅಧ್ಯಕ್ಷತೆ : ಕಾಂ. ಪಿ. ರಾಮಚಂದ್ರರಾವ್ ಅಧ್ಯಕ್ಷರು, ಕರ್ನಾಟಕ ಪ್ರಾಂತ ರೈತ ಸಂಘ
ನಿರ್ವಹಣೆ : ಕಾಂ. ಚಂದ್ರಶೇಖರ ಬಾಳೆ, ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಪ್ರಾಂತ ರೈತ ಸಂಘ,
ಸ್ಥಳ : ಎನ್.ಜಿ.ಒ ಹಾಲ್, ಬೆಂಗಳೂರು
ದಿನಾಂಕ : ಫೆಬ್ರವರಿ 22, 1993 ಸಮಯ : ಮುಂಜಾನೆ 10 ಘಂಟೆ

ಭಾರತ ಕಮ್ಯುನಿಸ್ಟ್ ಪಕ್ಷ ಮಾರ್ಕ್ಸ್‌ವಾದಿ ಪರವಾಗಿ ಮುದ್ರಣ ಮತ್ತು ಪ್ರಕಾಶನ ಪಿ.ರಾಮಚಂದ್ರರಾವ್, ಸಂಪಾದಕೀಯ ಕಚೇರಿ : 12, 18ನೇ ಅಡ್ಡರಸ್ತೆ, ತಾನಪ್ಪ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು-560 027. ಫೋನ್ ನಂ. : 236462
ಸಂಪಾದಕರು : ಪಿ.ರಾಮಚಂದ್ರರಾವ್